1. ಶ್ರೀ ಜೆ.ಹೆಚ್. ಪಟೇಲ್ ಸರ್ಕಾರದ ಮೇಲೆ ಅವಿಶ್ವಾಸ ನಿರ್ಣಯ ಮೇಲಿನ ಚರ್ಚೆ (ಮುಂದುವರಿದ ಚರ್ಚೆ)

+ಶ್ರೀ. ಬಿ. ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷರೆ, ತಮ್ಮಲ್ಲಿ ಒಂದೇ ಒಂದು ವಿನಂತಿ ' ಏನೆಂದರೆ, ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆಯಾಗಬೇಕೆಂದು, ತಮ್ಮ ಕೊಠಡಿಯಲ್ಲಿ ಎಲ್ಲಾ ಮಾತನಾಡಿ ತಾವು ಒಪ್ಪಿಕೊಂಡಿರಿ ನಾವುಗಳೆಲ್ಲರೂ ಬಂದಿದ್ದೆವು. ನಿನ್ನೆ ದಿವಸ ಇದಕ್ಕಾಗಿಯೇ ರಾಜ್ಯದ ಎಲ್ಲಾ ಭಾಗಗಳಿಂದಲೂ ಸಹ ನಾವುಗಳು ಬಂದಿದ್ದೇವೆ. ನಾವು ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 12 ಗಂಟೆಯವರೆಗೆ ಕುಳಿತು ಕೊಂಡು ಚರ್ಚೆಯನ್ನು ಮಾಡುವುದಕ್ಕೆ ನಿನ್ನೆಯ ದಿವಸವೂ ಸಹ ನಾವುಗಳು ಸಿದ್ಧರಿದ್ದೆವು. ನಾವುಗಳೆಲ್ಲರೂ ಹೊರಗಡೆಯಿಂದ ಬಂದರೂ ಸಹ ಬೆಳಿಗ್ಗೆ 10 ಗಂಟೆಯ ವೇಳೆಗೆ ಸದನದಲ್ಲಿಯೇ ಇದ್ದೆವು. ದಯಮಾಡಿ ಇವೊತ್ತು 5-6 ಗಂಟೆಗಳ ಕಾಲಚರ್ಚೆಯಾದ ನಂತರ ಉತ್ತರವನ್ನು ಕೊಡಲಿ, ಅನೇಕ ಸದಸ್ಯರುಗಳು ಅನೇಕ ಪ್ರಮುಖವಾದಂತಹ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡುವವರಿದ್ದಾರೆ. ನಮ್ಮ ಉದ್ದೇಶ 'ಏನಿದೆ, ಅನೇಕ ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದು ಅವರನ್ನು ಕನ್‌ವಿನ್ಸ್ ಮಾಡಿ, ಓಟಿಂಗ್‌ಗೂ ಅವಕಾಶ ಮಾಡದೇ ಅವರು ರಾಜೀನಾಮೆಯನ್ನು ಕೊಟ್ಟು ಹೋಗುತ್ತೇವೆ ಎಂದು ಹೇಳುವಂತಹ ಸ್ಥಿತಿಗೆ ತರುವಷ್ಟು ಮೆಟೀರಿಯಲ್ಸ್ ನಮ್ಮ ಹತ್ತಿರ ಇದೆ. ಅದಕ್ಕಾಗಿ ನಮ್ಮ ತಮ್ಮಲ್ಲಿ ವಿನಂತಿಯನ್ನು ಮಾಡುವುದು ಇಷ್ಟೆ, ಮುಖ್ಯಮಂತ್ರಿಗಳು ಬಂದ ನಂತರ ಅವರನ್ನು ಕರೆಯಿಸಿ ಮಾತನಾಡೋಣ, ಅವರು 5 ಗಂಟೆಯ ನಂತರ ಅಥವಾ 6 ಗಂಟೆಯ ನಂತರ ಉತ್ತರವನ್ನು ಕೊಡಲಿ, ಅಲ್ಲಿಯವರೆಗೆ ಮಾತನಾಡಲಿಕ್ಕೆ ಸಮಯವನ್ನು ನಿಶ್ಚಯವನ್ನು ಮಾಡಿ. ನಿಗಧಿ ಮಾಡಿದಂತಹ ಸಮಯದಲ್ಲಿ ನಮ್ಮ ಪಕ್ಷದವರು 4-5 ಜನರು ಮಾತನಾಡುವವರು ಇದ್ದಾರೆ. ದಯಮಾಡಿ ಇದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಅತ್ಯಂತ ವಿನಂತಿಯನ್ನು ಮಾಡುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ತಾವು ಯಾವ ರೀತಿಯಲ್ಲಿ ಹೇಳುತ್ತೀರೋ ಆ ರೀತಿಯಲ್ಲಿ ನಾವುಗಳು ಚಾಚೂತಪ್ಪದೇ ನಡೆದುಕೊಳ್ಳುತ್ತೇವೆ. ಇಷ್ಟು ಒಳ್ಳೆಯ ರೀತಿಯಲ್ಲಿ ಸದನವನ್ನು ನಡೆಸಿಕೊಡುತ್ತಿದ್ದೀರಿ. ಅದಕ್ಕೆ ಪೂರ್ಣ ಸಹಕಾರವನ್ನು ಕೊಡುತ್ತೇವೆ. ನೀವು ಹೇಳಿದಂತೆಯೂ ಸಹ ನಾವುಗಳು ನಡೆದುಕೊಳ್ಳುವುದಕ್ಕೆ ಸಿದ್ಧರಿದ್ದೇವೆ. ತಮಗೆ ಗೊತ್ತಿರುವಂತೆ ಪತ್ರಿಕೆಯನ್ನು ನೋಡಿ, ಆಲಮಟ್ಟಿಯ ಬಗ್ಗೆ ಇವೊತ್ತು 29ನೇ ಮತ್ತು 30ನೇ ತಾರೀಖಿನಂದು 4 ಜನ ಮುಖ್ಯಮಂತ್ರಿಗಳು ಬರುತ್ತಾರೆಂದು ಪತ್ರಿಕೆಗಳಲ್ಲಿ ಬಂದಿದೆ. ಬಹುಶಃ ಬಹಳ ದೊಡ್ಡ ಗಂಡಾಂತರ ಕಾದಿದೆ. ಒಂದು ದೊಡ್ಡ ಕರಾಳ ದಿನವನ್ನು ತಾವುಗಳು ಆಚರಣೆಯನ್ನು ಮಾಡಬೇಕಾಗುತ್ತದೆ. ದೊಡ್ಡ ಒಂದು ಗಡಿಬಿಡಿಯಾಗುವಂತಹ ಸಂದರ್ಭ ಇದೆ. ಅದರ ಬಗ್ಗೆ ಪರಿಸ್ಥಿತಿಯು ವಿಕೋಪಕ್ಕೆ ಹೋಗುತ್ತಿದೆ. ' ಏಕೆಂದರೆ ಅವರು ಬರುವುದಿಲ್ಲವೆಂದು ಹೇಳಿದ್ದರು, ಅವರುಗಳಿಗೆ ಕರ್ನಾಟಕಕ್ಕೆ ಬಂದು ಆಲಮಟ್ಟಿಯ ವಿಷಯದಲ್ಲಿ ತೀರ್ಮಾನವನ್ನು ಮಾಡುವ ಅಧಿಕಾರವೇ ಇಲ್ಲ. ಆ ಮುಖ್ಯಮಂತ್ರಿಗಳು ಈ ವಿಷಯವನ್ನು ಚರ್ಚೆ ಮಾಡಲು ಬರುವುದಾದರೆ ಅವರು ಯಾರು ಸ್ವಾಮಿ ಕರ್ನಾಟಕಕ್ಕೆ ಬರುವುದಕ್ಕೆ? ಆಲಮಟ್ಟಿಗೆ ಅವರುಗಳು ಹೋದರೆ ಕರಾಳ ದಿನವನ್ನು ಆಚರಣೆ ಮಾಡಬೇಕಾಗುತ್ತದೆ, ಅವರ ಬೆನ್ನು ಹತ್ತಬೇಕಾಗುತ್ತದೆ. ಅದಕೋಸ್ಕರವಾಗಿ........

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಉಪಾಧ್ಯಕ್ಷರೆ, ನನ್ನ ಮನವಿ ಏನೆಂದರೆ, ಇವೊತ್ತು ನಾವುಗಳು ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆಯನ್ನು ಮಾಡಬೇಕೆಂದು ಈ ಸದನವನ್ನು ಕರೆದಿರುವದು. ಅದಕ್ಕೆ ಇವೊತ್ತು ಪೂರ್ಣ ದಿವಸ ಇದರ ಬಗ್ಗೆ ಚರ್ಚೆ ನಡೆಯಲ್ಲಿ, ನಾಳೆ ಮುಂಜಾನೆ ಆಡಳಿತ ಪಕ್ಷದವರು ಉತ್ತರವನ್ನು ಬೇಕಾದರೆ ಕೊಡಲಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಉಪಾಧ್ಯಕ್ಷರೆ, ನಿಮಗೆ ಗೊತ್ತಿಲ್ಲ, ಇವೊತ್ತು ಆಲಮಟ್ಟಿಯ ಬಗ್ಗೆ ಅವರೇ ಹೇಳಿದ್ದಾರೆ , ಸುಮಾರು 4 ದಿವಸಗಳ ಕಾಲ ಎಕ್ಸ್‌ಪರ್ಟ್ ಕಮಿಟಿಯವರು ಟೂರ್ ಮಾಡುತ್ತಾರೆ. ಎನ್ನುವುದು ಇವೊತ್ತಿನ ಪೇಪರನಲ್ಲಿಯೂ ಸಹ ಬಂದಿದೆ. ಈ ಎಕ್ಸ್‌ಪರ್ಟ್ ಕಮಿಟಿಗೆ ಸ್ಯಾಂಕ್ಟಿಟಿನೇ ಇಲ್ಲ, ಪುನಃ ಅವರು ಕಳುಹಿಸತಕ್ಕಂತಹ ಪ್ರಯತ್ನವನ್ನು ಮಾಡಿದರೆ, ನಾಳೆ ನಮಗೆ ಗೊಂದಲವಾಗುತ್ತದೆ. ನೀವು ನಮ್ಮ ರಾಜ್ಯದ ಹಿತವನ್ನು ನೋಡಿ ಬೇಕಾದರೆ ಇವೊತ್ತೆ ಉತ್ತರವನ್ನು ಕೊಡಿ. ನಾವು ಕೊನೆಯ ಪಕ್ಷ ಏನು ಹೇಳಬೇಕೆಂದು ಇದ್ದೇವೆ ಅದನ್ನು ಹೇಳುತ್ತೇವೆ. ಟೈಮ್ ಏನಾಗಿದೆ? ನೀವು ಎಲ್ಲಿಯವರೆಗೆ ತಪ್ಪುಗಳನ್ನು ಮಾಡುತ್ತಿರುತ್ತೀರಿ ಅಲ್ಲಿಯವರೆಗೆ ನಾವುಗಳು ಹೇಳುತ್ತಲೇ ಇರಬೇಕಾಗುತ್ತದೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ :- ಮಾನ್ಯ ಉಪಾಧ್ಯಕ್ಷರೆ, 4 ಜನ ಮುಖ್ಯಮಂತ್ರಿಗಳು ಕರ್ನಾಟಕಕ್ಕೆ ಬರುವುದಕ್ಕೆ ಅವರುಗಳು ಯಾರು ಸ್ವಾಮಿ ? ಯಾರು ಬೇಕಾದರೂ ಬರಬಹುದು ಎನ್ನುವುದಕ್ಕೆ . ಕರ್ನಾಟಕ ಏನು ಧರ್ಮದ ಛತ್ರನಾ ? ಅವರಿಗೆ ಏನು ಲೀಗಲ್ ರೈಟ್ಸ್ ಇದೆ ? ಯಾವುದು ಎಕ್ಸ್‌ಪರ್ಟ್ ಕಮಿಟಿ ?

(ಗೊಂದಲ)

ಶ್ರೀ ಚಂದ್ರಕಾಂತ ಬೆಲ್ಲದ್ :- ಮಾನ್ಯ ಉಪಾಧ್ಯಕ್ಷರೆ, ಇವೊತ್ತು ಬಹಳ ಪ್ರಮುಖ್ಯವಾದಂತಹ ವಿಷಯಗಳು ಇವೆ, ಆದುದರಿಂದ ಅವರೆಲ್ಲರಿಗೂ ಮಾತನಾಡಲಿಕ್ಕೆ ಅವಕಾಶವನ್ನು ಕೊಡಿ, ನಾಳೆಯ ದಿವಸ ಸರ್ಕಾರದವರು ಉತ್ತರವನ್ನು ಕೊಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಿ, ನಾಳೆಯ ದಿವಸಬೇಕಾದರೆ ಅವರು ಉತ್ತರವನ್ನು ಕೊಡಲಿ.

ಉಪಾಧ್ಯಕ್ಷರು : - ಸರ್ಕಾರದ ಪರವಾಗಿ ನಾನು ಕೇಳಬೇಕಾಗುತ್ತದೆ. ನೀವು ಹೇಳಿದ ಕೂಡಲೇ ಹೇಳುವುದಕ್ಕೆ ಅಗುವುದಿಲ್ಲ .

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನೀವು ಹೇಳಿದಂತೆ ನಾವುಗಳು ಕೇಳುತ್ತೇವೆ, ನೀವು ಹೇಳಿದ್ದನ್ನು ಅವರುಗಳೂ ಸಹ ಕೇಳುತ್ತಾರೆ. ನಾವುಗಳು ಇಬ್ಬರು ಕೇಳಬೇಕು. ಆದರಿಂದ ಅವಕಾಶವನ್ನು ಮಾಡಿಕೊಡಿ.

ಶ್ರೀ ಸಿ . ಭೈರೇಗೌಡ :- ಮಾನ್ಯ ಉಪಾಧ್ಯಕ್ಷರೆ, ಸಭೆಯಲ್ಲಿ ಯಾವ ರೀತಿಯಲ್ಲಿ ನಡೆಯಬೇಕು ಎನ್ನುವುದಕ್ಕೆ ನಿಯಮಾವಳಿ ಇದೆ. ಅವಿಶ್ವಾಸ ನಿರ್ಣಯದ ಮೇಲೆಯೂ ಯಾವ ರೀತಿಯಲ್ಲಿ ನಡೆಯಬೇಕು ಎನ್ನುವುದಕ್ಕೂ ಸಹ ನಿಯಮಾವಳಿಗಳು ಇದೆ. ದಯವಿಟ್ಟು ನಿಯಮಾವಳಿಯ ಪ್ರಕಾರವಾಗಿ ತಾವು ಸದನವನ್ನು ನಡೆಸುವಂತೆ ವ್ಯವಸ್ಥೆಯನ್ನು ಮಾಡಿ.

ಉಪಾಧ್ಯಕ್ಷರು :- ನಿಯಮಾವಳಿಯ ಪ್ರಕಾರವಾಗಿಯೇ ಹೋಗುವುದು.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷರೆ, ನಾನು ತಮ್ಮಲ್ಲಿ ಮನವಿಯನ್ನು ಮಾಡುವುದೇನೆಂದರೆ, ಇದು ನೆನ್ನೆಯ ದಿವಸ ಮತ್ತು ಈ ಎರಡು ದಿನಗಳನ್ನು ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ ಎಂದು ನಿಗಧಿಯನ್ನು ಮಾಡಿರುತ್ತೀರಿ. ಆದರೆ ನನ್ನದು ಒಂದು ಮನವಿ, ತಾವು ಮತ್ತು ಸರ್ಕಾರದವರು ಇದನ್ನು ಪ್ರತಿಷ್ಠೆಯ ಪ್ರಶ್ನೆ ಎಂದು ತಿಳಿದುಕೊಳ್ಳಬೇಕಾಗಿಲ್ಲ. ನಾಳೆಯ ಬೆಳ್ಳಿಗೆ 9 ಗಂಟೆಗೆ ಸರ್ಕಾದವರು ಉತ್ತರವನ್ನು ಕೊಡಲಿ, ಇದರಿಂದ ಆಕಾಶ ಏನೂ ಕಳಚಿ ಬೀಳುವುದಿಲ್ಲ.

(ಗೊಂದಲ)

ಮಾನ್ಯ ಸದಸ್ಯರು :- ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ 45 ದಿವಸಗಳು ನಡೆದಿದೆ. ತಾವು ದಯವಿಟ್ಟು ಇದಕ್ಕೆ ಅವಕಾಶವನ್ನು ಮಾಡಿಕೊಡಬೇಡಿ.

+ಶ್ರೀ ಯು. ಆರ್. ಸಭಾಪತಿ (ಉಡುಪಿ):- ಮಾನ್ಯ ಉಪಾಧ್ಯಕ್ಷರೆ, ನಾನು ನಿನ್ನೆಯ ದಿವಸ ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆಯನ್ನು ಮಾಡುತ್ತಿರುವಂತಹ ವೇಳೆಯಲ್ಲಿ ಮೀನುಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ, ಇಲಾಖೆಯ ಅಧಿಕಾರಿಗಳ ಒಂದು ನಿರ್ಲಕ್ಷ್ಯತನದಿಂದಾಗಿ ಸರ್ಕಾರದ ಆಡಳಿತ ಕುಸಿದು ಹೋಗಿದೆ. ಬಡ ಮೀನುಗಾರಿಗೆ ಸಿಗುವಂತಹ ಸೌಲಭ್ಯದಲ್ಲಿ ಮೀನುಗಾರರು ವಂಚಿತರಾಗಿದ್ದಾರೆಂದು ಹೇಳಿಕೆಯನ್ನು ಕೊಡುತ್ತಾ ಅನೇಕ ವಿಚಾರಗಳನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಇವೊತ್ತು ಬಡ ಮೀನುಗಾರರಿಗೆ ಕೇಂದ್ರ ಪುರಸ್ಕೃತ ಯೋಜನೆಯಲ್ಲಿ ಮನೆಗಳನ್ನು ಕಟ್ಟುವಂತಹ ಯೋಜನೆಗಳಿವೆ. 1994 - 95 ರಲ್ಲಿ 402 ಮನೆಗಳನ್ನು ಕಟ್ಟಲು ಮಂಜೂರಾತಿಯಾಗಿತ್ತು. 1995-96ರಲ್ಲಿ 710 ಮನೆಗಳನ್ನು ಕಟ್ಟಲು ಮಂಜೂರಾತಿಯಾಗಿತ್ತು. ಇದಕ್ಕೆ ಕೇಂದ್ರ ಸರ್ಕಾರದವರು ಮಂಜೂರಾತಿಯನ್ನು ನೀಡಿದ್ದರೂ ಸಹಿತ ನಿರ್ಮಾಣದ ಕಾರ್ಯವು ಕಾಗದದ ಮೇಲೆ ಮಾತ್ರ ಉಳಿಯಿತು. ನೆಲದ ಮೇಲೆ ಈ ಯೋಜನೆ ಬರಲೇ ಇಲ್ಲ. ಆಮೇಲೆ ಇದಕ್ಕಿಂತಲೂ ಮೊದಲು ಮಂಜೂರಾದ ಮನೆಗಳೆಲ್ಲಾ

ಅಪೂರ್ಣವಾದಂತಹ ಹಂತದಲ್ಲಿಯೇ ಇದೆ. ಆದರೆ ಮಾನ್ಯ ಸಚಿವರು ಇದರ ಬಗ್ಗೆ ಯಾವ ರೀತಿಯಲ್ಲಿ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ ಎನ್ನುವುದು ಇನ್ನೂ ನನಗೆ ಸ್ಪಷ್ಟವಾಗಿಲ್ಲ. ಇನ್ನು ಈ ರಾಜ್ಯದಲ್ಲಿ ಬಡ ಮೀನುಗಾರರು ಇರುವುದು ಕೇವಲ ಮೂರು ವಿಧಾನಸಭಾ ಕ್ಷೇತ್ರಗಳಲ್ಲಿ ಮಾತ್ರ . ಒಂದು ಹೊಳೇನರಸೀಪುರ, ರಾಮನಗರದಲ್ಲಿ , ಇನ್ನೊಂದು ಶ್ರೀನಿವಾಸಪುರದಲ್ಲಿ, ಮತ್ತೊಂದು ಬ್ರಹ್ಮಾವರದಲ್ಲಿ ಇದು ಬಿಟ್ಟರೆ ಬಾಕಿ ಭಾಗದಲ್ಲಿ ಮೀನುಗಾರರೇ ಇಲ್ಲ. ನಾನು ಇದನ್ನು ಏಕೆ ಸ್ಪಷ್ಟವಾಗಿ ಹೇಳುತ್ತಿದ್ದೇನೆಂದರೆ, ಮಾನ್ಯ ಮೀನುಗಾರಿಕೆಯ ಸಚಿವರು ಈ ರಾಜ್ಯದ ಸಚಿವರು, ಅವರು ರಾಜ್ಯಕ್ಕೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕಾಗಿತ್ತು. ರಾಜ್ಯದಲ್ಲಿ ಲಕ್ಷೋಪಲಕ್ಷ ಮೀನುಗಾರರು ಇರಬಹುದು. ನಾನು ಇಲ್ಲವೆಂದು ಹೇಳುವುದಿಲ್ಲ. ಕೇಂದ್ರ ಸರ್ಕಾರದವರು 1995-96ನೇ ಸಾಲಿಗೆ 2-4-1996ಕ್ಕೆ ಒಂದು ಆದೇಶವನ್ನು ಕಳುಹಿಸಿ 440 ಮನೆಗಳನ್ನು ಕಟ್ಟಲು ಮಂಜೂರಾತಿಯನ್ನು ಮಾಡಿದೆ. ಈ 440 ಮನೆಗಳ ಮಂಜೂರಾತಿಯಲ್ಲಿ ಹೊಳೇನರಸೀಪುರದ ರಾಮನಗರಕ್ಕೆ 100ಮನೆಗಳು, ಶ್ರೀನಿವಾಸಪುರಕ್ಕೆ 60 ಮನೆಗಳು, ಮತ್ತು ಬ್ರಹ್ಮಾವರಕ್ಕೆ 80 ಮನೆಗಳು, ಬಾಕಿ ಉಳಿದ ಎಲ್ಲಾ ಕಡೆಗಳಿಗೂ ಹತ್ತು, ಹತ್ತು ಮನೆಗಳನ್ನು ವಿಂಗಡಿಸಿದ್ದಾರೆ. ನಾನು ಇಷ್ಟೇ ಹೇಳುವುದು. ರಾಜಕೀಯ ಪ್ರಭಾವಿತರಾಗಿ ಮಾಡಿರಬಹುದು, ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಮಾನ್ಯ ಸಚಿವರೆ ಆಗಲಿ, ಬೇರೆ ಯಾರೇ ಆಗಲಿ 440 ಮನೆಗಳನ್ನು ಸಮಾನವಾಗಿ ಎಲ್ಲೆಲ್ಲಿ ಮೀನುಗಾರರು ಇದ್ದಾರೆ, ಅಲ್ಲಿಗೆ ಹಂಚಿ. ಇಡೀ ನಮ್ಮ ಜಿಲ್ಲೆಯಲ್ಲಿ 14 ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 10 ವಿಧಾನಸಭಾ ಕ್ಷೇತ್ರದಲ್ಲಿ. ಕರಾವಳಿ ಉದ್ದಕ್ಕೂ ಮೀನುಗಾರರ ಸಂಖ್ಯೆ ಇದೆ. ಕೇವಲ ಬ್ರಹ್ಮಾವರಕ್ಕೆ ಮಾತ್ರ ಸೀಮಿತವಾಗಿಲ್ಲ. ಇದನ್ನು ಹೊಳೇನರಸೀಪುರವಾಗಲಿ, ಶ್ರೀನಿವಾಸಪುರಕ್ಕೆ ಆಗಲಿ ಕೊಡಲಿ, ನಾನು ಬೇಡವೆಂದು ಹೇಳುವುದಿಲ್ಲ. 1000 ಮನೆಗಳನ್ನು ಮಂಜೂರಾತಿಯನ್ನು ಮಾಡಿಸಿಕೊಂಡು ಬಂದು ಎಲ್ಲರಿಗೂ ಹಂಚುವಾಗ ಸರಿಯಾಗಿ ಒಂದು ಪಟ್ಟಿಯನ್ನು ಮಾಡಿ ಹಂಚಲಿ. ಬಂದಿದ್ದೇ 440 ಮನೆಗಳಿಗೆ ಮಂಜೂರಾತಿ, ಅದರಲ್ಲಿ ಹೊಳೇನರಸೀಪುರಕ್ಕೆ ರಾಮನಗರಕ್ಕೆ 100 ಮನೆಗಳು ಒಟ್ಟಿಗೆ. ಶ್ರೀನಿವಾಸಪುರಕ್ಕೆ 60 ಮನೆಗಳು, ಇವರ ಒಂದೇ ಕ್ಷೇತ್ರವಾದ ಬ್ರಹ್ಮಾವರಕ್ಕೆ ಕ್ಷೇತ್ರಕ್ಕೆ 100 ಮನೆಗಳನ್ನು ಕೊಡುವುದಿದ್ದರೆ, ಇದರಲ್ಲಿ ಪಕ್ಷಪಾತವನ್ನು ತೋರಿಸಿದ ಹಾಗೆ ಆಗುವುದಿಲ್ಲವೇ? ಇವರು ಏನು ಪಕ್ಷಪಾತವನ್ನು ಮಾಡಿದ್ದಾರೆಂದು ಹೇಳುವುದಕ್ಕೆ ಮತ್ತು ಸ್ಪಷ್ಟಪಡಿಸುವುದಕ್ಕೆ ಏನು ಆದೇಶ ಬಂದಿದೆ ಅದನ್ನು ನೋಡಿ ನನಗೆ ದಿಗ್ಭ್ರಮೆ ಆಗಿದೆ. ಇದರ ಬಗ್ಗೆ ನಾನು ಹೇಳುತ್ತಿದ್ದೇನೆ. ಆಮೇಲೆ ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಯಾವ ರೀತಿಯ ಮಾರ್ಗದರ್ಶಿಯನ್ನು ಉಪಯೋಗಿಸಿಕೊಂಡಿದ್ದಾರೆಂಬುದನ್ನು ಅವರು ಸ್ಪಷ್ಟಪಡಿಸಬೇಕು. ಇನ್ನು ಕೇಂದ್ರ ಪುರಸ್ಕೃತ ಯೋಜನೆಯಲ್ಲಿ ರಾಜ್ಯದ ಮೀನುಗಾರರಿಗೆ, ಮೀನುಗಾರರಿಕೆಯ ದೋಣಿಗೆ ಬಳಸತಕ್ಕಂತಹ ಡಿಸೇಲಿಗೆ ಕೇಂದ್ರ ಸರ್ಕಾರದವರು ಸಬ್ಸಿಡಿಯನ್ನು ಕೊಡುವಂತಹ ಯೋಜನೆ ಇದೆ. 1995-96ನೇಯ ಸಾಲಿನಲ್ಲಿ ಇವರು ಸಬ್ಸಿಡಿಯನ್ನು ವಿತರಣೆಯನ್ನು ಮಾಡಲೇ ಇಲ್ಲ.

ಇವೊತ್ತು ಡೀಸೆಲಿನ ಬೆಲೆಯನ್ನು ಒಂದು ಕಡೆಯಲ್ಲಿ ಹೆಚ್ಚಿಸಿದ್ದಾರೆ, ಮತ್ತೊಂದು ಕಡೆ ಡೀಸೆಲ್ ಮೇಲೆ ಮೀನುಗಾರರಿಗೆ ಏನು ಸಿಗತಕ್ಕಂತಹ ಸಹಾಯಧನವಿದೆ, ಅದನ್ನೂ ಕೂಡ ಕೊಡದೇ ಇವೊತ್ತು ಏನಾಗಿದೆ ಎಂದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಮ್ಮ ಅನೇಕ ಮೀನುಗಾರರ ಸಹಕಾರಿ ಸಂಘಗಳು ಸಬ್ಸಿಡಿಯು ಬರುತ್ತದೆಂದು ತಿಳಿದುಕೊಂಡು ಸಾಲದ ರೂಪದಲ್ಲಿ ಡೀಸೆಲ್‌ನ್ನು ವಿತರಣೆಯನ್ನು ಮಾಡಿದ್ದಾರೆ.

ಲಾಭದಲ್ಲಿ ನಡೆಯುತ್ತಿದ್ದಂಥ ಅನೇಕ ಸಹಕಾರ ಸಂಘಗಳು ಡೀಸೆಲ್ ಮೇಲಿನ ಬೆಲೆ ಏರಿಕೆ ಮತ್ತು ಡೀಸೆಲ್ ಮೇಲಿನ ಸಹಾಯ ಧನವನ್ನು ವಿತರಣೆ ಮಾಡದೇ ಇದ್ದುದರಿಂದ ಸಾಲರೂಪದಲ್ಲಿ ಕೊಟ್ಟಂಥ ಡೀಸೆಲ್ ಏನಿದೆ ಅದಕ್ಕೆ ಹಣ ಬಾರದೆ ಈ ಸಂಘಗಳೆಲ್ಲಾ ಇವತ್ತು ದಿವಾಳಿಯ ಹಂಚಿನಲ್ಲಿ ಬಂದಿವೆ. ನಾನಾದರೂ ನಿಮ್ಮನ್ನು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ; ಕೇಂದ್ರ ಸರ್ಕಾರದ ಪುರಸ್ಕೃತ ಸ್ಕೀಂ ಇದ್ದರೂ ಕೂಡ ಏತಕ್ಕೆ ಕೊಡಲಿಲ್ಲ? ಇನ್ನೊಂದು ಮಾತನ್ನು ಹೇಳುವುದಾದರೆ, ಒಳನಾಡು ಕೆರೆ, ಜಲಾಶಯಗಳನ್ನು ಇನ್‌ಲ್ಯಾಂಡ್ ಮೀನುಗಾರಿಕೆಗೆ ಕೊಡುವಂಥ ಸ್ಕೀಂ ಇದೆ. ಮೀನುಗಾರರಲ್ಲದಂಥ ಜನರು ಮಾಡಿಕೊಂಡಂಥ ಕೋ-ಆಪರೇಟಿವ್ ಸೊಸೈಟಿಗಳು ಏನಿದೆ ಅವರಿಗೆ ಕೊಡುವುದಕ್ಕೆ ಶುರು ಮಾಡಿದ್ದಾರೆ. ಈಗ ಒಂದು ಹೊಸ ಹವ್ಯಾಸ ಶುರುವಾಗಿದೆ. ಮೀನುಗಾರರ ಕೋ-ಆಪರೇಟಿವ್ ಸೊಸೈಟೀಸ್ ಏನಿವೆ ಅವುಗಳಿಗೆ ಈ ಕೆರೆಗಳನ್ನು ಲೀಸ ಕೊಡುವಂಥ ಪದ್ಧತಿ ಇದೆ. ಆದರೆ ಅದನ್ನು ಬಿಟ್ಟು ಬೇರೆ ಯಾರೋ ಸೇರಿಕೊಂಡು ರಾಜಕೀಯ ಪ್ರಭಾವ ಪೀಡಿತವಾಗಿ ಒಂದು ಕೋ-ಆಪರೇಟಿವ್ ಸಂಘವನ್ನು ಮಾಡಿಕೊಂಡವರಿಗೆ ಇವರು ಪರವಾನಗಿಯನ್ನು ಕೊಡುವುದಾದರೆ ಇದು ಸ್ವಜನಪಕ್ಷಪಾತವಲ್ಲವೆ? ಹೀಗಾದರೆ ಇವರಮೇಲೆ ನಾವು ಹೇಗೆ ವಿಶ್ವಾಸವನ್ನು ಇಟ್ಟುಕೊಳ್ಳಬೇಕು? ನಾನಾದರೂ ಹೇಳುತ್ತೇನೆ. ಯಾವುದೇ ಒಂದು ಕೆರೆ ಅಥವಾ ಜಲಾಶಯವನ್ನು ಗುತ್ತಿಗೆಗೆ ಕೊಡಬೇಕಾದರೆ ಅದಕ್ಕೆ ಒಂದು ನೂತನ ಮಾರ್ಗದರ್ಶಿಯನ್ನು ರೂಪಿಸುವುದಾಗಿ ಎಲ್ಲಕಡೆಯಲ್ಲೂ ಹೇಳಿಕೊಂಡು ಪತ್ರಿಕೆಗಳಿಗೂ ಹೇಳಿಕೆಗಳನ್ನು ಕೊಟ್ಟಿದ್ದಾರೆ. ನೀವು ರೂಪಿಸಲಿರುವ ಆ ಮಾರ್ಗದರ್ಶಿ ಏನೆಂಬುದನ್ನು ತಾವು ದಯವಿಟ್ಟು ಹೇಳಬೇಕು. ಇವತ್ತು ಹೇಗಿದೆ ಎಂದರೆ ಬೀದರ್‌ನಿಂದ ಯಾರೋ ಒಬ್ಬ ಅಧಿಕಾರಿ ಪ್ರಸ್ತಾವನೆಯನ್ನು ಕಳುಹಿಸಿ ವಿಧಾನ ಸೌಧದಲ್ಲಿ ಅದಕ್ಕೆ ಅಪ್ರೂವಲ್ ಕೊಡಿಸುವಂಥ ನಿಯಮಾವಳಿಯನ್ನು ತಾವು ಈಗಾಗಲೇ ತಂದಿದ್ದೀರಿ. ಇದರಿಂದಾಗಿ ಅಧಿಕಾರಿಗಳಲ್ಲೂ ಒಂದುರೀತಿಯ ನಿರ್ಲಕ್ಷ್ಯತನ, ಬೇಜವಾಬ್ದಾರಿತನ ; ಇನ್ನೊಂದುಕಡೆ ಜನರೂ ಕೂಡ ಇದನ್ನು ದುರುಪಯೋಗ ಯಾವರೀತಿ ಮಾಡುತ್ತಾರೆಂದರೆ, ಇತ್ತೀಚೆಗೆ ರಚಿತವಾದ ಒಂದು ಸಂಘಕ್ಕೆ ಮೈಸೂರು ಜಿಲ್ಲೆಯ ಎಣ್ಣೆಹೊಳೆಯಲ್ಲಿ ಒಂದು ಕೆರೆಯನ್ನು ಲೀಸ್‌ಗೆ ನೀಡಲಾಗಿದೆ. ಕಾರಿನಲ್ಲಿ ಓಡಾಡುವಂಥ ಒಬ್ಬ ಡಾಕ್ಟರ್‌ರವರ ಹೆಂಡತಿ ಅಧ್ಯಕ್ಷಿಣಿಯಾಗಿರುವಂಥ ಒಂದು ಮಹಿಳಾ ಸಂಘ. ಇದಕ್ಕೆ ಏತಕ್ಕಾಗಿ ಕೊಟ್ಟರು ? ಇದರ ಉದ್ದೇಶವಾದರೂ ಏನು ? ಇದರಲ್ಲಿ ಆಗಿರುವಂಥ ಅವ್ಯವಹಾರಗಳೇನು ಎಂಬುದನ್ನು ಅವರು ಹೇಳಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಡಾ: ಜಯರಾಮ್ ಎನ್ನುವವರು 9

ವರ್ಷಗಳಕಾಲ ಅನಧಿಕೃತವಾಗಿ ಗೈರುಹಾಜರಾಗಿದ್ದರು. ಹಿಂದಿನ ಸರ್ಕಾರ ಇದರ ಬಗ್ಗೆ ತನಿಖೆ ನಡೆಸಲು ಆದೇಶ ಹೊರಡಿಸಿದ್ದರು. ಆದರೆ ಆ ವ್ಯಕ್ತಿಯನ್ನು ಹಿಂದಕ್ಕೆ ಕರೆಸಿಕೊಂಡು ಅವರಿಗೆ ಬಡ್ತಿ ಕೊಡುವಂತೆ ಆದೇಶವನ್ನು ಇವರು ಕೊಟ್ಟಿದ್ದಾರೆ. ಇದು ಸರಿಯೇ ? ಈ ರೀತಿಯ ಅವ್ಯವಹಾರಗಳನ್ನು ನೀವು ಮಾಡಿದ್ದೀರೆಂಬುದೇ ನನ್ನ ಮುಖ್ಯವಾದ ಆರೋಪ.

ಮಾನ್ಯ ಉಪಾಧ್ಯಕ್ಷರೆ, ನನಗೆ 10- 15 ನಿಮಿಷದಲ್ಲಿ ಮಾತನಾಡಿ ಮುಗಿಸುವುದಕ್ಕೆ ಸಾಧ್ಯವಿಲ್ಲ. ನನಗೆ ಕಾಲಾವಕಾಶ ಇಲ್ಲದ್ದರಿಂದ ನನ್ನ ಭಾಷಣದ ವೇಗವನ್ನು ಜಾಸ್ತಿ ಮಾಡಬೇಕಾಗಿದೆ. ಒಂದು ಮಾತನ್ನು ಹೇಳುವುದಾದರೆ ಇವತ್ತು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂ.ಆರ್.ಪಿ.ಎಲ್. ಒಂದು ದೊಡ್ಡ ಗ್ರಹಚಾರವಾಗಿದೆ. ಇದು ನಮಗೆ ಪ್ರತಿನಿತ್ಯ ಸಂಕಟ. ಒಂದು ಕಡೆ ಉದ್ಯೋಗವನ್ನು ನೀಡದೇ ಇರುವುದು, ಇನ್ನೊಂದು ಕಡೆ ಇನ್ನೊಂದು ರೀತಿಯ ಸಂಕಟ. ನಮ್ಮಲ್ಲಿ ಪೈಪ್‌ಲೈನ್‌ನ್ನು ಹಾಕುವುದರಲ್ಲಿ ಆದಂಥ ಅವಾಂತರಗಳ ಬಗ್ಗೆ ನಾನು ಕಳೆದಸಾರಿ ಇದೇ ಸದನದಲ್ಲಿ ಹೇಳಿದ್ದೇನೆ. ಇಡೀ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿಗಳು 3 ದಿನಗಳಕಾಲ ಬಂದ್ ಆಗಿತ್ತು. ಜಿಲ್ಲೆಯಾದ್ಯಂತ ಒಂದು ಕರಾಳ ಛಾಯೆ ಮೂಡಿತ್ತು. ಇದಕ್ಕಿಂತ ಮೊದಲು ಅಂದರೆ ಪೈಪ್‌ಲೈನ್‌ನ್ನು ಹಾಕುವುದಕ್ಕಿಂತ ಮೊದಲು ನಮ್ಮ ಕರ್ನಾಟಕ ಸರ್ಕಾರದ ಪಶುಸಂಗೋಪನೆ ಮತ್ತು ಮೀನುಗಾರಿಕಾ ಇಲಾಖೆಯವರು ಮೀನುಗಾರಿಕಾ ಇಲಾಖೆಯ ನಿರ್ದೇಶಕರಿಗೆ ಒಂದು ಪತ್ರವನ್ನು ಬರೆದು ಈ ಕೆಳಗಿನ ಕಂಡಿಷನ್‌ನ ಒಳಗೆ ಅವರು ಪೈಪ್‌ಲೈನ್‌ನ್ನು ಹಾಕಿಕೊಳ್ಳಲು ಅನುಮತಿ ನೀಡಬಹುದು ಎಂದು. ತಿಳಿಸಿದ್ದಾರೆ. ಆ ಕಂಡೀಷನ್ಸ್ ಏನೆಂದರೆ :

> The Mangalore Chemicals has to make an agreement with College of Fisheries, Mangalore for continuous monitoring of the pollution near affluent discharge point,........

ಎಲ್ಲಿ ಈ ಒಂದು ತ್ಯಾಜ್ಯ ವಸ್ತು ಹೊರಗೆ ಬರುತ್ತದೆ, ಅದನ್ನು ಪರಿಶೀಲಿಸಿ ಅದನ್ನು ಮಾನಿಟರ್ ಮಾಡುವುದಕ್ಕೆ ಫಿಷರೀಸ್ ಕಾಲೇಜಿನವರ ಜೊತೆಯಲ್ಲಿ ಅಗ್ರಿಮೆಂಟ್ ಮಾಡಿ ಇದರಲ್ಲಿ ಯಾವ ಯಾವ ಕೆಮಿಕಲ್ಸ್ ಹೊರಗೆ ಬರುತ್ತವೆ, ಈ ಕೆಮಿಕಲ್ಸ್‌ನಿಂದ ಸಮುದ್ರದಲ್ಲಿರುವಂಥ ಜಲಚರ ಪ್ರಾಣಿಗಳಿಗೆ ಯಾವರೀತಿಯ ತೊಂದರೆಯಾಗುತ್ತದೆ ಎಂಬ ಬಗ್ಗೆ ಮಾಹಿತಿಯನ್ನು ಪ್ರತಿದಿನ ತೆಗೆದುಕೊಳ್ಳ ಬೇಕೆಂಬ ಮಾತನ್ನು ಹೇಳಿದ್ದಾರೆ. ಇದರಲ್ಲಿ ಒಟ್ಟು 8 ಕಂಡಿಷನ್‌ಗಳನ್ನು ಹಾಕಿದ್ದಾರೆ. ಸರ್ಕಾರದ ಕಾರ್ಯದರ್ಶಿಯವರು ಪತ್ರ ಬರೆದಿರತಕ್ಕದ್ದು ತಾ: 28 - 3 - 95 ರಂದು. ತಾ: 28 - 4 - 95 ಮಂಗಳೂರು ರಿಫೈನರಿ ಅಂಡ್ ಕೆಮಿಕಲ್ಸ್‌ನವರು ಉತ್ತರ ಕೊಟ್ಟಿದ್ದಾರೆ. ಅದರಲ್ಲಿರುವ ಒಂದು ವಾಕ್ಯವನ್ನು ಮಾತ್ರ ಓದುತ್ತೇನೆ. ಅದಕ್ಕಿಂತ ಹೆಚ್ಚಿಗೆ ಓದುವುದಿಲ್ಲ.

" We write this to inform you that we agree to abide by the conditions mentioned in your above letter,.."

ಮಾನ್ಯ ಮುಖ್ಯ ಮಂತ್ರಿಯವರೇ ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಸರ್ಕಾರದ ಕಾರ್ಯದರ್ಶಿಯವರು ಬರೆದಿರುವಂಥ ಪತ್ರಕ್ಕೆ ಎಂ. ಆರ್.ಪಿ.ಎಲ್. ನವರು ಮಾನ್ಯತೆ ಕೊಟ್ಟಿದ್ದಾರೆಯೇ ಎಂಬುದನ್ನು ತಾವು ಹೇಳಬೇಕು. ಇದುವರೆಗೂ ಈ ಕಂಪನಿಯವರು ಇದರ ಬಗ್ಗೆ ಯಾವುದೇ ರೀತಿಯ ನಿರ್ಣಯವನ್ನೂ ಮಾಡಿಲ್ಲ. ನಾಳೆ ಇದರಿಂದ ಆಗುವಂಥ ಪರಿಣಾಮ ಏನು ? ನಿಮ್ಮ ಸರ್ಕಾರವೇ ಈ ರೀತಿಯ ನಿರ್ದೇಶನವನ್ನು ಕೊಟ್ಟು ನಾವು ಅದನ್ನುಮಾಡುತ್ತೇವೆಂದು ಎಂ.ಆರ್.ಪಿ.ಎಲ್. ನವರು ಒಪ್ಪಿಕೊಂಡಮೇಲೆ, ಅನಂತರ ಇವತ್ತು ನಾವು ಅದನ್ನುಮಾಡುವುದಿಲ್ಲ ಎಂದು ಹೇಳುವುದಾದರೆ, ಅಂದರೆ ನಾವು ಮಾಡುವುದಿಲ್ಲ, ನೀವು ಏನು ಮಾಡುತ್ತೀರೋ ಮಾಡಿ ; ಎಂದರೆ ಇದರ ಅರ್ಥ ಏನು ? ನಿಮಗೆ ಅವರ ಇತಿಹಾಸವನ್ನು ಹೇಳುತ್ತೇನೆ. ಹರಿಹರ ಪಾಲಿಫೈಬರ್ ಕಂಪನಿಯವರು ಮತ್ತು ಗ್ರಾ್ಯಸಿಂ ಕಂಪನಿಯವರು ತ್ಯಾಜ್ಯ ನೀರನ್ನು ತುಂಗಭದ್ರಾ ನದಿಗೆ ಬಿಟ್ಟು ಎಷ್ಟು ಮೀನುಗಳ ಸಾವಿಗೆ ಕಾರಣರಾಗಿದ್ದಾರೆ, ಎಷ್ಟೆಷ್ಟು ಕಡೆಗಳಲ್ಲಿ ಯಾವ ಯಾವ ರೀತಿಯ ಅನಾಹುತಗಳಾಗಿವೆ, ಇದರ ಬಗ್ಗೆ ಸರ್ಕಾರಕ್ಕೆ ಏನು ವರದಿ ಬಂದಿದೆ? ಈ ವರದಿಯನ್ನು ಇಂಪ್ಲಿಮೆಂಟ್ ಮಾಡುವಂತೆ ಕೋರ್ಟ್‌ನಿಂದ ಆದೇಶ ಹೋದರೂ ಆ ಕಂಪನಿಯವರಿಂದ ಈ ಕೆಲಸವನ್ನು ಇದುವರೆಗೂ ಮಾಡಿಸುವುದಕ್ಕೆ ನಿಮಗೆ ಸಾಧ್ಯವಾಗಿಲ್ಲ. ಅಲ್ಲ ಜನರು ಸಾಯುತ್ತಿದ್ದಾರೆ, ಮೀನುಗಳು ಸಾಯುತ್ತಿವೆ. ತ್ಯಾಜ್ಯ ವಸ್ತುಗಳನ್ನು ಅವರು ಇದೇರೀತಿ ಬಿಡುವುದಾದರೆ ಮುಂದೆ ಏನು ಗತಿ ? 3 ಸಾವಿರದಿಂದ 9 ಸಾವಿರ ಕೋಟಿ ರೂ ಗಳವರೆಗೂ ಖರ್ಚು ಮಾಡತಕ್ಕ ಈ ಎಂ.ಆರ್.ಪಿ.ಎಲ್. ಸಂಸ್ಥೆಯವರು ನಾಳೆ ನಿಮ್ಮ ಸರ್ಕಾರದ ಆದೇಶದ ವಿರುದ್ಧ ಅವರು ಮಾಡಿದಾಗ ನಿಮ್ಮ ಕ್ರಮವಾದರೂ ಏನೆಂಬುದನ್ನು ಹೇಳಬೇಕು. ಅವರು 3 ಸಾವಿರದಿಂದ 9 ಸಾವಿರ ಕೋಟಿ ರೂ. ಗಳವರೆಗೂ ಅಲ್ಲಿ ಹಣವನ್ನು ತೊಡಗಿಸಿದ್ದಾರೆ ಎನ್ನತಕ್ಕ ಒಂದೇ ಕಾರಣದಿಂದ ಅವರು ಈ ರೀತಿ ಮಾಡುವುದಕ್ಕೆ ಅವಕಾಶ ಕೊಡುತ್ತೀರೋ ? ನೀವು ಅವಕಾಶವನ್ನು ಕೊಟ್ಟರೂ ನಾವಂತೂ ಬಿಡುವುದಿಲ್ಲ. ಇತ್ತೀಚೆಗೆ ಇದೇರೀತಿಯಲ್ಲಿ ಎಕನಾಮಿಕ್ ಟೈಮ್ಸ್‌ನಲ್ಲಿ ಕೊಜೆಂಟ್ರಿಕ್ಸ್ ಬಗ್ಗೆ ಬಂದಿರುವುದನ್ನು ತಮಗೆ ಹೇಳುತ್ತೇನೆ.

"Cogentrix power project talks reach stalemate. The State Government wants scrubber installation,

ಇವತ್ತು ಪರಿಸರ ಮಾಲಿನ್ಯದಿಂದ ಪಶ್ಚಿಮಘಟ್ಟ ಹಾಳಾಗಿ ಹೋಗುತ್ತದೆಂಬ ಮಾತನ್ನು ಪರಿಸರ ವಾದಿಗಳಾದ ನಾವು ಏನು ಪ್ರಸ್ತಾವನೆಯನ್ನು ಮಾಡಿದ್ದೇವೆ. ಈ ಬೃಹತ್ ಕೈಗಾರಿಕೆಗಳು ಯಾವರೀತಿ ಮೋಸಮಾಡಿಕೊಂಡು ಬಂದು ಇಲ್ಲಿ ಇನ್ವೆಸ್ಟ್‌ಮೆಂಟ್‌ನ್ನು ಮಾಡಿದಮೇಲೆ ನಾವು ಸುಪೀರಿಯರ್ ಎಂದು ಹೇಳಿಕೊಳ್ಳುತ್ತಿದ್ದಾರೆ. ಅವರು ಕೇಂದ್ರ ಸರ್ಕಾರವನ್ನೂ ಕೂಡ

ಕೊಂಡುಕೊಳ್ಳುವುದಕ್ಕೆ ತಯಾಗಿದ್ದಾರೆ, ಅವರಿಗೆ ಯಾರೂ ಬೇಕಾಗಿಲ್ಲ. ಇವತ್ತು 250 ಕೋಟಿ ರೂ. ಖರ್ಚಾಗುತ್ತದೆಂಬ ಒಂದೇ ಕಾರಣದಿಂದ ಸ್ಕ್ರಬರ್‌ನ್ನು ಹಾಕುವುದಕ್ಕೆ ಅವರು ತಯಾರಿಲ್ಲ. ಸ್ಕ್ರಬರ್‌ನ್ನು ನಾವು ಹಾಕುವುದೇ ಇಲ್ಲ. 250 ಕೋಟಿ ರೂ. ಎಂದರೆ ನಮಗೆ ಹೆಚ್ಚು ಖರ್ಚು ಬರುತ್ತದೆ, ಆದ್ದರಿಂದ ಆಗುವುದಿಲ್ಲವೆಂದು ಅದೇ ಕೊಜೆಂಟ್ರಿಕ್ಸ್ ಕಂಪೆನಿಯವರು ಹೇಳುವುದಾದರೆ, ನಾನು ಸ್ಪಷ್ಟವಾಗಿ ಹೇಳುತ್ತೇನೆ ; ಮಾನ್ಯ ಮುಖ್ಯ ಮಂತ್ರಿಗಳು ನನ್ನನ್ನು ಕ್ಷಮಿಸಬೇಕು. ನಮ್ಮ ಜಿಲ್ಲೆಯಲ್ಲಿ ಕೊಜೆಂಟ್ರಿಕ್ಸ್ ಸಂಸ್ಥೆಯನ್ನೂ ಒಳಗೊಂಡಂತೆ ಬರುವಂಥ ಬೃಹತ್ ಕೈಗಾರಿಕೆಗಳು ಸ್ಥಾಪನೆಯಾಗುವುದಕ್ಕಿಂತ ಮುಂಚೆ ನಮ್ಮ ಜಿಲ್ಲೆಯ ಧಾರಣಾ ಶಕ್ತಿಯ ಅಧ್ಯಯನ ಆಗಲೇಬೇಕು. ಅಲ್ಲಿ ಇವತ್ತು ಕುದುರೆ ಮುಖ, ಎಂ.ಸಿ.ಎಫ್; ಬಿ.ಎ.ಎಸ್.ಎಫ್, ಎಂ.ಆರ್.ಪಿ.ಎಲ್. ಇವುಗಳೆಲ್ಲಾ ಬಂದಿರುವುದರಿಂದ ನಮ್ಮಲ್ಲಿ ಇವತ್ತು ಎಷ್ಟು ಪರಿಸರ ಹಾಳಾಗಿದೆ ಎಂಬುದನ್ನು ಯೋಚನೆ ಮಾಡಬೇಕು. ಕೆ.ಐ.ಡಿ.ಬಿ. ಯವರು ಎಲ್ಲೆಂದರಲ್ಲಿ ಜಮೀನನ್ನು ಅಕ್ವೈರ್ ಮಾಡುತ್ತಾ ಹೋಗುವುದಾದರೆ ಇನ್ನು ಮುಂದೆ ನಾವು ಅವಕಾಶವನ್ನು ಕೊಡುವುದಿಲ್ಲ. ನಮ್ಮ ಜಿಲ್ಲೆಯ ಧಾರಣ ಶಕ್ತಿಯ ಬಗ್ಗೆ ನಮ್ಮ ಪರಿಸರ ಖಾತೆ ಮಂತ್ರಿಯವರು, ಪರಿಸರ ಇಲಾಖೆಯ ಕಾರ್ಯದರ್ಶಿಯವರು, ದಕ್ಷಿಣ ಕನ್ನಡ ಜಿಲ್ಲೆಗೆ ಹೋಗಿ ಅಲ್ಲಿ ಒಂದು ದೊಡ್ಡ ಹೇಳಿಕೆಯನ್ನು ಕೊಟ್ಟರು. ಇಲ್ಲಿಯ ಧಾರಣ ಶಕ್ತಿಯನ್ನು ಅಧ್ಯಯನ ಮಾಡುವುದಕ್ಕೆ ನಾವು ಏಜೆನ್ಸಿಯನ್ನು ಫಿಕ್ಸ್ ಮಾಡಿದ್ದೇವೆಂದು ಹೇಳಿದರು. ಅನಂತರ ಇಲ್ಲಿಗೆ ಬಂದು ಒಂದು ಸೆಮಿನಾರ್‌ನಲ್ಲಿ ಮಾನ್ಯ ಕಾರ್ಯದರ್ಶಿಯವರು ಮಾತನಾಡುತ್ತಾ ದಕ್ಷಿಣ ಕನ್ನಡ ಜಿಲ್ಲೆಯ ಧಾರಣ ಶಕ್ತಿಯನ್ನು ಅಧ್ಯಯನ ಮಾಡುವುದಕ್ಕೆ ಸಾಧ್ಯವೇ ಇಲ್ಲವೆಂದು ಹೇಳಿದ್ದಾರೆ. ಹಾಗಾದರೆ ಇದು ಎಂಥ ವಿಪರ್ಯಾಸ? ನಮ್ಮ ವೇದನೆ ಏನೆಂಬುದನ್ನು ತಿಳಿದಿದ್ದೀರೋ? ನಮ್ಮ ಮನಸ್ಸಿನಲ್ಲಿರತಕ್ಕ ಆತಂಕಗಳ ನಿವಾರಣೆಗೆ ನಿಮ್ಮ ಸರ್ಕಾರ ಏನು ಪ್ರಯತ್ನ ಮಾಡಿದೆ ಎಂಬುದನ್ನು ದಯವಿಟ್ಟು ಹೇಳಬೇಕು. ನಾನಾದರೂ ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದೇನೆಂದರೆ, ಕೊಜೆಂಟ್ರಿಕ್ಸ್ ನಮ್ಮ ಜಿಲ್ಲೆಯಲ್ಲಿ ಬರುವುದಕ್ಕೆ ಅವಕಾಶವನ್ನು ನಾವು ಕೊಡುವುದಿಲ್ಲ. ಯಾವರೀತಿಯ ಚಳುವಳಿಯನ್ನು ಮಾಡುವುದಕ್ಕೂ ನಾವು ಸಿದ್ಧರಿದ್ದೇವೆ.

ಶ್ರೀ ಸಿ. ಆರ್. ಸಗೀರ್ ಅಹಮದ್ :- ಹಾಗಾದರೆ ನಮ್ಮ ಜಿಲ್ಲೆಗೆ ಕೊಡಿ.

ಶ್ರೀ ಯು. ಆರ್. ಸಭಾಪತಿ:- ಚಿಕ್ಕಮಗಳೂರು ಜಿಲ್ಲೆಗೆಕೊಡಿ ಎಂದು ಮಾನ್ಯ ಸದಸ್ಯರಾದ ಸಗೀರ್ ಅಹಮದ್‌ರವರು ಕೇಳುತ್ತಿದ್ದಾರೆ. ನೀವು ಬೇಕಾದರೆ ನಾರ್ತ್ ಕೆನರಾದಲ್ಲಿ ಹಾಕಿ. ಅವರು ಅವರು ಬೇಡವೆಂದು ಹೇಳುವುದಿಲ್ಲ. ಅಲ್ಲಿಯೂ ಕೂಡ ಕೊಂಕಣ ರೈಲ್ವೆ ಬರುತ್ತಿದೆ, ಅಲ್ಲಿಯೂ ಬಂದರುಗಳಿವೆ, ಅಲ್ಲಿಯೇ ಹಾಕಲಿ. ನಾರ್ತ್ ಕೆನರಾದಲ್ಲಿ ಯಾವ ಕೈಗಾರಿಕೆಗಳೂ ಇಲ್ಲ. ಅದೆಲ್ಲಾ ಟೂರಿಸ್ಂ ಸೆಂಟರ್ಸ್ ಇರುವಂಥ ಜಾಗ. ಬೃಹತ್ ಕೈಗಾರಿಕೆಗಳು ನಾರ್ತ್ ಕೆನಾರಕ್ಕೆ ಹೋಗುವುದಿಲ್ಲ. ಅಲ್ಲಿ ಕೊಂಕಣ ರೈಲ್ವೆ ಪಾಸ್ ಆಗುತ್ತಿಲ್ಲ. ಸರ್ಕಾರ ಪಕ್ಷಪಾತ ನಿಲುವನ್ನು ತೆಗೆದುಕೊಂಡು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಬೃಹತ್ ಕೈಗಾರಿಕೆಗಳನ್ನು

ಹಾಕಿ ನಮ್ಮನ್ನು ಧಮನ ಮಾಡುವುದರೊಂದಿಗೆ ಸಮಸ್ತ ಮೀನುಗಾರಿಕಾ ಸಮಾಜವನ್ನು ಇವತ್ತು ನೀವು ನಿರ್ಲಕ್ಷ್ಯ ಮಾಡಿದ್ದೀರಿ. ಕೇಂದ್ರದಿಂದ ಬರುವಂಥ ಎಲ್ಲಾ ಸೌಲಭ್ಯಗಳಿಂದ ಅವರನ್ನು ವಂಚಿಸಿ ಅವರ ಜೀವನವನ್ನೇ ಸುಟ್ಟುಹಾಕುವಂಥ ಪ್ರಯತ್ನವನ್ನು ನಿಮ್ಮ ಸರ್ಕಾರ ಮಾಡಿದೆ ಎಂದು ನಾನು ಆರೋಪ ಮಾಡಬೇಕಾಗಿದೆ. ಇದಕ್ಕೆ ಸಮರ್ಥವಾದ ಉತ್ತರವನ್ನೂ ಹಿಂದೆಯೂ ಕೊಟ್ಟಿಲ್ಲ, ಮುಂದೆಯೂ ಕೊಡುವುದಿಲ್ಲ. ಹಾಗಾದರೆ ನಿಮ್ಮ ಸರ್ಕಾರದಮೇಲೆ ನಾವು ಹೇಗೆ ವಿಶ್ವಾಸ ಇಡಬೇಕು ? ಈ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ನಾವು ಮಂಡನೆ ಮಾಡಿರುವುದರಲ್ಲಿ ಏನು ತಪ್ಪಿದೆ?

ಮಾನ್ಯ ಉಪಾಧ್ಯಕ್ಷರೇ , ಇಲ್ಲಿಗೆ ಒಂದು ಇಲಾಖೆಯ ವಿಚಾರ ಮುಗಿಯಿತು.

ಉಪಾಧ್ಯಾಕ್ಷರು :- ಇವತ್ತು 20 ನಿಮಿಷ ಮಾತನಾಡಿದ್ದೀರಿ, ನಿನ್ನೆ 45 ನಿಮಿಷಕಾಲ ಮಾತನಾಡಿದ್ದೀರಿ. ಒಟ್ಟು 65 ನಿಮಿಷ ಮಾತನಾಡಿರುವುದರಿಂದ ದಯವಿಟ್ಟು ಮುಗಿಸಬೇಕು.

ಶ್ರೀ ಯು. ಆರ್. ಸಭಾಪತಿ :- ದಯವಿಟ್ಟು ಕ್ಷಮಿಸಿ, ನಿನ್ನೆ ನಾನು ಮಾತನಾಡಿದ್ದು ಅರ್ಧ ಗಂಟೆ. ಅದರಲ್ಲಿ 15 ನಿಮಿಷ ಡಿಸ್ಟರ್ಬ್‌ನ್ಸಿನಲ್ಲಿ ಹೋಯಿತು, ಈಗ 15 ನಿಮಿಷ ನಾನು ಮಾತನಾಡಿದ್ದೇನೆ. ಆದರೆ 20 ನಿಮಿಷ ಎಂದು ಹೇಳುತ್ತಿದ್ದೀರಿ.

ಉಪಾಧ್ಯಾಕ್ಷರು :- ಬೇಗ ಮುಗಿಸಿ.

ಶ್ರೀ ಯು. ಆರ್. ಸಭಾಪತಿ :- ಇನ್ನೊಂದು ಪ್ರಮುಖವಾದ ವಿಚಾರವೆಂದರೆ , ನಾನು ಕಂದಾಯ ಇಲಾಖೆಯ ವಿಚಾರಕ್ಕೆ ಬರುತ್ತೇನೆ. ಮಾನ್ಯ ಕಂದಾಯ ಸಚಿವರು ಇಲ್ಲಿ ಇಲ್ಲ. ಇಲಾಖಾವಾರು ಭ್ರಷ್ಟಾಚಾರ, ಲಂಚಗುಳಿತನ ಎಲ್ಲಿಯವರೆಗೆ ಆಗಿದೆ ಎಂದರೆ ಕಂದಾಯ ಇಲಾಖೆ ವಿಲೇಜ್ ಅಕೌಂಟೆಂಟ್‌ನಿಂದ ಪ್ರಾರಂಭವಾಗುತ್ತದೆ. ಒಬ್ಬ ವಿಲೇಜ್ ಅಕೌಂಟೆಂಟ್ 8 ಕೋಟಿ ರೂಪಾಯಿಗಳ ವ್ಯವಹಾರ ಮಾಡುವವನು. ಆ ವಿಲೇಜ್ ಅಕೌಂಟೆಂಟಿನ ಕೈಯಲ್ಲಿ ಪೇಜರ್ ಇದೆ. ಮುಖ್ಯ ಮಂತ್ರಿಗಳೂ ಕೂಡ ಆ ಪೇಜರ್‌ಗೆ ಮೆಸೇಜ್ ಕೊಟ್ಟರೆ ನಿಮ್ಮಲ್ಲಿ ಬರುತ್ತಾನೆ. ಬೇಕಾದರೆ ನಾನು ಪೇಜರ್ ನಂಬರ್ ಕೂಡ ಕೊಡುತ್ತೇನೆ. - 469643. ಅವನು ದೂರವಾಣಿ ಹಾಕಿಸಿಕೊಂಡಿದ್ದಾನೆ; ಎರಡು ಸ್ವಂತ ಮನೆಗಳು ಇವೆ. ಒಬ್ಬ ಕಾಫಿ ಪ್ಲಾಂಟರ್ ಅಳಿಯ ಕಂದಾಯ ಇಲಾಖೆಯ ವಿಲೇಜ್ ಅಕೌಂಟೆಂಟ್ ಆಗಬೇಕಾದರೆ ಎಷ್ಟು ಪವರ್‌ಫುಲ್ ಇರಬೇಕೆಂದು ನೀವು ಆಲೋಚನೆ ಮಾಡಿ. ಇವ್ರು ಅವನಿಗೆ ಕೆಲಸ ಏನೆಂದರೆ ಬೆಂಗಳೂರು ಜಿಲ್ಲೆ, ಬೆಂಗಳೂರು ತಾಲ್ಲೂಕು, ಬೇಗೂರು ಹೋಬಳಿಯ ದೊಡ್ಡ ನಾಗ ಮಂಗಲ, ದೊಡ್ಡ ತೋಗೂರು, ಬಸವಾಪುರ ಗ್ರಾಮ....

ಶ್ರೀ ಎಸ್. ಆರ್. ಲಕ್ಷ್ಮಯ್ಯ : ಪ್ಲಾಂಟರ್ ಅಳಿಯ ಎಂದರೆ ಯಾರು ಎಂದು ಹೇಳಬೇಕು.

ಉಪಾಧ್ಯಕ್ಷರು : ತಾವು ಕುಳಿತುಕೊಳ್ಳಿ. ನೀವು ಮಾತನಾಡಿ.

ಶ್ರೀ ಯು. ಆರ್. ಸಭಾಪತಿ : ನೀವು ಮಾತನಾಡುವಾಗ ನಿಮ್ಮ ವಾದವನ್ನು ಮಂಡನೆ ಮಾಡಿ. ನಿನ್ನೆ ಇದೇ ರೀತಿ ವಂಚನೆ ಮಾಡಿದಿರಿ, ಇವತ್ತು ಅದೇ ರೀತಿ ಮಾಡುವುದಕ್ಕೆ ಬರುವುದಿಲ್ಲ. ಬೆಂಗಳೂರು ನಗರದಿಂದ 10-12 ಕಿಲೋಮೀಟರ್ ವ್ಯಾಪ್ತಿಯಲ್ಲಿ ಹೊಸೂರು ಮುಖ್ಯ ರಸ್ತೆ ಒಂದು ಇದೆ. ಬೆಂಗಳೂರು ದಕ್ಷಿಣ ತಾಲ್ಲೂಕು ಗೋಣಪ್ಪನ ಅಗ್ರಹಾರ ವೃತ್ತ, ದೊಡ್ಡ ತೋಗೂರು ವೃತ್ತ, ಒಂದಕ್ಕೊಂದು ಹೊಂದಿಕೊಂಡು ಬಂದಂಥ ಪ್ರದೇಶಗಳು. ಮೂರು ವೃತ್ತಗಳಲ್ಲಿ ಗ್ರಾಮ ಲೆಕ್ಕಿಗರು ಪ್ರಾಯಶಃ ದೊಡ್ಡ ಲ್ಯಾಂಡ್ ಡೆವಲಪರ್ ಆಗಿ ಬೆಳೆಯುತ್ತಿದ್ದಾರೆ. ಅವರ ಬಳಿ ಪೇಜರ್ ಇದೆ, ಅಷ್ಟೇ ಅಲ್ಲ, ಅವರ ವ್ಯವಹಾರ 8 - 10 ಕೋಟಿ ರೂಪಾಯಿಗಳು. ಈತ ಏನು ಮಾಡಿದ್ದಾರೆಂದರೆ ದೊಡ್ಡ ನಾಗಮಂಗಲ ಸರ್ವೆ ನಂಬರ್ 47: ಎ ಅದರಲ್ಲಿ 24 ಸೆಂಟ್ಸ್ 54:2ರಲ್ಲಿ 15 ಸೆಂಟ್ಸ್, 47:2 ರಲ್ಲಿ 5 ಸೆಂಟ್ಸ್, 47:1 ಎ ಯಲ್ಲಿ 24 ಸೆಂಟ್ಸ್, 14:40 ರಲ್ಲಿ 15 ಸೆಂಟ್ಸ್, 36:5 ರಲ್ಲಿ 4 ಸೆಂಟ್ಸ್, 36:7 ರಲ್ಲಿ 8 ಸೆಂಟ್ಸ್, 30 : 10 ರಲ್ಲಿ 11 ಸೆಂಟ್ಸ್, ಎಸ್. ಆರ್. ನಂಬರ್ ಬೇಕಾದರೂ ಕೊಡುತ್ತೇನೆ. 47: ಎ ಯದು 45:40:95 -96, 54: 2 ರದ್ದು 43:93, ಇದೇ ರೀತಿ ವಿವರ ಇದೆ, ಲಿಖಿತವಾಗಿ ಕೊಡುತ್ತೇನೆ. ಓದುವುದಕ್ಕೆ ಹೋದರೆ ತುಂಬಾ ಹೊತ್ತಾಗುತ್ತದೆ. ದೊಡ್ಡ ನಾಗಮಂಗಲ ಗ್ರಾಮದ ಈ ಮೇಲಿನ ಎಲ್ಲಾ ಸರ್ವೆ ನಂಬರ್‌ಗಳಿಗೆ ನೋಂದಾಣಿಕೆಗೆ ಅನುಕೂಲವಾಗುವಂತೆ ಆರ್. ಟಿ. ಸಿ. ಮತ್ತು ಮ್ಯುಟೇಷನ್ ಪ್ರತಿಗಳನ್ನು ಫೋರ್ಜರಿ ಮಾಡುವುದು. ಫೋರ್ಜರಿ ಮಾಡಿದ ಬಗ್ಗೆ ಒಬ್ಬ ರೆವಿನ್ಯೂ ಇನ್‌ಸ್ಪೆಕ್ಟರ್ ಶ್ರೀ ಗಂಗಪ್ಪ ಎಂಬುವವರು ರಿಪೋರ್ಟ್ ಮಾಡುತ್ತಾರೆ. ಈ ರೀತಿ ಫೋರ್ಜರಿ ನಡೆದಿದೆ ; ಈ ವಿಲೇಜ್ ಅಕೌಂಟೆಂಟ್ ಮೇಲೆ ಕ್ರಮ ಕೈಗೊಳ್ಳಬೇಕೆಂಬ ಹಿಂದಿನ ಕಂದಾಯ ಸಚಿವರಾದ ಜಾಲಪ್ಪನವರು ತಕ್ಷಣ ಕ್ರಮ ತೆಗೆದುಕೊಂಡು ಅವನನ್ನು ಅಮಾನತ್ತಿಲ್ಲಿಡುತ್ತಾರೆ. ಆಮೇಲೆ ಅಮಾನತ್ತಿನಲ್ಲಿಟ್ಟ ಮೇಲೆ ಇವರದ್ದು ಏನು ಕ್ರಮ ಅಂದರೆ ಈ ಒಬ್ಬ ಗಂಗಪ್ಪ ಎಂಬ ರೆವಿನ್ಯೂ ಇನ್‌ಸ್ಪೆಕ್ಟರ್ ಏನು ಬಂದಿದ್ದಾರೆ ಇವರು ಎಲ್ಲಾ ಸಮಗ್ರ ತನಿಖೆ ಮಾಡಿ ಅನೇಕ ರಿಪೋರ್ಟುಗಳನ್ನು ಪತ್ತೆ ಹಚ್ಚಿದರು , ಪತ್ತೆ ಹಚ್ಚಿದ್ದು ಏನೆಂದರೆ, ಒಂದೊಂದೇ ಕರ್ನಾಟಕ ಭೂಸುಧಾರಣಾ ಕಾನೂನು ಕಲಂ ನಂ. 79: ಎ ಪ್ರಕಾರ ಜಮೀನುಗಳಿಗೆ ಸಂಬಂಧಪಟ್ಟಂತೆ ಸುಳ್ಳು ನೋಂದಣಿ ಮಾಡುವುದಲ್ಲದೆ ಒಬ್ಬರು ನಾಗರಾಜ್ ಎಂದು ಮೆ: ನೀಲಾಜಿ ಡೆವಲಪರ್ಸ್ ಎಂಬುವವರು 1995 ರಿಂದ ಸೆಪ್ಟಂಬರ್ 1995 ರವರೆಗೆ ದೊಡ್ಡ ತೋಗೂರು ಗ್ರಾಮದ ಈ ಕೆಳಗಿನ ಜಮೀನು ತೋರಿಸಿದ್ದಾರೆ. ಸರ್ವೆ ನಂ. 100 ವಿಸ್ತೀರ್ಣ 4 ಎಕರೆ 32 ಸೆಂಟ್ಸ್, ಸರ್ವೆ ನಂ. 156 ವಿಸ್ತೀರ್ಣ 3 ಎಕರೆ 4 ಸೆಂಟ್ಸ್, ಸರ್ವೆ ನಂ. 156. 4 ಎಕರೆ, 90: 1ರಲ್ಲಿ 1.5 ಎಕರೆ, 112: 3ರಲ್ಲಿ 1.4 ಎಕರೆ, 112:3ರಲ್ಲಿ 1.4 ಎಕರೆ, 112: 2ರಲ್ಲಿ 32 ಸೆಂಟ್ಸ್, 112 :2 ರಲ್ಲಿ 32 ಸೆಂಟ್ಸ್, 91:3 ರಲ್ಲಿ 1.22 ಎಕರೆ , 91. 2ರಲ್ಲಿ 1.2 ಎಕರೆ, 111ರಲ್ಲಿ 1.20 ಎಕರೆ, 111 ರಲ್ಲಿ 1.20

ಎಕರೆ. ಎರಡನೆಯದು , ನೀಲಾಜಿ ಡೆವಲಪರ್ಸ್ ಡೈರೆಕ್ಟರಲ್ಲಿ ಒಬ್ಬರು ತಿರುಮಲ ಸ್ವಾಮಿ ಎಂಬುವವರು 90 : 1 ರಲ್ಲಿ 1.20 ಎಕರೆ, 90 ರಲ್ಲಿ 30.5 ಎಕರೆಯನ್ನು ನಾಗರಾಜು ಅವರ ಜೊತೆ ಖರೀದಿ ಮಾಡಿದಾರಂತೆ. ಈ ಜಮೀನುಗಳಲ್ಲದೆ ಇನ್ನೂ 70 ಎಕರೆ ಜಮೀನು ಖರೀದಿಸಿದ್ದಾರೆ. ಯಾವುದೇ ಒಂದು ಭೂಮಿಯಾದರೆ ಖರೀದಿಸಬೇಕಾದರ ಅವರು ವ್ಯವಹಾರ ಮಾಡತಕ್ಕ ಭೂಮಿ ಅಗ್ರಿಕಲ್ಚರಿಸ್ಟ್ ಭೂಮಿಯಾದರೆ ಖರೀರಿಸುವವರು ಅಗ್ರಿಕಲ್ಚರಿಸ್ ಆಗಿರಬೇಕು. ಇವತ್ತು ಅಗ್ರಿಕಲ್ಚರಿಸ್ಟ್ ಅಲ್ಲದ ವರ್ತಕರು ಇದನ್ನು ಪರ್ಚೇಸ್ ಮಾಡುತ್ತಿದ್ದಾರೆ. ಪರ್ಚೇಸ್ ಮಾಡಿ ಭೂ ಪರಿವರ್ತನೆಗೆ ಅರ್ಜಿ ಸಲ್ಲಿಸುತ್ತಾರೆ. ಸರ್ವೇ ನಂ. 156 ರಲ್ಲಿ 7.4 ಎಕರೆ, ಸರ್ವೆ ನಂ. 3 ರಲ್ಲಿ 4. 32 ಎಕರೆ ಇಷ್ಟು ಭೂ ಪರಿವರ್ತನೆಗೆ ಅರ್ಜಿ ಸಲ್ಲಿಸುತ್ತಾರೆ. ಭೂ ಪರಿವರ್ತನೆಗೆ ಅರ್ಜಿ ಸಲ್ಲಿಸಿದಾಗ ಏನು ಮಾಡುತ್ತಾರೆ ಎಂದರೆ, ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ಗಂಗಪ್ಪನವರು ಹೋಗಿ ರಿಪೋರ್ಟ್ ಮಾಡುತ್ತಾರೆ. ಏನು ರಿಪೋರ್ಟ್‌ಮಾಡುತ್ತಾರೆಂದರೆ ಈ ಮೇಲಿನ ಭೂಮಿಗಳು, ಜಮೀನುಗಳು ಭೂ ಪರಿವರ್ತನಗೆ ಅರ್ಹ ಅಲ್ಲದೆಂದು ಅವರು ರಿಪೋರ್ಟ್ ಮಾಡುತ್ತಾರೆ . ರಿಪೋರ್ಟ್ ಮಾಡಿದ ತಕ್ಷಣ ಈ ಹಿಂದಿನ ಎಲ್ಲಾ ಏನು ಅವ್ಯವಹಾರಗಳು ಇವೆ, ಮತ್ತು ಈಗಿನ ಅವ್ಯವಹಾರಗಳು ಏನಿದೆ ಅದರ ಬಗ್ಗೆ ಶ್ರೀ ರಾಜಪ್ಪ ಎಂಬುವವರು ರಿಪೋರ್ಟ್ ಮಾಡಿದರೆ ಇವರು ಏನು ದೂಡಿದ್ದಾರೆಂದರೆ ಅವನಿಗೆ ಒತ್ತಡ ತಂದು ಅವನನ್ನು ವರ್ಗಾವಣೆ ಮಾಡಲಿಲ್ಲ. ಅದರ ಬದಲಿಗೆ ಇದೇ ಮೊದಲಿನ ಲಕ್ಷ್ಮಣ ಎಂಬ ವಿಲೇಜ್ ಅಕೌಂಟೆಂಟ್ ಯಾರಿದ್ದಾನೆ ಅವನು ರಾಜಕೀಯ ಒತ್ತಡ ತಂದು ಮೊದಲಿಗೆ ಈ ರೆವಿನ್ಯೂ ಇನ್ಸ್‌ಪೆಕ್ಟರನ್ನು ವರ್ಗಾವಣೆ ಮಾಡದೆ ಡೆಪ್ಯೂಟೇಷನ್ ಮಾಡಿದ್ದಾರೆ. ವರ್ಗಾವಣೆ ಮಾಡಿದರೆ ಕೆ.ಎ.ಟಿ.ಯಿಂದ ಸ್ಟೇ ತರುತ್ತಾರೆಂದು ಹೇಳುವ ಒಂದೇ ಒಂದು ದೃಷ್ಟಿಯಿಂದ ಅಲ್ಲಿ ಹಿಂದೆ ಯಾರು ರೆವಿನ್ಯೂ ಇನ್ಸ್‌ಪೆಕ್ಟರ್ ಫೋರ್ಜರಿ ಮಾಡುತ್ತಿದ್ದ ರಂಗಸ್ವಾಮಿ ಎಂದು ಮತ್ತು ಇನ್ನೊಬ್ಬ ರೆವಿನ್ಯೂ ಇನ್ಸ್‌ಪೆಕ್ಟರ್ ಇವನನ್ನು ಅಲ್ಲ ಕೂರಿಸಿಕೊಂಡು ಇದ್ದಾಗ, ಈ ರಂಗಸ್ವಾಮಿ, ತಹಶೀಲ್ದಾರ್ ಬಿ. ಆರ್. ಕೃಷ್ಣನ್ ಇವರೆಲ್ಲಾ ಸೇರಿಕೊಂಡು ಜುಲೈ ತಿಂಗಳಲ್ಲಿ ಮತ್ತೆ ಭೂ ಪರಿವರ್ತನೆಗೆ ನಾಗರಾಜ ಮತ್ತು ತಿರುಮಲಸ್ವಾಮಿ ಇದರಿಂದ ಹೊಸ ಅರ್ಜಿ ತಂದುಬಿಡುತ್ತಾರೆ. ಗಂಗಪ್ಪ ಏನು ವರದಿ ಕೊಟ್ಟಿದ್ದಾರೆ ಅದನ್ನು ಹರಿದು ಬಿಸಾಡಿದ್ದಾರೋ ಅಥವಾ ಒಳಗೆ ಇಟ್ಟಿದ್ದಾರೋ ಗೊತ್ತಿಲ್ಲ, ಅದರ ಮೇಲೆ ಪುನಃ ಒಂದು ಹೊಸ ಅರ್ಜಿ ಸಲ್ಲಿಸಿ ಇವತ್ತು ಭೂ ಪರಿವರ್ತನೆ ಮಾಡುತ್ತಾರೆಂದರೆ ಇದಕ್ಕಿಂತ ದೊಡ್ಡ ಅನಾಹುತ ಏನು? ನಾನು ಅದಕ್ಕೆ ಬೇಕಾಗುವಂಥ ಪುರಾವೆಗಳೇನಿವೆ ಮತ್ತು ಇವತ್ತು ರೆವಿನ್ಯೂ ಇನ್ಸ್‌ಪೆಕ್ಟರ್ ಮಾಡಿದಂಥ ನೋಟ್ ಏನಿದೆ ಅದನ್ನೆಲ್ಲಾ ಸ್ಪಷ್ಟವಾಗಿರತಕ್ಕ ಲಿಖಿತ ದಾಖಲೆಗಳು ನನ್ನ ಹತ್ತಿರ ಇವೆ. ಅವನ್ನು ನಾನು ಸರ್ಕಾರಕ್ಕೆ ಕೊಡುತ್ತೇನೆ. ನಿಮಗೆ ತಾಕತ್ತು ಇದ್ದರೆ ತನಿಖೆ ಮಾಡಬೇಕು, ಅದರ ಬದಲಿಗೆ ನೀವು ಏನು ಮಾಡಿದಿರಿ? ಮತ್ತೆ ಅದೇ ವಿಲೇಜ್ ಅಕೌಂಟೆಂಟ್‌ನ್ನು ಅವನ ಮೇಲೆ ಯಾವುದೇ ರೀತಿಯ ತನಿಖೆ ಮಾಡದೆ, ರೀಇನ್‌ಸ್ಟೇಟ್ ಮಾಡಿದಿರಿ. ಇದು ರಾಜಕೀಯ ಭ್ರಷ್ಟಾಚಾರ ಎಂದು ಹೇಳಲೇ ಅಥವಾ ರಾಜಕೀಯ ವಶೀಲೀಕರಣ ಎಂದು ಹೇಳಲೇ , ಏನು ಮಾತು ನಾನು ಹೇಳಲಿ? ಈ ರೀತಿ ಅವ್ಯವಹಾರಗಳು ನಡೆಯುವುದರೊಂದಿಗೆ ಇನ್ನೂ ಒಂದು ಹೇಳುತ್ತೇನೆ, ಬಸವಾಪುರ ಗ್ರಾಮದ ಸರ್ವೆ ನಂಬರ್ 22/ 2ರಲ್ಲಿ 20.5 ಗುಂಟೆ ಜಮೀನನ್ನು ಒಬ್ಬ ಕೆ.ಎಂ.ಜೈನ್ ಎಂದು ಮತ್ತೊಬ್ಬರು

ಸಿ . ಚಂದ್ ಸನ್ ಆಫ್ ವಿ. ಚಂದ್ , ಮನಿಲೆಂಡರ್ ಇವರು ವ್ಯವಸಾಯ ಜಮೀನನ್ನು ಖರೀದಿಸಲು ಅನುಮತಿಗೆ ಅರ್ಜಿ ಸಲ್ಲಿಸಿದ್ದರು ಗಂಗಪ್ಪ ಅವರು ಏನು ಮಾಡಿದರು ಎಂದರೆ 14 - 3 - 96 ಕ್ಕೆ ಕೆ.ಎಂ. ಜೈನ್ ಅವರು ವ್ಯವಸಾಯೇತರ ಉತ್ಪನ್ನ 6 - 7 ಲಕ್ಷ ಇರುವುದರಿಂದಾಗಿ ಇವರಿಗೆ ಜಮೀನು ವ್ಯವಸಾಯಕ್ಕೆ ಯೋಗ್ಯ ಅಲ್ಲವೆಂದು ಅವರು ಮಾಡಿದ ಮನವಿಯನ್ನು ತಿರಸ್ಕರಿಸಿದ್ದಾರೆ. ಈ ತಿರಸ್ಕರಿಸಿದ ಅರ್ಜಿಯನ್ನು ಮೂಲೆಗಿಟ್ಟು ಪುನಃ ರಂಗಸ್ವಾಮಿ ಹೊಸ ಅರ್ಜಿ ಪಡೆದುಕೊಂಡು ಬಂದು ಪುಣಃ ಅದನ್ನು ಅಪ್ರೂವಲ್ ಮಾಡಿ ಇವತ್ತು ಸುಮಾರು 50 ಎಕರೆ ಜಮೀನನ್ನು ಮತ್ತೆ ಪರಿವರ್ತನೆಗೆ ಆದೇಶಕೊಟ್ಟಿದ್ದರು. ನನಗೆ ಇದು ಗೊತ್ತಾಗುತ್ತಿಲ್ಲ. ಮಾನ್ಯ ಕಂದಾಯ ಸಚಿವರು ಏತಕ್ಕೆ ಬಂದಿಲ್ಲ. : ಯಾರು ಇದರ ಬಗ್ಗೆ ನೋಟ್ ಮಾಡಿಕೊಳ್ಳುತ್ತಾರೋ ಗೊತ್ತಾಗುತ್ತಿಲ್ಲ . ದೊಡ್ಡ ತೋಗೂರು ಗ್ರಾಮದ ಈ ಕೆಳಕಂಡ ಜಮೀನನ್ನು ಭೂಸುಧಾರಣಾ ಕಾಯಿದೆ 79: ಎ ಪ್ರಕಾರ ಸರ್ಕಾರ ಎಂದು ಘೋಷಿಸಿ ಆದೇಶಿಸಲಾಗಿದೆ. ಆದರೆ ಈ ಜಮೀನುಗಳನ್ನು 'ಸರ್ಕಾರ ಅಲ್ಲ' ಎಂಬಂತೆ ಮಾಡಿ, ಆರ್.ಟಿ.ಸಿ. ಮತ್ತು ಎಂ.ಆರ್. ಮಾಡಿ ಕೊಂಡು, ಈ ಜಮೀನುಗಳನ್ನು ಕುಮಾರ ನಾಗ ಇವರಿಂದ ಬೇರೆಯವರಿಗೆ ನೋಂದಣಿಯಾಗುವಂತೆ ಗ್ರಾಮ ಲೆಕ್ಕಿಗರು ಸಹಾಯ ಮಾಡಿ, ಒಂದು ಕೋಟಿಗಿಂತ ಹೆಚ್ಚು ಅವ್ಯವಹಾರ ನಡೆಸಿದ್ದಾರೆ. 23 - 3- 96 ಇದೇ ಗಂಗಪ್ಪ ಎಂಬುವವರು ಇದರ ಬಗ್ಗೆ ಒಂದುವರದಿ ಸಲ್ಲಿಸುತ್ತಾರೆ. ಈ ಜಮೀನುಗಳ ಬೆಲೆ 20 ಕೋಟಿಗಿಂತ ಮಿಕ್ಕಿದೆ. ಇದರಲ್ಲಿ ದೊಡ್ಡ ತೋಗೂರು ಗ್ರಾಮದ ಸರ್ವೆ ನಂ. 84 ರಲ್ಲಿ 5 ಎಕರೆ.......

ಉಪಾಧ್ಯಕ್ಷರು : ತಾವು ದಯಮಾಡಿ ಮುಕ್ತಾಯ ಮಾಡಬೇಕು.

ಶ್ರೀ ಯು. ಆರ್. ಸಭಾಪತಿ : ನಾನು ಹೇಳಬೇಕಲ್ಲಾ. 50 ಎಕರೆ ಜಮೀನು ಅಲ್ಲದೆ, ಇದನ್ನು ಪರಿವರ್ತನೆ ಮಾಡಿದ್ದೇ ಅಲ್ಲದೆ, ಇನ್ನೂ ಅನೇಕ ಲ್ಯಾಂಡ್ ಡೆವಲಪರ್ಸ್ ವ್ಯವಸಾಯದ ಜಮೀನುಗಳನ್ನು ಖರೀದಿಸುವುದು ಬಿಟ್ಟು, ದಲಿತರಿಂದ ಪಡೆದುಕೊಂಡಂಥ ವಿಚಾರ, 100 ಕೇಸು ಇದೆ.

ಉಪಾಧ್ಯಕ್ಷರು : ತಮ್ಮ ಹತ್ತಿರ ಏನೇನು ದಾಖಲೆಗಳಿವೆ ಅವೆಲ್ಲವನ್ನೂ ಕಂದಾಯ ಸಚಿವರಿಗೆ ಕಳುಹಿಸಿಕೊಡಿ. ಮತ್ತು ಬೇಗ ಮುಕ್ತಾಯ ಮಾಡಿ.

ಶ್ರೀ ಯು. ಆರ್. ಸಭಾಪತಿ: ಇವತ್ತು ಏನು ರೆವಿನ್ಯೂ ಇನ್ಸ್‌ಪೆಕ್ಟರ್ ನೂರು ಕೇಸುಗಳನ್ನು ಬುಕ್ ಮಾಡಬೇಕೆಂದು ಬರೆದಿದ್ದಾರೆ ಅದರಲ್ಲಿ ಬೆಟ್ಟದಾಸನಪುರದಲ್ಲಿ . ವಿವರ ಬೇಕಾದರೆ ಕೊಡುತ್ತೇನೆ . ಈ ಸದನದಲ್ಲಿ ಇಂದು ರೆಕಾರ್ಡ ಆಗಬೇಕೆಂದು ಹೇಳುತ್ತಿದ್ದೇನೆ. ಏಕೆಂದರೆ, ಮುಂಚೆ ನೀವು ವಿಶ್ವಾಸ ಮತ ಪಡೆದುಕೊಂಡು ಮುಂದಿನ ಅಧಿವೇಶನದಲ್ಲಿ ಬಂದರೂ ಕೂಡ ಇದರ ಬಗ್ಗೆ ನನ್ನ ಹತ್ತಿರ ಕಂಟ್ರೋಲ್ ಇರಬೇಕು.

ಉಪಾಧ್ಯಕ್ಷರು : ನೀವು ಅದನ್ನಲ್ಲಾ ಈಗ ಓದುವುದಕ್ಕಾಗುವುದಿಲ್ಲ. ತಾವು ಮುಕ್ತಾಯ ಮಾಡಬೇಕು. ದಾಖಲೆಗಳನ್ನು ಅವರಿಗೆ ಕಳುಹಿಕೊಡಿ.

ಶ್ರೀ ಯು. ಆರ್. ಸಭಾಪತಿ : ಓದುವುದಕ್ಕೆ ಹೋಗುವುದಿಲ್ಲ, ನಾನು ಅವರಿಗೆ ಕಳುಹಿಸಿ ಕೊಡುತ್ತೇನೆ. ಬೆಟ್ಟದಾಸನಪುರದ ನೂರು ಮಂದಿ ಮೇಲೆ ರೆವಿನ್ಯೂ ಇನ್ಸ್‌ಪೆಕ್ಟರ್ ಅವರು ಕೇಸ್ ಹಾಕಿ ದಂಡ ವಿಚಾರದಲ್ಲಿ ನಿಮ್ಮ ಸರ್ಕಾರಿ ಯಾವುದೇ ಕ್ರಮ ತೆಗೆದುಕೊಳ್ಳದೆ, ನೀವು ಆ ಡೆವಲಪರ್‌ಗಳಿಂದ ನಾನಾ ರೀತಿಯ ಹಣ...

ಉಪಾಧ್ಯಕ್ಷರು : ನಿಮಗೆ ಸಮಯ ಕೊಟ್ಟಿದ್ದು ಒಂದು ಗಂಟೆ, ದಯಮಾಡಿ ಮುಗಿಸಬೇಕು.

ಶ್ರೀ ಯು.ಆರ್. ಸಭಾಪತಿ : ನೀವು ನನ್ನನ್ನು ಕರ್ಬ್ ಮಾಡುತ್ತಿರಿ, ದಾಖಲೆ ಪತ್ರ ಕೊಡುವುದನ್ನು ಕರ್ಬ್ ಮಾಡುತ್ತೀರಿ, ಮಾನ್ಯ ಮಂತ್ರಿಗಳೇ, ಸ್ವಾಮಿ, ನಾನು ದಾಖಲೆ ಪತ್ರವನ್ನು ಸದನದ ಮುಂದೆ ಮಂಡಿಸುವುದು ಬೇಡವೇ ?

ಶ್ರೀ ಜಿ. ಹೆಚ್. ಪಟೇಲ್ : ಅಧ್ಯಕ್ಷರು ಹೇಳಿದ್ದನ್ನು ನೀವು ಮತ್ತೆ ಪ್ರಶ್ನೆ ಮಾಡುತ್ತೀರಿ?

11.50 ಎ.ಎಂ

ಶ್ರೀ ಬಿ.ಎಸ್. ಯಡಿಯೂರಪ್ಪ : ಸಭಾಪತಿಯವರೇ , ನಿನ್ನೆ ಒಂದು ವಿಚಿತ್ರವಾದಂಥ ಸಂದರ್ಭ ಬಂತು ಆಗ ಸದನವನ್ನು ಮುಂದೂಡಿದಿರಿ, ಇವತ್ತು ಮಾನ್ಯ ಸದಸ್ಯರು ಮಾತನಾಡುತ್ತಾ ಇದ್ದಾರೆ. ಇನ್ನೂ ಜನ ಮಾತನಾಡಬೇಕಾಗಿದೆ . ದಯಮಾಡಿ ಕೋ - ಆಪರೇಟ್ ಮಾಡಬೇಕು. ಅಧ್ಯಕ್ಷರು ಹೇಳಿದಮೇಲೆ ದಯಮಾಡಿ ಸಹಕಾರ ಕೊಡಬೇಕು.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಸಭಾಧ್ಯಕ್ಷರೆ, ಇವತ್ತು ಏನು ನಾನು ದಾಖಲೆಪತ್ರಗಳನ್ನು ಕೊಡುತ್ತಾ ಇದ್ದೇನೆ ದಯವಿಟ್ಟು ಇದರ ಬಗ್ಗೆ ಮುಖ್ಯ ಮಂತ್ರಿಗಳು ಖುದ್ದಾಗಿ ಪರಿಶೀಲನೆ ಮಾಡಬೇಕು. ಇವತ್ತು ಎಕರೆಗಟ್ಟಲೆ ಸರ್ಕಾರಿ ಭೂಮಿಯನ್ನು ಲೂಟಿ ಮಾಡುವಂಥ ಜನಗಳಲ್ಲಿ ನಿಮ್ಮ ಅಧಿಕಾರಿಗಳು ಸಹ ಇದ್ದಾರೆ. ಈ ಅಧಿಕಾರಿಗಳ ಮೇಲೆ ನಿಮ್ಮ ಹಿರಿತ ಏನು, ಎಂದು ನೀವು ಸ್ಪಷ್ಟವಾಗಿ ತೀರ್ಮಾನ ಮಾಡಿ. ಇವತ್ತು ಏನು ನಾನು ನೂರು ಕೇಸ್‌ಗಳನ್ನು ಹೇಳಿದ್ದೇನೆ. ಇದನ್ನು ನಾನು ನಿಮಗೆ ಮಾತ್ರ ಕೊಡುವುದಲ್ಲ , ಇದರ ಕಾಪಿಯನ್ನು ಪತ್ರಿಕೆಗಳಿಗೂ ನಾನು ಕೊಟ್ಟು ಬಿಡುತ್ತೇನೆ; ಪತ್ರಿಕೆಗಳಲ್ಲಿ ಬರಲಿ. ಯಾವಯಾವ ಸರ್ವೆ ನಂಬರ ಎಂದು ಇಲ್ಲಿ ನಾನು ಹೇಳಲಿಕ್ಕೆ ಆಗದಿದ್ದುದರಿಂದ. ಇನ್ನು ಎರಡೇ ನಿಮಿಷದಲ್ಲಿ ನಾನು ಮುಗಿಸುತ್ತೇನೆ ಅಧ್ಯಕ್ಷರೆ. ಕೆರೆ ಹತ್ತಿರದಲ್ಲಿ

ಡೆವಲಪರ್ಸ್ ಜಾಗ ತೆಗೆದುಕೊಳ್ಳುವುದು. ಆಮೇಲೆ ಜಾಗ ತೆಗೆದುಕೊಂಡುಬಿಟ್ಟು ಕೆರೆಯನ್ನು ಎನ್‌ಕ್ರೋಚ್ ಮಾಡಿಕೊಂಡು ಹೋಗುವುದು. ಬೆಂಗಳೂರು ಸಿಟಿಯೊಳಗೆ ಕೆರೆಯನ್ನು ಎನ್‌ಕ್ರೋಚ್ ಮಾಡಿದಂಥ ಅನೇಕ ಕಂದಾಯ ಇಲಾಖೆ ಭೂಮಿಯಲ್ಲಿ ಇವತ್ತು ಕಾನೂನುಬಾಹಿರವಾಗಿ ಡೆವಲಪರ್ಸ್ ಬಿಲ್ಡಿಂಗ್ ಕಟ್ಟುತ್ತಾರೆಂದಾರದೆ ಇದನ್ನು ನಿಗ್ರಹ ಮಾಡುವಲ್ಲಿ ನೀವು ಎಷ್ಟು ಯಶಸ್ವಿಯಾಗಿದ್ದೀರಿ ಎನ್ನುವ ಮಾತನ್ನು ನಾನು ಕೇಳಬಯಸುತ್ತೇನೆ. ಇವತ್ತು ಇದೆಲ್ಲಕ್ಕಿಂತ ಮುಖ್ಯವಾಗಿ ನಾನು ಬಹಳ ಬೇಸರದಿಂದ ಹೇಳುವುದು, ನಮ್ಮ ಮುಜರಾಯಿ ಇಲಾಖೆ. ಮುಜರಾಯಿ ಇಲಾಖೆ ಮಂತ್ರಿಗಳೂ ಕೂಡ ಸ್ವಲ್ಪ ಗಮನದಲ್ಲಿಟ್ಟುಕೊಳ್ಳಬೇಕು. ಒಂದೇ ಒಂದು ಮಾತು ಮುಜರಾಯಿ ಇಲಾಖೆಯಲ್ಲಿ. ಇವತ್ತು ನಮ್ಮ ಮುಜರಾಯಿ ಇಲಾಖೆಗೆ ಸಂಬಂಧಪಟ್ಟಂತೆ ಕೋಟೆ ವೆಂಕಟರಮಣಸ್ವಾಮಿ ದೇವಸ್ಥಾನ ಎಂದು ಇಲ್ಲಿದೆ. ಇದರ ಬಗ್ಗೆ ನಾನು ಅನೇಕ ಪ್ರಶ್ನೆ ಕೇಳಿದೆ. ನಮ್ಮ ಸದಸ್ಯರು ಪ್ರಶ್ನೆ ಕೇಳಿದಾಗಲೆಲ್ಲಾ ಆ ಪ್ರಶ್ನೆಗಳು ಹಾರಿಹೋಗುತ್ತಿತ್ತು. ಕಡೆಗೆ ಯಾವುದಾದರೂ ಒಂದು ರೂಪದಲ್ಲಿ ಬರುತ್ತದೆ. ಉತ್ತರ ಕೊಡುವಾಗ ನಾವು ಹದಿನೈದು ದಿವಸ ಬಿಟ್ಟುಕೊಡುತ್ತೇವೆ, ಆಗಲಿಲ್ಲ ಎಂದು ಹೇಳಿದಿರಿ ನೀವು. ನಾನು ಒಪ್ಪಿಕೊಂಡೆವು. ಇವತ್ತು ಎಷ್ಟು ಅವ್ಯವಹಾರ ಈ ದೇವಸ್ಥಾನದಲ್ಲಿ ನಡೆಯುತ್ತಿದೆ ಎನ್ನುವ ಬಗ್ಗೆ ತಾವು ಎನ್‌ಕ್ವೈರಿ ಮಾಡಬೇಕು. ನೀವು ಎಲ್ಲಾ ದೇವಸ್ಥಾನಗಳಿಗೆ ಸೇವಾದರ ಫಿಕ್ಸ್ ಮಾಡಿದ್ದೀರಿ. ಈ ದೇವಸ್ಥಾನವೊಂದಕ್ಕೆ ಏಕೆ ಸೇವಾದರ ಫಿಕ್ಸ್ ಮಾಡಲಿಲ್ಲ? ನಾನು ಕೇಳುತ್ತಿದ್ದೇನೆ ಲಕ್ಷಾಂತರ ರೂಪಾಯಿ ದೇವರ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ಲೂಟಿ ಮಾಡುತ್ತಾ ಇದ್ದಾರೆ. ಇವತ್ತು ಮುಜರಾಯಿ ಇಲಾಖೆ ಮಹತ್ವದ ಇಲಾಖೆ. ನಿಮಗೆ ಬೇಕಾದಷ್ಟು ಹಣ ಸಂಗ್ರಹ ದೇವರ ಹೆಸರಿನಲ್ಲಿ ಆಗುತ್ತಿದೆ. ನೀವು ಎಲ್ಲವನ್ನೂ ಆ ಅರ್ಚಕರಿಗೆಲ್ಲಾ ಕೊಟ್ಟುಬಿಡುತ್ತೀರಿ. ಅಲ್ಲಿ ಒಬ್ಬರು ಶೇಷಾದ್ರಿ ಭಟ್ಟರು ಎಂಬ ಅರ್ಚಕರಿದ್ದಾರೆ. ಇಲ್ಲಿ ಮುಜರಾಯಿ ಇಲಾಖೆಯಲ್ಲಿ ಆಗಮ ಪಂಡಿತರಾಗಿದ್ದು 6 ಸಾವಿರ ರೂಪಾಯಿ ನಿಮ್ಮ ಸಂಬಳ ಹೋಗುತ್ತಾ ಇದೆ. ಅವರು ಅಲ್ಲಿ ಏನೆಲ್ಲಾ ಅತ್ಯಾಚಾರ ಮಾಡುತ್ತಾರೆ ಎನ್ನುವುದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ ಎಂದು ಹೇಳಿದಕೂಡಲೇ ಮೆನ್ನೆ ನನ್ನ ರೂಮಿಗೆ ಒಂದೆರಡು ಹಾರ ಫಲಪುಷ್ಪ ತೆಗೆದುಕೊಂಡು ಬಂದುಬಿಟ್ಟಿದ್ದರು. ಧರ್ಮ ಉಳಿಸಿ ಎಂದು ನನ್ನ ಹತ್ತಿರ ಹೇಳಿದರು. ನಾನು ಅವರ ಹತ್ತಿರ ಒಂದು ಗಂಟೆ ಆರ್ಗ್ಯೂ ಮಾಡಿದೆ. ಇವತ್ತು ನಾನು ಏಕೆ ಹೇಳುತ್ತೇನೆ? ಇವತ್ತು ಮುಜರಾಯಿ ಇಲಾಖೆಯಲ್ಲಿ ದೇವರ ಹೆಸರಿನಲ್ಲಿ ಧರ್ಮದ ಹೆಸರಿನಲ್ಲಿ ಲೂಟಿಯಾಗುತ್ತಾ ಇದೆ. ಇದನ್ನು ನೀವು ನಿಗ್ರಹಿಸಬೇಕು ಎಂದು ಹೇಳುವುದರೊಂದಿಗೆ ಇನ್ನು ಒಂದೇ ಒಂದು ಮಾತು. ನಿನ್ನೆ ನಡೆದ ಒಂದು ಘಟನೆ. ನಿನ್ನೆ ಸಂಜೆವಾಣಿ ಪತ್ರಿಕೆಯಲ್ಲಿ ನಾನು ನೋಡಿದೆ. ಅದರಲ್ಲಿ ....

ಉಪಾಧ್ಯಕ್ಷರು : ಮುಗಿಸಿಬಿಡಿ ಸ್ವಾಮಿ.

ಶ್ರೀ ಯು. ಆರ್. ಸಭಾಪತಿ: ಅದರಲ್ಲಿ ನಾಲ್ಕು ಜನರ ಫೋಟೊ ಹಾಕಿದ್ದಾರೆ. ಗಣೇಶನ ಹಬ್ಬಕಾಗಿ ಹಣವಸೂಲಿ ಬಗ್ಗೆ ಬಂದಿದೆ. ಅದರ ಬಗ್ಗೆ ಮಾನ್ಯ ವಾಟಾಳ್ ನಾಗರಾಜರು ಹೇಳುತ್ತಾರೆ. ಮಾನ್ಯ ಸ್ಪಷ್ಟವಾಗಿ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದ ಈ ಸರ್ಕಾರದ ಮೇಲೆ ನಮಗೆ ವಿಶ್ವಾಸ ಇಲ್ಲ. ಏಕೆಂದರೆ ನಾವು ಕಳೆದುಕೊಂಡಿದ್ದೇವೆ. 80 ದಿನದಲ್ಲಿ ನಾವು ಇದನ್ನು

ಕಳೆದುಕೊಳ್ಳಬೇಕಾದಂಥ ಒಂದು ವಾತಾವರಣ ಸೃಷ್ಟಿಯಾಗಿದೆ. ಒಂದು ಕಡೆಯಿಂದ ಪಕ್ಷದ ಒಳಗಿನ ಒಳಜಗಳಗಳು. ಒಂದು ಕಡೆಯಿಂದ ಬಹಿರಂಗವಾಗಿ ರಾಮಕೃಷ್ಣ ಹೆಗಡೆಯಂಥ ನಾಯಕರು, ಅವರು ನಿಮ್ಮಲ್ಲಿ ಇದೇ ಕುರ್ಚಿಯಲ್ಲಿ ಆರು ವರ್ಷಗಳ ಕಾಲ ನಿಮ್ಮ ನೇಕಾರರಾಗಿ ಇದ್ದಂಥ ಒಬ್ಬ ವ್ಯಕ್ತಿ. ಅವರು ಭಾಷಣ ಮಾಡಲಿಕ್ಕೆ ಹೋದಾಗ ಅಲ್ಲಿ ಕಲ್ಲು ತೂರಾಟ ಆಯಿತು ಅಂದರೆ......

ಉಪಾಧ್ಯಕ್ಷರು : ಆಯಿತು, ಆಯಿತು, ಮುಗಿಸಿ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಯು. ಆರ್. ಸಭಾಪತಿ : ಲಾ ಅಂಡ್ ಆರ್ಡರ್ ಎಷ್ಟು ಹಾಳಾಗಿದೆ ಎಂದರೆ.......

ಉಪಾಧ್ಯಕ್ಷರು : ಇಲ್ಲ, ಇಲ್ಲ. ತಾವು ಮುಗಿಸಿ.

+ಶ್ರೀ ಯು. ಆರ್. ಸಭಾಪತಿ : ಆದ್ದರಿಂದ ಈ ಸರ್ಕಾರ ಒಂದು ನಿಮಿಷ ಕೂಡ ಮುಂದುವರೆಯುವುದಕ್ಕೆ ಸಾಧ್ಯವಿಲ್ಲ. ಇಂಥ ವ್ಯವಸ್ಥೆಯಲ್ಲಿ ನನ್ನ ಅವಿಶ್ವಾಸ ವ್ಯಕ್ತಪಡಿಸಿ, ನನಗೆ ಇಷ್ಟುಸಮಯಾವಕಾಶ ಕೊಟ್ಟಿದ್ದಕ್ಕೆ ಋಣಿಯಾಗಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : (ಚಾಮರಾಜನಗರ) ಮಾನ್ಯ ಅಧ್ಯಕ್ಷರೇ , ಅವಿಶ್ವಾಸ ನಿರ್ಣಯವನ್ನು ಮಂಡಿಸತಕ್ಕಂಥ ಪರಿಸ್ಥಿತಿ ಇಷ್ಟು ಬೇಗ ಬರುತ್ತದೆ ಎಂದು ನಾವು ಯಾರೂ ಅಂದು ಕೊಂಡಿರಲಿಲ್ಲ . ಇಷ್ಟುಬೇಗ ಬರತಕ್ಕಂಥ ಪರಿಸ್ಥಿತಿಗೆ ಪ್ರಾಮುಖ್ಯವಾಗಿ ಒಂದೆರಡು ಕಾರಣಗಳು, ಒಂದು , ಕಾವೇರಿ ಸಂಬಂಧ ತಮಿಳುನಾಡಿನ ಜೊತೆಯಲ್ಲಿ ಗೌಪ್ಯವಾಗಿ ಮಾತುಕತೆ ಆಡಿದಂಥ ವಿಚಾರ. ಮತ್ತೊಂದು ಆಲಮಟ್ಟಿ ಜಲಾಶಯದ ಬಗ್ಗೆ. ಇವೆರಡೂ ರಾಜ್ಯದ ಜನತೆಯ ಗಮನವನ್ನು ಸೆಳೆಯುವುದರಲ್ಲಿ ಬಹಳ ಪ್ರಾಮುಖ್ಯವಾದಂಥ ವಿಚಾರಗಳು. ಈ ವಿಚಾರದ ಬಗ್ಗೆ ಅವಿಶ್ವಾಸ ನಿರ್ಣಯವನ್ನು ನಾವು ಮಂಡಿಸಿದ್ದೇವೆ. ಈ ಸಂದರ್ಭದಲ್ಲಿ ಈ ಅವಿಶ್ವಾಸದಲ್ಲಿ ಸಮಗ್ರವಾಗಿ ಇಡೀ ಜನತಾದಳ ಸರ್ಕಾರದ ಮೇಲೆ ಅವಿಶ್ವಾಸವೇ ಅಥವಾ ಜೆ. ಎಚ್. ಪಟೇಲರ ಮೇಲೆ ಅವಿಶ್ವಾಸವೇ ಎನ್ನತಕ್ಕಂಥದ್ದು ಒಂದು ಪ್ರಾಮುಖ್ಯವಾದಂಥ ವಿಚಾರ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಜೆ. ಎಚ್. ಪಟೇಲರ ನೇತೃತ್ವದಲ್ಲಿರತಕ್ಕಂಥ ಜನತಾದಳದ ಸರ್ಕಾರ.

ಶ್ರೀ ವಾಟಾಳ್ ನಾಗರಾಜ್: ಇದು ನಮಗೂ ಬಹಳ ಜಿಜ್ಞಾಸೆಯಾಗಿದೆ. ಅವರು ಬಂದು 80 ದಿನ ಆಗಿದೆ, 40 ದಿವಸ ಇಲ್ಲಿ ಕುಳಿತಿದ್ದಾರೆ., 20 ದಿವಸ ಡೆಲ್ಲಿ ಗಿಲ್ಲಿ ಓಡಾಡಿದ್ದಾರೆ. ನಾವು

ಇಲ್ಲಿ ಬಹಳ ಲೆಕ್ಕ ಹಾಕುತ್ತಿದ್ದೇವೆ, ಎಷ್ಟು ದಿವಸದ ಕಾಲ ನಡೆದಿರತಕ್ಕ ಆಡಳಿತದ ಬಗ್ಗೆ ಅವಿಶ್ವಾಸ ಎನ್ನತಕ್ಕ ಪ್ರಶ್ನೆ ಒಂದು. ನನಗನ್ನಿಸುತ್ತದೆ ಪಾಪ ಅವಿಶ್ವಾಸ ನಿರ್ಣಯ ಮಂಡನೆ ಮಾಡತಕ್ಕಂಥ ಪರಿಸ್ಥಿತಿ, ಆ ಒಂದು ಅಪಾಯಕ್ಕೆ ಆ ಧರ್ಮಸಂಕಟಕ್ಕೆ ಆ ಪರಿಸ್ಥಿತಿ ಇವರ ಮೇಲೆ ನಿರ್ಮಾಣ ಆಯಿತಲ್ಲಾ ಎನ್ನತಕ್ಕದ್ದು ಒಂದು ಕಡೆ ಚಿಂತನೆ ಇದ್ದರೂ, ಪರಿಸ್ಥಿತಿ ಅಲ್ಲಿಗೆ ತಂದೊಡ್ಡಿತು. ನಾವೆಲ್ಲರೂ ಆ ಪರಿಸ್ಥಿತಿಯ ಶಿಶುಗಳು. ಆ ಪರಿಸ್ಥಿತಿ ಬರಬಾರದಾಗಿತ್ತಲ್ಲಾ ಪಾಪ, ಎಂದು ಹೇಳಿದರೂ ಅಪರಾಧ ಆಗುತ್ತದೆ. ಓ ಏನಿದು ಅವಿಶ್ವಾಸ ಒಂದು ಕಡೆ ಮಂಡಿಸಿ, ಮತ್ತೊಂದು ಕಡೆ ನೀವು ಪಾಪ ಎಂದು ಹೇಳುತ್ತಿದ್ದೀರಲ್ಲಾ ಎಂದು ಕೇಳಿದರೆ ಬಹಳ ಅಘಾತಕ್ಕೆ ಸಿಕ್ಕುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅವರದು 60 ದಿವಸ 70 ದಿವಸ ಎಂದು ಲೆಕ್ಕ ಹಾಕಬೇಡಿ. 40 ಎಕರೆಯಲ್ಲೂ ಒಂದೇ ದಿವಸ ಬೀಜ ಬಿತ್ತಬಹುದು. ಒಳ್ಳೆಯ ಬೀಜ ಅಥವಾ ಕೆಟ್ಟ ಬೀಜ ಎಂದು ಏನೂ ಇಲ್ಲ. ಅದೇನೂ ಬಹಳ ದಿವಸ ಬೇಕಾಗುವುದಿಲ್ಲ ಅಧ್ಯಕ್ಷರೆ.

ಶ್ರೀ ವಾಟಾಳ್ ನಾಗರಾಜ್ : ಬೀಜ ಬಿತ್ತಬೇಕಾದರೆ ಜಮೀನೂ ಚೆನ್ನಾಗಿರಬೇಕು. ಮಳೆಯೂ ಚೆನ್ನಾಗಿ ಬರಬೇಕಲ್ಲ . ಒಂದು ಕಡೆ ಮಳೆಯ ಅಭಾವ, ಒಂದು ಕಡೆ ಜಮೀನಿನ ಅಭಾವ, ಬೀಜ ಬಿತ್ತುವುದಕ್ಕಾಗುವುದಿಲ್ಲವೆ? ಅಲ್ಲೇ ಬಂದಿರುವುದು ತಾಪತ್ರಯ . ಒಂದು ದಡೆ ಜಮೀನು, ಮತ್ತೊಂದು ಕಡೆ ಮಳೆ ಅಭಾವ ಇನ್ನೊಂದು ಕಡೆ ಬಿಸಿಲಿನ ಕಾಟ; ಪೈರು ಒಣಗುತ್ತದೆ. ಬೀಜ ಸರಿಯಿಲ್ಲ, ಕೆಲಸಕ್ಕೆ ಬಾರದ ಬೀಜಗಳು. ಉತ್ತಮವಾದ ನೇಗಿಲಯೋಗಿ ರೈತ ಇದ್ದರೆ ಏನು ಮಾಡುವುದಕ್ಕಾಗುತ್ತದೆ? ಸಾಧ್ಯ ಇಲ್ಲ. ಆಗುವುದಿಲ್ಲ ನೇಗಿಲೇ ಸರಿಯಿಲ್ಲದಿದ್ದರೆ.

ಶ್ರೀ ಬಿ. ಎಸ್. ಯಡಿಯೂರಪ್ಪ: ಇವತ್ತು ರಾಜ್ಯ ಸರ್ಕಾರದ ಆಡಳಿತದ ಬಗ್ಗೆ ಅವಿಶ್ವಾಸ ನಿರ್ಣಯ ಮಂಡಿಸಿದ್ದೇವೆ. ಇವತ್ತು ನಾಡಿನ ನೆಲ, ಜನ ಶುದ್ಧವಾಗಿದ್ದರೆ ; ಸಮೃದ್ಧವಾಗಿದೆ. ಆಡಳಿತ ಕುಲಗೆಟ್ಟು ಹೋಗಿರುವುದರಿಂದ ಬೀಜವೇ ಸರಿಯಿಲ್ಲದಿರುವುದರಿಂದ ಆಡಳಿತ ನಡೆಸುವವರೇ ಸರಿಯಿಲ್ಲದೇ ಇರುವುದರಿಂದ ಒಂದು ದಿನ ಆದರೇನು, ಎರಡು ದಿನ ಆದರೇನು ಕುಲಗೆಟ್ಟುಹೋಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ನೇರವಾಗಿ ತಕ್ಷಣಕ್ಕೆ ಆ ನಿರ್ಧಾರಕ್ಕೆ ಬಯಬಿಟ್ಟರೆ ಪರಿಸ್ಥಿತಿ ಹೇಗೆ? ಪಾಪ, ಪಟೇಲರಿಗೆ ಗ್ರಹಚಾರ ಸರಿಯಿಲ್ಲವೋ ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ : ಅದು ಹೇಳಿ. ಈಗ ಓಟು ನಮ್ಮ ಕಡೆ ಬರಬಹುದು. ಈಗ ಪರ್ವಾಗಿಲ್ಲ. ಮೊದಲು ನನಗೇಕೋ ಸಂಶಯ ಬರುತ್ತಿತ್ತು.

ಶ್ರೀ ವಾಟಾಳ್ ನಾಗರಾಜ್ : ಎಲ್ಲರಿಗೂ ಒಂದೊಂದು ಗ್ರಹಚಾರ ಇದೆ. ಆದ್ದರಿಂದ ನನಗನ್ನಿಸುತ್ತದೆ ಗ್ರಹಚಾರದ ಬಗ್ಗೆ ಜ್ಯೋತಿಷ್ಯದ ಬಗ್ಗೆ ಅವರೇನು ಆ ತರಹ ನಂಬಿಕೆಗಳನ್ನು ಇಟ್ಟುಕೊಂಡಿಲ್ಲ ಎಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಜಿ. ಎಚ್. ಪಟೇಲ್ : ಎರಡು ಗ್ರಹಗಳು ಈಗ ಕಾಡುತ್ತಾ ಇವೆ. ಒಂದು ಯಡಿಯೂರಪ್ಪನವರು ಇನ್ನೊಂದು ಖರ್ಗೆಯವರು ಅದು ನಿಜ.

ಶ್ರೀ ವಾಟಾಳ್ ನಾಗರಾಜ್ : ಆ ಗ್ರಹಗಳ ಆಚಾರ, ಗ್ರಹಚಾರ. ಇಲ್ಲ, ಇಲ್ಲ. ಅವರನ್ನು ಗ್ರಹಗಳು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅವರು ಗ್ರಹಗಳಾಗಿದ್ದರೆ, ನಿಜವಾಗಿ ಯಾವಯಾವ ಗ್ರಹ ಎಂದು ಲೆಕ್ಕ ಹಾಕಿದರೆ ಅವರು ಶನಿ ಗ್ರಹಗಳಲ್ಲ. ಅವರಿಬ್ಬರೂ ಬೇರೆ ಗ್ರಹಗಳು. ಈ ಗ್ರಹಗಳಿಂದ ಅನುಕೂಲವಾಗಬಹುದೇ ಹೊರತು ಬೇರೆ ಏನೂ ಆಗುವುದಿಲ್ಲ. ಆದರೆ ನಿಮ್ಮಲ್ಲಿ ಕೆಲವು ಗ್ರಹಗಳಿವೆ. ಆ ಗ್ರಹಗಳು ನಿಮ್ಮ ಹಿಂದೆ ಬೆನ್ನು ಹತ್ತಿರುವುದು. ಆ ಗ್ರಹಚಾರ ಬಿಡಿಸಿಕೊಳ್ಳಬೇಕು ನೀವು. ಅದಕ್ಕೆ ಒಂದು ಶನಿಗ್ರಹ ನಿಮ್ಮಲ್ಲಿದೆ. ಇಲ್ಲವೆಂದು ನಾವು ಹೇಳುವುದಕ್ಕಾಗುವುದಿಲ್ಲ. ಅದು ಯಾರೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈಗ ಅದು ಅಪ್ರಕೃತವಾಗುತ್ತದೆ ಈ ಸಂದರ್ಭದಲ್ಲಿ ನಾನು ಅದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ: ಮಾನ್ಯ, ವಾಟಾಳ್‌ನಾಗರಾಜ್‌ರವರೇ ಒಂದು ನಿಮಿಷ ಮಾನ್ಯ ಪಟೇಲರು ನಮ್ಮನ್ನು ಗ್ರಹಗಳೆಂದು ಹೇಳಿದರು. ಮಾನ್ಯ ಪಟೇಲರು ಹಿರಿಯರು ಇದ್ದರೆ. ಯಾರಿಗೆ ಗ್ರಹ ಹಿಡಿದಿದೆ ಎಂಬುದು ನಾಲ್ಕೈದು ಗಂಟೆಯಾಹೊತ್ತಿಗೆ ಗೊತ್ತಾಗುತ್ತದೆ. ಪ್ರಶ್ನೆ ಏನೆಂದರೆ, ನೆನ್ನೆ ದ್ರೌಪದಿಯ ವಸ್ತ್ರಾಪಹರಣದ ಬಗ್ಗೆ ಚರ್ಚೆಯಾಯಿತು. ತಾವು ಕೇಳಿದಿರಿ, ಮಾನ್ಯ ವಾಟಾಳ್ ನಾಗರಾಜ್‌ರವರ ಪ್ರಶ್ನೆಗೆ ನಾನು ನಿನ್ನೆ ಉತ್ತರ ಕೊಟ್ಟಿರಲ್ಲಿಲ್ಲ. ಇವತ್ತು ದ್ರೌಪದಿ ಯಾರು? ದುಶ್ಯಾಸನ ಯಾರೆಂದು ನೀವು ಕೇಳಿದಿರಿ. ನಿಜವಾದ ಸಾಧ್ವಿ ದ್ರೌಪದಿ ಯಾರೆಂದರೆ ಈ ನಾಡಿನ ಜನ. ಮಾನಾಪಹರಣ ಮಾಡುತ್ತಿರುವವರು ಯಾರು. ದುಶ್ಯಾಸನ ಸ್ಥಾನ ಯಾರು - ಇವತ್ತು ಈ ಸರ್ಕಾರವಲ್ಲವೇ ? ನಿಮ್ಮ ನೇತೃತ್ವದ ಸರ್ಕಾರ. ನಿನ್ನೆ ತಾವು ಪ್ರಶ್ನೆ ಕೇಳಿದಿರಿ; ಮಾನ್ಯ ಪಟೇಲರು ನನ್ನನ್ನು ಮತ್ತು ಮಾನ್ಯ ಖರ್ಗೆಯವರನ್ನು ಗ್ರಹ ಎಂದು ಕರೆದಮೇಲೆ ನಾವು ಆ ಮಾತನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಯಾರು ದುಶ್ಯಾಸನ, ಯಾರು ದ್ರೌಪದಿ ಎನ್ನುವುದು ಕ್ಲಿಯರ್ ಆಗಬೇಕಾಗಿದೆ.

ಶ್ರೀ ಜಿ. ಹೆಚ್. ಪಟೇಲ್ : (ಮುಖ್ಯಮಂತ್ರಿ ಯವರು) ಮಾನ್ಯ, ಉಪಾಧ್ಯಾಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಸರ್ಕಾರ ದುಶ್ಯಾಸನ ಪಾರ್ಟಿ ಮಾಡುತ್ತಿದೆ. ಜನ ದ್ರೌಪದಿಯೆಂದರು. ಅಲ್ಲಿ ಮುದುಕರೇ ಒಂದಿಷ್ಟು ಜನ ದ್ರೋಣ, ಭೀಷ್ಮ, ಅಶ್ವತ್ಥಾಮ ಇವರೆಲ್ಲಾ ಕುಳಿತುಕೊಂಡು ನೋಡುತ್ತಿದ್ದರು. ಇವರು ಏಕೆ ದುಶ್ಯಾಸನ ದ್ರೌಪದಿಯ ಸೀರೆ ಎಳೆಯುವುದನ್ನು ಬಿಡಿಸಲಿಲ್ಲ? ಅವರ ಕೆಲಸ ಮಾಡುತ್ತಿದ್ದಾರೆ ಈಗ ಇವರು ನೋಡುತ್ತಿದ್ದಾರೆ. ಇದು ಹೇಗಾಗುತ್ತದೆ ನೋಡೋಣ ಎಂದು.

ಶ್ರೀ ಕೆ. ಎಸ್. ಈಶ್ವರಪ್ಪ: ಮಾನ್ಯ ಉಪಾಧ್ಯಕ್ಷರೆ, ಆ ಭೀಷ್ಮಾಚಾರ್ಯರು, ದ್ರೋಣರು ಇವರೆಲ್ಲಾ ಇದ್ದಾರಲ್ಲಾ ಪಾಪ ಅವರೊಂದು ತರಹ ಏನು ಮಾಡಬೇಕೂನ್ನುವಂತಹ ಧರ್ಮಸಂಕಟಗಳಲ್ಲಿದ್ದಾರೆ. ದುಶ್ಯಾಸನ ಮಾಡುತ್ತಿರುವಂತಹ ಕೆಲಸ ಗೊತ್ತಿದ್ದರೂ ಕೂಡ ಕಡೆ ದ್ರೌಪದಿ ತೊಂದರೆ ಅನುಭವಿಸುತ್ತಿದ್ದರೂ ಕೂಡ ನಾವು ರಕ್ಷಣೆ ಮಾಡುವಂತಹ ಸ್ಥಿತಿಯಲ್ಲಿ ಇಲ್ಲವಲ್ಲಾ ಎಂದು ಹೇಳಿ ಒಂದು ರೀತಿ ರಾಮಕೃಷ್ಣ ಹೆಗಡೆಯವರ ಬೆಂಬಲಿಗರಾಗಿ ಒದ್ದಾಡುತ್ತಿದ್ದಾರೆ. ಇವತ್ತು ಸಂಜೆಯೊಳಗೆ ಅವರು ಹೊರಗೆ ಬರುತ್ತಾರೆ.

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ನನ್ನ ದೃಷ್ಟಿಯಲ್ಲಿ ಅವಿಶ್ವಾಸ ಮಂಡಿಸಿದ್ದರೂ ಮಾನ್ಯ ಜೆ. ಹೆಚ್. ಪಟೇಲರನ್ನು ನಾನು ಕರ್ಣ ಎಂದು ಹೇಳುತ್ತೇನೆ. ಅವರ ಪರಿಸ್ಥಿತಿ ಹಾಗೆ ಇದೆ. ಒಂದು ಕಡೆ ವಜ್ರ ಕವಚವನ್ನು ಕಳೆದುಕೊಳ್ಳುತ್ತಿದ್ದಾರೆ. ಮತ್ತೊಂದು ಕಡೆ ಕರ್ಣ ಕುಂಡಲವನ್ನು ಕಳೆದುಕೊಳ್ಳುತ್ತಿದ್ದಾರೆ. ಇನ್ನೊಂದು ಕಡೆ ಹೃದಯದಲ್ಲಿರತಕ್ಕ ಕ್ಷೀರದಿಂದ ಅಮೃತಕಳಸವನ್ನು ಕೊಟ್ಟು ಧಾರೆಯೆರೆಯಿರಿ ಎಂದು ಹೇಳುತ್ತಿದ್ದಾರೆ. ಕೊನೆಗೆ ಅವರು ಧಾರೆಯೆರೆದ ಮೇಲೆ ಮುಗಿಯಿತಲ್ಲಾ. ಅಲ್ಲಿಗೆ ವಿಷ್ಣುದರ್ಶನವಾಗಬೇಕು. ಕೊನೆಗೆ ಹೋಗುತ್ತಾನೆ. ಆ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಈಗ ವಜ್ರಕವಚ ಕಿತ್ತಿದ್ದಾರೆ. ಇವತ್ತು ಕರ್ಣನ ಪರಿಸ್ಥಿತಿ ಅವರದ್ದು ಆಗಿದೆ. ಅದರಲ್ಲಿ ಏನೂ ಬೇರೆ ಮಾತಿಲ್ಲ. ಸ್ವಾಮಿ , ಬಹಳ ಕಷ್ಟದಲ್ಲಿದ್ದಾರೆ. ನಾನು ಒಪ್ಪುತ್ತೇನೆ. ಆದರೂ 40 ದಿವಸ, ಮೂರೇ ದಿವಸ ಇರಲಿ ನನ್ನ ಆಡಳಿತ ನೋಡಿಯೆಂದು ಹೇಳಿ ಒಂದು ಸರಿಯಾದ ಆಡಳಿತವನ್ನು ಕೊಟ್ಟು ನಾಲ್ಕನೆಯ ದಿವಸ ಹೋಗಿದ್ದರೆ , ಅವರ ಬಗ್ಗೆ ಶಹಭಾಷಗಿರಿ ಕೊಡುತ್ತಿದ್ದೆ. ನಾನು ಇವತ್ತು ಅವರ ಚೈತನ್ಯವನ್ನು ಅವರ ಶಕ್ತಿಯನ್ನು ಅವರ ಪ್ರೌಢಿಮೆಯನ್ನು ಅವರ ಸೇವೆಯನ್ನು ನಾನೆಂದೂ ಅಲ್ಲಗಳೆಯುವುದಕ್ಕೆ ಹೋಗುವುದಿಲ್ಲ. ಅವರು ಉದಾತ್ತವಾದ ತ್ಯಾಗವನ್ನು ಮಾಡಿದ್ದಾರೆ. ಅವರದು ಇತಿಹಾಸವಿದೆ. ಗೋಪಾಲಗೌಡರ ಜೊತೆಯಲ್ಲಿ ಲೋಹಿಯಾರವರ ಜೊತೆಯಲ್ಲಿ, ಕಾಗೋಡುಸತ್ಯಾಗ್ರಹದಲ್ಲಿ ಭಾಗವಹಿಸಿದವರು. ಇತಿಹಾಸದಲ್ಲಿ, ಇವೆಲ್ಲ ನೆನಪುಗಳು ಈ ಜನರೆಲ್ಲಾ ಯಾವುದೇ ಆಸೆಯನ್ನಿಟ್ಟುಕೊಂಡು ಬಂದಂತಹ ಜನರಲ್ಲ. ಯಾವುದೇ ಒಂದು ಪಿತೂರಿಯನ್ನು ಮಾಡಬೇಕೆನ್ನುವ ಉದ್ದೇಶ ಇವರಿಗಿಲ್ಲ. ರಾಜಕಾರಣ ಮಾಡಬೇಕೆಂದರೆ, ರಾಜಕಾರಣ ಎನ್ನುವುದಕ್ಕೆ ಒಂದು ವಿಶಿಷ್ಟವಾದ ಸ್ಥಾನವಿದೆ. ಆದರೆ ರಾಜಕಾರಣ ಮಾಡುವ ಬುದ್ಧಿವಂತಿಕೆಯಿಲ್ಲ. ರಾಜಕಾರಣ ಮಾಡತಕ್ಕ ಕೆಟ್ಟ ಯೋಚನೆ ಇಲ್ಲ. ರಾಜಕಾರಣ ಮಾಡತಕ್ಕ ಒಂದು ತತ್ವದ ಯಾವುದೇ ಒಂದು ದೃಷ್ಟಿಯಲ್ಲಿ ಇಲ್ಲ. ನಾನು ನೋಡುತ್ತಿದ್ದೇನೆ, ಆದರೆ ಇವರು ಮುಖ್ಯಮಂತ್ರಿಯಾದ ನಂತರ ಈ ರಾಜ್ಯದ ದಿಕ್ಕನ್ನು ಒಂದು ಹೊಸ ದಿಕ್ಕಿಗೆ ಬದಲಾವಣೆ ಮಾಡುತ್ತಾರೆನ್ನತಕ್ಕದ್ದು ನನ್ನ ಅತ್ಯಂತ ಕಳಕಳಿಯ ನಂಬಿಕೆಯಾಗಿತ್ತು. ಅವರು ಯಾವುದಕ್ಕೂ ತಲೆಕೆಡಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ . ಇದುವರೆಗೂ ಬಂದಂತಹ ಮುಖ್ಯಮಂತ್ರಿಗಳ ಪೈಕಿಯಲ್ಲಿ ಯಾವುದೇ ವಿಷಯಕ್ಕೆ ತಲೆಯನ್ನು ಕೆಡಿಸಿಕೊಳ್ಳದೆ ಆರಾಮವಾಗಿರತಕ್ಕ ಒಬ್ಬ ಮುಖ್ಯಮಂತ್ರಿಗಳೆಂದರೆ ಸನ್ಮಾನ್ಯ ಶ್ರೀ ಜೆ. ಹೆಚ್. ಪಟೇಲರು. ಆದರೆ ಈ 40 ದಿವಸದಿಂದ ಅವರಿಗೊಂದು ರೀತಿ ತಳಮಳವಾಗಿದೆ. ಒಂದು ಕಡೆ ಬಹಳ ಕಷ್ಟ , ಒಂದು

ಕಡೆ ಬಹಳ ನಿಷ್ಠೂರ ಒತ್ತಡ. ಮತ್ತೊಂದು ಕಡೆ ಅತೃಪ್ತರ ಒತ್ತಡ. ಇನ್ನೊಂದು ಕಡೆ ಇದು ಯಾವುದೂ ಇಲ್ಲದವರು ಇದೊಂದು ರೀತಿ ಮೂರು ವರ್ಗ, ನನಗನಿಸುತ್ತದೆ ಇದು ಒಂದು ರೀತಿ ಮೂರು ಜನ ಹೆಂಡಿರನ್ನು ಕಟ್ಟಿಕೊಂಡರೆ ಅವನ ಹಣೆಯಬರದ ಏನಾಗುತ್ತದೆ ಆ ಪರಿಸ್ಥಿತಿ ಇವರಿಗೆ ಆಗಿದೆ. ಇಬ್ಬರು ಹೆಂಡಿರ ಕಾಟ ಇರುಳು ತಿಗಣೆಯ ಕಾಟ. ಇದು ಮೂರು ಜನ ಹೆಂಡಿರ ಕಾಟ. ಇದು ಬಹಳ ಕಷ್ಟ, ಅದರಲ್ಲಿ ಒಬ್ಬಳು ಗಯ್ಯಾಳಿ ಹೆಂಗಸೊಬ್ಬಳು, ಬಹಳ ಗಯ್ಯಾಳಿ, ಬಿಡೋದಿಲ್ಲ ಗಂಡನನ್ನು ಎಂಬ ಹೆದರಿಕೆ ಅವರಿಗೆ, ಗಯ್ಯಾಳಿಯ ಜೊತೆಯಲ್ಲಿ ಹೊಂದಿಕೊಳ್ಳಬೇಕು. ನಿಷ್ಟ ಹೆಂಡತಿಯ ಜೊತೆಯಲ್ಲಿ ಹೊಂದಿಕೊಳ್ಳಬೇಕು.

ಶ್ರೀ ಮತಿ ಪ್ರಮೀಳಾ ನೇಸರ್ಗಿ : ಹೆಂಗಸರು ಅಂದರೆ ಗಯ್ಯಾಳಿಗಳೇ? ಇದನ್ನು ನಾನು ಖಂಡಿತಾ ಒಪ್ಪುವುದಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ದಯವಿಟ್ಟು ಕ್ಷಮಿಸಬೇಕು. ಆ ತರಹ ಪದಗಳನ್ನು ತಾವು ಉಪಯೋಗಿಸಬಾರದು.

ಶ್ರೀ ವಾಟಾಳ್‌ನಾಗರಾಜ್ : ಗಯ್ಯಾಳಿ ಅಂದರೆ ತಮಗೆ ಗೊತ್ತಿದೆ, ಶ್ರೀಮತಿ ಪ್ರಮೀಳಾರವರೇ, ಗಯ್ಯಾಳಿಯೆಂದರೆ ದರ್ಪ , ಹೆಚ್ಚಿಗೆ ಮಾತನಾಡತಕ್ಕವರು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಇಲ್ಲ ಇಲ್ಲ ಹಾಗಲ್ಲ, ತಾವು ಬಹಳ ಅಪಾರ್ಥ ಮಾಡುತ್ತಿದ್ದೀರಿ. ನಾನು ಬಹಳ ಅಬ್ಜೆಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಉಪಾಧ್ಯಕ್ಷರೆ, ನನಗೆ ತಾವು ರಕ್ಷಣೆ ಕೊಡದಿದ್ದರೆ ಹೇಗೆ? ಅವರು ಏನು ಹೇಳುತ್ತಾರೆ ಹೆಚ್ಚಿಗೆ ಮಾತನಾಡುವವರು ಎಂದು ಹೇಳುತ್ತಾರೆ. ಈ ಸಭೆಯಲ್ಲಿ ಹೆಚ್ಚಿಗೆ ಮಾತನಾಡುವವರು ಅವರನ್ನು ಬಿಟ್ಟರೆ ಬೇರೆ ಯಾರೂ ಇಲ್ಲ. ಈ ಸಭೆಯಲ್ಲಿ ಹೆಚ್ಚಿಗೆ ಮಾತನಾಡತಕ್ಕವರು ನಿಮ್ಮನ್ನು ಬಿಟ್ಟರೆ ಇನ್ನಾರೂ ಇಲ್ಲ. ಅಂದರೆ ನಿಮ್ಮನ್ನು ಹಾಗೆ ಕರೆಯಲೇ? ನನ್ನ ಬಾಯಲ್ಲಿ ಅಂತಹ ಪದಗಳು ಬರುವುದಿಲ್ಲ. ಆ ತರಹ ಭಾಷೆ ನನ್ನ ಬಾಯಲ್ಲಿ ಬರುವುದಿಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ: ಹಾಗಾದರೆ ಗಯ್ಯಾಳಿ ಗಂಡಸರು ಎಂದು ಹೇಳಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನನ್ನ ಬಾಯಲ್ಲಿ ಆ ತರಹ ಪದಗಳು ಬರುವುದಕ್ಕೆ ಸಾಧ್ಯವಿಲ್ಲ. ಅಂತಹ ಮಾತುಗಳನ್ನು ದಯವಿಟ್ಟು ಉಪಯೋಗಿಸಬೇಡಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಉಪಾಧ್ಯಕ್ಷರೆ, ಈ ಕಡೆ ಸ್ವಲ್ಪ ನೋಡಿ. ಬರೀ ಆ ಕಡೆಯೇ ನೋಡುತ್ತೀರಿ, ಈ ಕಡೆ ಸ್ವಲ್ಪ ನೋಡ್ರಿ.

ಉಪಾಧ್ಯಕ್ಷರು : ತಾವು ಅದೇನು ಹೇಳುತ್ತಿರೋ ಹೇಳಿ .

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ವಾಟಾಳ್‌ನಾಗರಾಜ್‌ರವರು ಕನ್ನಡ ಅಭಿಮಾನಿಗಳು. ಕನ್ನಡವನ್ನು ಬಹಳ ಶುದ್ದವಾಗಿ ಮಾತನಾಡತಕ್ಕವರು. ಯಾವ್ಯಾವ ಶಬ್ದಕ್ಕೆ ಏನೇನು ಅರ್ಥ ಬರುತ್ತದೆ ಅದನ್ನು ಅವರು ಏಕೆ ಅರ್ಥಮಾಡಿಕೊಳ್ಳಲಿಲ್ಲವೆಂದು ಇವತ್ತು ನನಗೆ ವ್ಯಥೆಯಾಗುತ್ತಿದೆ. ಕನ್ನಡವನ್ನು ಬಹಳ ಸ್ಪಷ್ಟವಾಗಿ ಮಾತನಾಡತಕ್ಕ ವಾಟಾಳ್‌ನಾಗರಾಜ್‌ರವರು ಕೆಲವು ಕನ್ನಡ ಶಬ್ದಗಳನ್ನು ಯಾವರೀತಿ ಪ್ರಯೋಗ ಮಾಡಬೇಕೆನ್ನುವುದನ್ನು ಏಕೆ ಅರ್ಥಮಾಡಿಕೊಂಡಿಲ್ಲ ? ಅವರು ಏಕೆ ಈ ಮಟ್ಟಕ್ಕೆ ಬಂದರು ಎಂದು ನಾನು ಯೋಚನೆ ಮಾಡುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್ : (ಮುಖ್ಯಮಂತ್ರಿಗಳು) ಮಾನ್ಯ ಉಪಾಧ್ಯಕ್ಷರೆ, ಗಯ್ಯಾಳಿ ಅಂದರೆ ಬಹಳ ಮಾತನಾಡುವವರಿಗೆ ವಾಚಾಳಿ ಎನ್ನುತ್ತಾರಲ್ಲಾ ಹೆಂಗಸಿಗೆ ವಾಚಾಳಿ ಅಂದರೆ ಆದರ ಅರ್ಥವೇ ಅದು. ಅದರೊಳಗೆ ಏನೂ ಕೆಟ್ಟ ಅರ್ಥವಿಲ್ಲ. ಬಹಳ ಹೆಚ್ಚು ಹಠ ಮಾಡುವುದು, ಅಥವಾ ಇದೇ ಸರಿಯೆಂದು ಹೇಳುವುದು ಅಂತರವರಿಗೆ ಅದು ಅನ್ವಯವಾಗುತ್ತದೆ. ಅದಕ್ಕೆ ಕೆಟ್ಟ ಅರ್ಥವೇ ಇಲ್ಲ. ಅದಕ್ಕೆ ಏಕೆ ಹೀಗೆ ಹೇಳುತ್ತೀರಿ ?

ಶ್ರೀಮತಿ ಪ್ರಮೀಳಾ ನೇಸರ್ಗಿ : ಈ ನಾಡಿನ ಮುಖ್ಯಮಂತ್ರಿಗಳ ಅನುಭವ ಇಷ್ಟಾದರೆ, ಈ ದೇಶದ ಹೆಣ್ಣುಮಕ್ಕಳ ಗತಿಯೇನು ಎನ್ನುವುದು ನನಗೆ ಅರ್ಥವಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ನಾನು ಬಹಳ ಎಚ್ಚರದಿಂದಲೇ ಮಾತನಾಡುತ್ತಿರುತ್ತೇನೆ. ಒಂದೊಂದು ಸಾರಿ ಆ ಕಡೆ ಈ ಕಡೆ ಎರಡೂ ಕಡೆ ನಾನು ನೋಡುತ್ತೇನೆ. ಈ ಕಡೆ ಪ್ರಮೀಳಾರವರನ್ನು ನೋಡುತ್ತೇನೆ, ಆ ಕಡೆ ನಾಲ್ಕು ಜನ ಮಹಿಳೆಯರನ್ನು ನೋಡುತ್ತೇನೆ. ಅವರು ಯಾವತ್ತೂ ನನ್ನ ವಿರುದ್ಧ ಧಾಳಿ ಮಾಡುವುದಕ್ಕೆ ಹೋಗುವುದಿಲ್ಲ. ಅದೇನು ನಮ್ಮವರೇ ನನ್ನ ಮೇಲೆ ಬೀಳುತ್ತಿದ್ದೀರಿ, ಇದೇನು ನನ್ನ ಹಣೆಯಬರಹವೇ ಸರಿಯಿಲ್ಲ. ಇದು ನನ್ನ ಕರ್ಮ ಎಂದು ಕಾಣುತ್ತದೆ. ''ನಾ ಮಾಡಿದ ಕರ್ಮ ಬಲವಂತವಾದರೆ ನೀಮಾಡುವುದೇನು ಹರಿಯೇ ಎಂದು ಹೇಳಿ ಹಾಗೆ ಇದು ಬಹಳ ಕಷ್ಟ. ಶ್ರೀಮತಿ ಪ್ರಮೀಳಾರವರೇ, ನಾನು ಯಾವಾಗಲೂ ನಿಮ್ಮ ಪರ ಇದ್ದೇನೆ. ಇದು ಏಕೆ ನೀವು ಹೆಜ್ಜೆ ಹೆಜ್ಜೆಗೂ ನನ್ನ ಮೇಲೆ ನಿಲ್ಲುತ್ತಿರಿ ? ನಾನು ಏನಾದರೂ ನಿಮ್ಮನ್ನು ಕುರಿತು ಯಾವಾಗಲಾದರೂ ಮಾತನಾಡುತ್ತೇನೆಯೆ ?

ಶ್ರೀಮತಿ ಪ್ರಮೀಳಾ ನೇಸರ್ಗಿ: ನೀವು ಯಾವಾಗಲಾದರೂ ತಪ್ಪುಹಾದಿಯಲ್ಲಿ ಹೋದಾಗ ಅದನ್ನು ಸರಿಪಡಿಸಲಿಕ್ಕೆ ಬರಬೇಕಾದ್ದು ನನ್ನ ಕರ್ತವ್ಯ. ಆ ಕೆಲಸ ಮಾತ್ರ ನಾನು ಮಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳ ಪರಿಸ್ಥಿತಿಯನ್ನು ನಾನು ಬಹಳ ಅತ್ಯಂತ ಗಂಭೀರವಾಗಿ ಚಿಂತನೆ ಮಾಡುವಾಗ, ಅವರು ಬಹಳ ಕಷ್ಟಕ್ಕೆ ಸಿಕ್ಕಿದ್ದಾರೆ. ನಾವು ಈ ಸಂದರ್ಭದಲ್ಲಿ ಅವಿಶ್ವಾಸ ನಿರ್ಣಯವನ್ನು ತಂದಿದ್ದೇವೆ.ಅವರ ಅರವತ್ತು ದಿನಗಳಲ್ಲಿ ನಡೆದಿರತಕ್ಕಂಥ

ವಿಚಾರಗಳು, ನನಗನ್ನಿಸುತ್ತದೆ, ಲೋಕಸಭೆ ಚುನಾವಣೆ ನಡೆದಾಗಿನಿಂದ ಇಲ್ಲಿಯವರೆಗೆ ಒಂದು ರೀತಿ ಸರ್ಕಾರವೇ ಇಲ್ಲ. ಲೋಕಸಭೆ ಚುನಾವಣೆ ಆದಾಗಿನಿಂದ ಲೋಕಸಭೆ ಚುನಾವಣೆಯಾಗಿತು, ನಂತರ ಪ್ರಧಾನ ಮಂತ್ರಿಯವರ ಚುನಾವಣೆ, ನಂತರ ಮುಖ್ಯಮಂತ್ರಿಗಳ ಚುನಾವಣೆ. ಹೀಗೆ ಒಂದರಿಂದ ಒಂದು ಇದು ನಡೆದು ಶಾಸನಸಭೆಯ ನಲವತ್ತು ದಿನಗಳ ಕಾಲ ಒಂದು ಕಡೆ. ಇವೆಲ್ಲವನ್ನೂ ನೋಡಿದಾಗ ನನಗನ್ನಿಸುತ್ತದೆ, ಸರ್ಕಾರವೇ ಇಲ್ಲ. ಮುಖ್ಯಮಂತ್ರಿಗಳು ಒಂದುಕಡೆ ಮಾತನಾಡುತ್ತಾ 25 - 30 ದಿವಸಗಳ ಹಿಂದೆ, 'ಏನೂ ಮಾಡುವುದಕ್ಕೆ ಆಗುವುದಿಲ್ಲ, ನನ್ನ ಕೈಯಲ್ಲಿ ಏನೂ ಮಾಡುವುದಕ್ಕೆ ಆಗುತ್ತಾ ಇಲ್ಲ' ಎನ್ನತಕ್ಕಂಥ ಪ್ರಾಮಾಣಿಕವಾದಂಥ ಮಾತನ್ನು ಅವರು ಹೇಳಿದ್ದಾರೆ. ಈ ಪರಿಸ್ಥಿತಿ ನಿರ್ಮಾಣವಾಗಿರುವಾಗ, ನಾವು ಸರ್ಕಾರವೇ ಇಲ್ಲವೆಂದು ಹೇಳುತ್ತಿರುವಾಗ, ನಾವು ಬಹಳ ಎಚ್ಚರಿಕೆಯಿಂದ ಈ ಮಾತನ್ನು ಹೇಳುತ್ತಿದ್ದೇವೆ. ನಿಮ್ಮ ಮುಖಂಡತ್ವ ಬಗ್ಗೆ ಎಂದೂ ನಣು ಯಾವುದೇ ವಿಧವಾದ ತಕರಾರು ತೆಗೆದವನು ಅಲ್ಲ. ನಾವೆಲ್ಲರೂ ವಿರೋಧ ಪಕ್ಷದವರು ನಿಮ್ಮಮೇಲೆ ನೇರವಾಗಿ ಅವಿಶ್ವಾಸ ನಿರ್ಣಯವನ್ನು ತಂದು ನಿಮ್ಮನ್ನು ಕೆಳಗಿಳಿಸಲೇಬೇಕೆಂದು ಪ್ರಮುಖವಾಗಿ ಇದನ್ನು ಮಾಡತಕ್ಕಂಥಾದ್ದು ಅಲ್ಲ. ಎರಡು-ಮೂರು ವಿಚಾರಗಳಲ್ಲಿ ತಾವು ನೇರವಾಗಿ ಎಡವಿದ್ದೀರಿ. ಬೇರೆ ಮಾತು ಇಲ್ಲವೇ ಇಲ್ಲ. ಕಾವೇರಿ ಬಗ್ಗೆ ನಿಮ್ಮ ಗೋಪ್ಯ ಒಪ್ಪಂದ ಏನು? ಇದು ಬಹಿರಂಗ ಆಗಬೇಕು. ನಿಮಗೂ ತಮಿಳುನಾಡಿಗೂ ಆಗಿರತಕ್ಕಂಥ ಒಪ್ಪಂದ ಏನು? ಅದು ಬಹಳ ಪ್ರಾಮುಖ್ಯವಾಗಿ ಬಹಿರಂಗ ಆಗಬೇಕು. ನಿಮ್ಮ ಒಪ್ಪಂದ ಬಹಿರಂಗ ಆಗಲಿಲ್ಲ. ಸುಮ್ಮನೆ ನಮಗೆ ಪತ್ರಿಕೆಯಲ್ಲಿ ಮೇಲ್ನೋಟಕ್ಕೆ ಓದಿದ್ದು ಆಯಿತು. ಶಾಸನಸಭೆಯಲ್ಲಿ ತಾವು ಹೇಳಿಕೆ ಹೇಳಿದ್ದನ್ನು ಕೇಳಿದ್ದಾಯಿತು. ಮತ್ತು ಚಿತ್ರಗಳಲ್ಲಿ ತಾವು ತಮಿಳುನಾಡಿಗೆ ಹೋಗಿದ್ದು, ಆ ಮುಖ್ಯಮಂತ್ರಿಗಳು ತಮ್ಮನ್ನು ಭೇಟಿಯಾದದ್ದು, ಪಂಚತಾರಾ ಹೋಟೆಲಿನಲ್ಲಿ ಗೋಪ್ಯವಾಗಿ ಭೇಟಿಯಾದದ್ದು, ಇಲ್ಲಿ ಬಂದನಂತರ ನೀರು ಹರಿದು ಹೋದದ್ದು, ಇದೆಲ್ಲವನ್ನೂ ನೋಡಿದಾಗ ನಮಗೆ ಒಂದು ರೀತಿಯಲ್ಲಿ ನಾವು ಕತ್ತಲೆಯಲ್ಲಿದ್ದೇವೆ. ಅದು ನಡೆದದ್ದು ಯಾವಾಗ? ನಿಮ್ಮ ಕಾಲದಲ್ಲಿ . ನೇರವಾಗಿ ಅವಿಶ್ವಾಸ, ನಿಮ್ಮ ಸರ್ಕಾರದ ಮೇಲೆ ಬರ ಬೇಕಾದರೆ ತಾವು, ತಮ್ಮ ನಿಯೋಗ ತಮಿಳುನಾಡಿಗೆ ಹೋಗಿಮಾತುಕತೆ ಆಡಿದಂಥ ಗೋಪ್ಯ ವಿಚಾರ ಗಳನ್ನು ಬಯಲು ಮಾಡಬೇಕು. ಈ ರಾಜ್ಯದ ಜನತೆಯ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ಪ್ರಾಮಾಣಿಕವಾಗಿ ಅದನ್ನು ಬಯಲು ಮಾಡಬೇಕು ಎನ್ನತಕ್ಕಂಥಾದ್ದು ನನ್ನ ಅತ್ಯಂತ ಕಳಕಳಿಯ ಮನವಿ. ಯಾವಾಗ ತಾವು ಬಯಲು ಮಾಡಲಿಲ್ಲ ಅಂದಾಗ ನಿಮ್ಮ ಸರ್ಕಾರದ ಮೇಲೆ ನಮಗೆ ವಿಶ್ವಾಸ ಇಲ್ಲ ಎನ್ನತಕ್ಕಂಥಾದ್ದು ಸ್ಪಷ್ಟವಾಗಿ ಸಾಬೀತಾಗುತ್ತದೆ. ಇದರ ಬಗ್ಗೆ ಜಾಸ್ತಿ ದೀರ್ಘವಾಗಿ ಹೋಗುವುದಕ್ಕಿಂತ , ಸ್ವಾಮಿ ಅಲಮಟ್ಟಿ ಜಲಾಶಯದ ಬಗ್ಗೆ ತಾವು ಒಂದು ಕಡೆ ವೀರಾವೇಷದಿಂದ ಗಂಡು ನಿರ್ಧಾರವನ್ನು ತೆಗೆದುಕೊಳ್ಳುತ್ತೀರಿ. ಮತ್ತೊಂದು ಕಡೆ ನಿಮ್ಮ ನಿರ್ಧಾರಕ್ಕೆ ವಿರುದ್ಧವಾಗಿ ಕೇಂದ್ರದಲ್ಲಿ ಪ್ರಧಾನಮಂತ್ರಿಗಳು ನಾಲ್ಕು ಜನ ಮುಖ್ಯಮಂತ್ರಿಗಳ ತಜ್ಞರ ಸಮಿತಿಯನ್ನು ನೇಮಕ ಮಾಡುತ್ತಾರೆ. ಇನ್ನೊಂದು ಕಡೆ ಆಂಧ್ರದ ಮುಖ್ಯಮಂತ್ರಿಗಳು ಅವರು ಒಂದು ಘೋಷಣೆಯನ್ನು ಮಾಡುತ್ತಾರೆ. ಮತ್ತೊಂದು ಕಡೆ ಅನಧಿಕೃತವಾದ ಸಮಿತಿಯನ್ನು ತಾವು ಸ್ವಾಗತ ಮಾಡುತ್ತೀರಿ. ಇದು ಒಂದೆಕ್ಕೊಂದು ಒಂದಕ್ಕೊಂದು ಗೊಂದಲ ಸೃಷ್ಟಿಯಾಗಿ , ನಾವು ಎಲ್ಲಿ ನಿಂತಿದ್ದೇವೆ? ನಾವು ನಾವು ಅಲಮಟ್ಟಿ ಜಲಾಶಯುದ ಬಗ್ಗೆ ಎಲ್ಲಿ ನಿಂತಿದ್ದೇವೆ? ....

ಶ್ರೀ ಹೆಚ್. ಎನ್. ನಂಜೇಗೌಡ: ವಾಟಾಳ್‌ರೇ, ಒಂದು ನಿಮಿಷ ತಾವು ಈಲ್ಡ್ ಆಗುವುದಾದರೆ. ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಮುಖ್ಯಮಂತ್ರಿಗಳ ಪತ್ರಿಕಾ ವರದಿಯನ್ನು ಇವತ್ತು ನೋಡಿದೆ ಇದನ್ನು ಪ್ರಸ್ತಾಪ ಮಾಡಿದ್ದರಂತೆ, ನಾನು ಆಗ ಇರಲಿಲ್ಲ. ಇವತ್ತು ಏನಾಗಿದೆ ಕಥೆ ಎಂದರೆ, ಎಲ್ಲಾ ಕನ್‌ಫ್ಯೂಷನ್. ಕರ್ನಾಟಕದ ನಾವಾದರೂ ಕ್ಲಿಯರ್ ಆಗಿರಬೇಕಾಗಿತ್ತು. ಇದು ಬಹಳ ಗಂಭೀರವಾದಂಥ ವಿಚಾರ. ಇವತ್ತು ಲೋಕಸಭೆಯಲ್ಲಿ ಆಂಧ್ರಪ್ರದೇಶದವರು ಶೂನ್ಯವೇಳೆಯಲ್ಲಿ ಇದನ್ನು ಎತ್ತುತ್ತಾರೆ ಎಂದು ಪತ್ರಿಕೆಯಲ್ಲಿ ಬಂದಿದೆ. ನಮ್ಮ ಲೋಕಸಭಾ ಸದಸ್ಯರಿಗೆ ಎಷ್ಟು ಬ್ರೀಫ್ ಆಗಿದೆಯೋಗೊತ್ತಿಲ್ಲ. ಏಕೆಂದರೆ ಓಪಿನಿಯನ್ ಬಿಲ್ಡ್ ಅಫ್ ಆಗುವುದೇ ಅಲ್ಲಿ. ನಾನು ಏಕೆ ಈ ಮಾತನ್ನು ಹೇಳುತ್ತೇನೆ ಎಂದರೆ, ಅನ್ ಅಫಿಷಿಯಲ್ ಆಗಿ ಯಾವುದೂ ಆಗುವುದು ಬೇಡ. ಈಗ ತಾವು ಎಕ್ಸಪರ್ಟ್ಸ್ ಕಮಿಟಿಯನ್ನು ಲೀಗಲ್ ಆಗಿಯೇ ಮಾಡಿ ಎಂದು ಹೇಳಿ. ಅದರಲ್ಲಿ ಏನು ಕಂಡೀಶನ್ಸ್? ನಾವು ಏನಾದರೂ ಬಚಾವತ್ ಟ್ರಿಬ್ಯುನಲ್ ಅನ್ನು ವಯಲೇಟ್ ಮಾಡಿ ಯಾವುದಾದರೂ ಕಟ್ಟೆ ಕಟ್ಟಿದರೆ ನಮ್ಮದು ನಾವು ನಿಲ್ಲಿಸ್ತೇವೆ. ಅದನ್ನು ನಾವು ಒಪ್ಪಿಕೊಳ್ಳೋಣ. ಅಥವಾ ಆಂಧ್ರದವರು ಏನಾದರು ಅದನ್ನು ವಯಲೇಟ್ ಮಾಡಿದ್ದರೆ ಏನು ಮಾಡಬೇಕು? ಏಕೆಂದರೆ ನನ್ನ ಹತ್ತಿರ ಇನ್‌ಫಾರ್ಮೇಷನ್ಸ್ ಇವೆ. ಅವರಿಗೆ ಸಿಕ್ಕಿರತಕ್ಕಂಥಾದ್ದು 800 ಟಿಎಂಸಿಎಫ್‌ಟಿ ಪ್ಲಸ್ 11 ರೀಜನರೇಷನ್. ಅದರ ಮೇಲೆ 379 ಟಿ. ಎಂ.ಸಿ. ಎಫ್.ಟಿ. ಉಪಯೋಗಿಸುವುದಕ್ಕೆ ಅಂದರೆ, ಅವರು ಅಲ್ಟಿಮೇಟ್ ಆಗಿ 1190ನ್ನು ಉಪಯೋಗಿಸಿ, ಫೇಟ್ ಅಕಾಂಪ್ಲಿ ಮಾಡಿಕೊಳ್ಳಬೇಕು. ಅಂದರೆ ಇರತಕ್ಕಂಥ ಸರಪ್ಲಸ್ 333 ಏನಿದೆ, ಸ್ಕೀಮ್ 'ಬಿ' ನಲ್ಲಿ, ಅದು ಅಷ್ಟೂ ಅಪ್ರೋಪ್ರಿಯೇಟ್ ಮಾಡಿಕೊಳ್ಳುವುದಲ್ಲ. ನಮ್ಮ 834 ಟಿ. ಎಂ.ಸಿ. ಎಫ್.ಟಿ. ಏನಿದೆ, ಅದರಲ್ಲಿ ಒಂದು 46 ಟಿ. ಎಂ.ಸಿ. ಎಫ್.ಟಿ.ಯನ್ನು ಕಿತ್ತು ಕೊಳ್ಳತಕ್ಕಂಥ ಪ್ರಯತ್ನ ಈಗ ಎಕ್ಸಪರ್ಟ್ಸ್ ಕಮಿಟಿಗೆ ತಾವು ಲೀಗಲ್ ಆಗಿಯೇ ಒಪ್ಪಿಕೊಳ್ಳಿ. But they should agree. Andhra should agree, Maharashtra should agree, we should agree, that if anybody have violated the Bachawat Tribunal Award and if anybody is going ahead with the project which is in violation of the award, the party should stop if forthwith, whether it is Karnataka or Andhra. ಈ ಕಂಡೀಷನ್ ಹಾಕಿ ನೀವು ಒಪ್ಪತಕ್ಕಂಥಾದ್ದು ಸೂಕ್ತ. ಈ ಅನ್‌ಅಫಿಷಿಯಲ್ ಆಗಿ ಎಕ್ಸಪರ್ಟ್ ಕಮಿಟಿ ಮಾಡುವುದು, ಅವರು ಹೋಗಿ ಒಪೀನಿಯನ್ ಬಿಲ್ಡ್‌ಅಫ್ ಮಾಡುವುದು, ಅವರು 29 - 30 ಕ್ಕೆ ಬರುತ್ತಾರೆ. ಎನ್ನತಕ್ಕದ್ದು ಬೇರೆ ಇದೆ. ಏಕೆಂದರೆ ಇದರಲ್ಲಿ ತಾರಮ್ಮಯ್ಯ ವ್ಯವಹಾರ ಮಾಡುವುದು ಬೇಡ. ರಾಜಾರೋಷವಾಗಿ ಹೇಳೋಣ. ನಾವು ವಯಲಟ್ ಮಾಡಿದ್ದರೆ ನಮ್ಮದು ನಾವು ನಿಲ್ಲಿಸುತ್ತೇವೆ. ಆದರೆ ಅವರದ್ದು ವಯಲಟ್ ಆಗಿದ್ದರೆ ಅವರದ್ದನ್ನು ನಿಲ್ಲಿಸುವುದಕ್ಕೆ ಅವರು ಒಪ್ಪಿಕೊಳ್ಳಬೇಕು. ಆರೀತಿ ಒಪ್ಪಿಗೆ ತೆಗೆದುಕೊಂಡು ಒಂದು ಎಕ್ಸಪರ್ಟ್ಸ್ ಕಮಿಟಿಯನ್ನು ಅಧಿಕೃತವಾಗಿಯೇ ಮಾಡಿ, ಕಾನ್ಸ್ಟಿಟ್ಯೂಟ್ ಮಾಡಿ ಬೇಕಾದರೆ ಕಳುಹಿಸಿಕೊಡಿ.

ಈ ನಿಲುವನ್ನೇ ಸರ್ಕಾರ ತೆಗೆದುಕೊಳ್ಳಬೇಕು. ಅದಲ್ಲದೆ ಅವರು ಅನ್‌ಅಫಿಷಿಯಲ್ ಆಗಿ ಬರತಕ್ಕದ್ದು, ಒಪಿನಿಯನ್ ಬಿಲ್ಡ್ ಅಪ್ ಮಾಡತಕ್ಕಂಥಾದ್ದು, ಮತ್ತೊಂದು ಆಗತಕ್ಕಂಥಾದ್ದು, ಲ್ಯಾಕ್ ಆಫ್ ಅಂಡರ್ ಸ್ಟ್ಯಾಂಡಿಂಗ್ ------- ಲೋಕಸಭೆಯಲ್ಲಿ . ಏನೋ ಒಂದು ಒಪೀನಿಯನ್ ಕ್ರಿಯೇಟ್ ಆಗಿಹೋಗಿಬಿಡುತ್ತದೆ. ಈ ವೇಳೆಗೆ ಅಲ್ಲಿಚರ್ಚೆಗೆ ಬಂದಿರಬೇಕು. ಇದು ಆಗತಕ್ಕಂಥಾದ್ದು ಅಲ್ಲ. ಏಕೆಂದರೆ ಇದೊಂದು ತರಹ ನೀವು ಲೋಕಸಭಾ ಸದಸ್ಯರನ್ನು ಕರೆದು ಎಕ್ಸಪರ್ಟ್ಸ್ ಕೈಯಲ್ಲಿ ಬ್ರೀಫ್ ಮಾಡಿದ್ದೀರೋ ಇಲ್ಲವ್ರೋ ನನಗೆ ಗೊತ್ತಿಲ್ಲ. ಇದು ಏನಾಗುತ್ತದೆ ಎಂದರೆ ಕೊನೆಯಲ್ಲಿ ಸಫರ್ ಮಾಡುವವರು ನಾವು. ಅಪರಾಧಿ ಸ್ಥಾನದಲ್ಲಿ ನಮ್ಮನ್ನೇ ನಿಲ್ಲಿಸತಕ್ಕಂಥಾದ್ದು. ಇದು ಆಗತಕ್ಕದ್ದಲ್ಲ ಮತ್ತು ಇದಕ್ಕೆ ಅವಕಾಶಕೊಡಬೇಡಿ. ನೇರವಾಗಿ ಹೇಳಿ, ಎಕ್ಸಪರ್ಟ್ಸ್ ಕಮಿಟಿಯನ್ನು ಲೀಗಲ್ ಆಗಿ ಮಾಡಿ ಎಂದು. With these conditions. If anybody have violated, let them forthwith stop any project, whether it is Maharashtra or Andhra Pradesh or Karnataka.

ಶ್ರೀ ಬಿ. ಎಸ್. ಯಡಿಯೂರಪ್ಪ: ಈಗ, 29 - 30 ರಂದು ಅವರು ಬಂದರೆ, ನಾವು ಇಡೀ ಕರ್ನಾಟಕ ರಾಜ್ಯದಲ್ಲಿ ಕರಾಳ ದಿನವನ್ನು ಆಚರಿಸುತ್ತೇವೆ. ಆಲಮಟ್ಟಿ ಅಣೆಕಟ್ಟಿನೊಳಗೆ ಈ ಎಕ್ಸಪರ್ಟ್ಸ್ ಏನು ಅನಧಿಕೃತವಾಗಿ ಬರುತ್ತಾರೆ, ಅವರಿಗೆ ಏನೂ ಲೀಗಲ್ ರೈಟ್ಸ್ ಇಲ್ಲ. ಅವರು ಬಂದರೆ ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ಬಹುಶಃ ಅವರಿಗೆ ಛೀಮಾರಿ ಹಾಕಿ, ಮತ್ತೊಮ್ಮೆ ಕರ್ನಾಟಕಕ್ಕೆ ಈ ರೀತಿಯಾಗಿ, ಅನಧಿಕೃತ ಸಮಿತಿ ಬಂದರೆ, ಅವರು ವಾಪಸ್ಸು ಹೋಗುವುದಕ್ಕೆ ಸಾಧ್ಯವಿಲ್ಲ ಎನ್ನುವ ಉಸಿರು ಕಟ್ಟುವ ಸ್ಥಿತಿಗೆ ನಾವು ಅನಿವಾರ್ಯವಾಗಿ ಬೀದಿಗೆ ಇಳಿಯುವ ವಾತಾವರಣ ಉಂಟಾಗುವುದಕ್ಕೆ ನೀವು ಅವಕಾಶ ಕೊಡುತ್ತಿದ್ದೀರಿ ಎಂದು ನಾನು ಇಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಎಂ . ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ , ನನ್ನದೊಂದು ಮನವಿ. ಈಗಾಗಲೇ ಮಾನ್ಯ ನಂಜೇಗೌಡರು ಸಲಹೆ ಮಾಡಿದಹಾಗೆ, ನಮ್ಮ ಎಲ್ಲಾ ಪಾರ್ಲಿಮೆಂಟ್ ಸದಸ್ಯರನ್ನು ಮತ್ತು ರಾಜ್ಯಸಭಾ ಸದಸ್ಯರನ್ನು ಕರೆಸಿ, ಇದರ ಬಗ್ಗೆ ಅವರಿಗೆ ಸ್ವಲ್ಪ ತಿಳುವಳಿಕೆ ಕೊಡತಕ್ಕದ್ದು ಉಪಯುಕ್ತ ಎಂಬುದು ನನ್ನ ಭಾವನೆ. ಏಕೆಂದರೆ ಅಲ್ಲಿ ಪಾರ್ಲಿಮೆಂಟಿನಲ್ಲಿ ಈ ಇಷ್ಯೂ ಬಂದಾಗ, ಅವರಲ್ಲಿ ಫ್ಯಾಕ್ಟ್ಸ್ ಇಲ್ಲದೆ ಇದ್ದಾಗ ಮಾತನಾಡುವುದಕ್ಕೆ ಆಗುವುದಿಲ್ಲ. ಅಥವಾ ನಮ್ಮ ವಿಷಯ ಏನು ಎಂದು ಹೇಳಿ, ಹೇಳುವುದಕ್ಕೂ ಆಗುವುದಿಲ್ಲ. ಎಲ್ಲವನ್ನೂ ಕೂಡ ನಮ್ಮ ಪರವಾಗಿ ಆ ಪ್ರಧಾನ ಮಂತ್ರಿಗಳೇ ಹೇಳಬೇಕು ಅಥವಾ ಇರಿಗೇಷನ್ ಮಿನಿಸ್ಟರ್ ಅವರು ಹೇಳಬೇಕು ಎಂದರೆ , ಇದು ಸಾಧ್ಯವಾಗುವುದಿಲ್ಲ. ಆದ್ದರಿಂದ ದಯವಿಟ್ಟು ಆ ಎಲ್ಲಾ ಪಾರ್ಲಿಮೆಂಟ್ ಸದಸ್ಯರಿಗೂ ಇದರ ಬಗ್ಗೆ ಬಹಳಷ್ಟು ಇಡೀ ದೇಶದಲ್ಲಿಯೇ ಒಂದು ವಿಚಿತ್ರವಾದ ವಾತಾವರಣ ಇತ್ತು. ಏನು ಕರ್ನಾಟಕದವರೇ ಅನ್ಯಾಯ ಮಾಡುತ್ತಿದ್ದಾರೆ, ಇವರೇ ನೀರನ್ನು ಕಬಳಿಸುತ್ತಿದ್ದಾರೆ, ಉದ್ದೇಶಪೂರ್ವಕವಾಗಿ ನೀರನ್ನು ಬಿಡುತ್ತಿಲ್ಲ ಎನ್ನತಕ್ಕಂಥ ಭಾವನೆ ಇತ್ತು. ಆದರೆ ಈಗ ಈಗಿನ ಪ್ರಧಾನಮಂತ್ರಿಗಳು ಇಲ್ಲಿ ಮುಖ್ಯಮಂತ್ರಿಗಳಾಗಿದ್ದಾಗ , ಅಲ್ಲಿ ಎಲ್ಲಾ ಪ್ರೆಸ್‌ನವರನ್ನು ಕರೆಸಿ,

ಮೀಡಿಯಾದವರನ್ನು ಕರೆಯಿಸಿ, ಸಾಕಷ್ಟು ಹೈಲೈಟ್ ಮಾಡಿದ್ದರು. ಇಲ್ಲಿ ಕ್ಯಾಸೆಟ್‌ಗಳನ್ನು ತರಿಸಿ, ಎಕ್ಸಪರ್ಟ್ಸ್ ಕಮಿಟಿಯ ರಿಪೋರ್ಟ್ಸ್‌ನ್ನು ತಂದು ಅದೆಲ್ಲವನ್ನೂ ಪ್ರೆಸ್ ಕಾನ್‌ಫರೆನ್ಸ್‌ನಲ್ಲಿ ಹೇಳಿದಮೇಲೆ, ಅಲ್ಲಿ ಕೆಲವರು ನೇರವಾಗಿ ದೂರದರ್ಶನದವರು, ಪತ್ರಕರ್ತರು ಬಂದು ಅವರೇ ನಮಗೆ ಹೇಳಿದರು , ಇದರ ಬಗ್ಗೆ ನಮ್ಮ ಭಾವನೆ.........

ಶ್ರೀ ಜಿ.ಎಚ್. ಪಟೇಲ್ : ಜಿರೋಅವರ್‌ನಲ್ಲಿ ಈ ಪ್ರಶ್ನೆಯನ್ನು ಎತ್ತುತ್ತಾರೆಯೇ Under what provision ? ಅಥವಾ ಯಾವತರಹ ಡಿಸ್‌ಕಷನ್ ಅಡ್ಮಿಟ್ ಆಗುತ್ತದೆ, whether Speaker will admit it or not ಅದಿನ್ನೂ ನಮಗೆ ಗೊತ್ತಿಲ್ಲವಲ್ಲಾ !

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಆಲೋ ಮಾಡುತ್ತಾರೆ. ಅಲೋ ಮಾಡಿದಾಗ ಇದೊಂದು ಡಿಸ್‌ಕಷನ್‌ಗೆ ಬರುತ್ತದೆ. ನಾನು ಹೇಳುವುದು ಏನೆಂದರೆ ಅವರು ಜಿರೋಅವರ್‌ಗೇ ಅನುಮತಿ ಕೊಡಲಿ, ಅರ್ಧಗಂಟೆ ಚರ್ಚೆಗೆ ಅವಕಾಶ ಕೊಡಲಿ, ಶಾರ್ಟ್‌ಟರ್ಮ್ ಡಿಸ್‌ಕಷನ್‌ಗೇ ಕೊಡಲಿ, ಏನೇ ಕೊಡಲಿ, . but our MPs should be prepared with certain facts and figures, realities what is Almatti, what is UKP, what is Bachawat Award, what is the allocation made, what is 'A' Scheme, & 'B' Scheme, ಇದೆಲ್ಲವನ್ನೂ ಸ್ವಲ್ಪ ತಿಳಿಸಿ ಅವರಿಗೆ ಹೇಳಿದರೆ ಅದು ಅನುಕೂಲವಾಗುತ್ತದೆ.

ಶ್ರೀ ಜಿ. ಎಚ್. ಪಟೇಲ್ : ನೇಚರ್ ಆಫ್ ಡಿಸ್‌ಕಷನ್ ಗೊತ್ತಾಗಿ, ಟೈಮ್ ಫಿಕ್ಸ್ ಆದರೆ., I will send our engineers to brief our representatives in Lok Sabha and Rajya Sabha. Even though the Prime Minister knows the problem by its root, but now he can't...

Sri. M. Mallikajun Kharge : That is what I am telling. Though he knows it, he cannot argue on behalf of us. Karnataka is also a party, Andhra is also a party; he is a neutral man, as far as prime is concerned. ಬಂದಾಗ ಏನಾದರೂ ಹೇಳಬಹುದು, ಮಾತನಾಡಬಹುದು, ಇದು ನನಗೆ ಗೊತ್ತಿದೆ ಎಂದು ಹೇಳಬಹುದು. ಆದರೆ ಪ್ರಾಕ್ಟಿಕಲ್ ಆಗಿ ಹೌಸ್ ನಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ದಯವಿಟ್ಟು ತಿಳಿವಳಿಕೆಯನ್ನು ಕೊಡತಕ್ಕಂಥಾದ್ದು, ಹೇಳತಕ್ಕಂಥಾದ್ದು ಆಗಬೇಕು.

12:20 ಪಿ ಎಂ

ಶ್ರೀ ಬಿ. ಎಸ್. ಯಡಿಯೂರಪ್ಪ: 29 , 30 ನೇ ತಾರೀಖು ಬರುತ್ತಾ ಇದ್ದಾರೆಯೇ, ಇಲ್ಲವೇ? ಈ ಬಗ್ಗೆ ಮುಖ್ಯಮಂತ್ರಿಗಳಿಗೆ ಮಾಹಿತಿ ಇದೆಯೇ ಎಂಬುದನ್ನು ಹೇಳಬೇಕು.

ಶ್ರೀ ಜಿ. ಎಚ್. ಪಟೇಲ್ : 29ನೇ ತಾರೀಖು ನಾವು ಕರೆದರೆ ಬರುತ್ತಾರೆ. ಮಾನ್ಯ ನಂಜೇಗೌಡರು ಹೇಳುವುದೇನು, ಕರೆಯುವುದಕ್ಕೆ ನಮಗೂ ಸ್ವಾತಂತ್ರ್ಯ ಇದೆ, ಬರುವುದಕ್ಕೆ ಅವರಿಗೂ ಇದೆ. ಆದರೆ, ಆದರಿಂದ ಪ್ರಶ್ನೆ ಬಗೆಹರಿಯುವುದಿಲ್ಲ. ಇದು ಕಾನೂನು ಪ್ರಕಾರವೇ ಆಗಲಿ. ಅಫಿಷಿಯಲ್ ಕಮಿಟಿಯೇ ಆಗಲಿ ಎಂದು. ನಾವು ಅವರನ್ನು ಕರೆದರೆ, ಅತಿಥಿಗಳಾಗಿ ಬರುತ್ತಾರೆ, ಮಾತನಾಡಿ ಹೋಗುತ್ತಾರೆ. That has nothing to do.. Let us not mix two things, please. - ಒಂದು ಆಲಮಟ್ಟಿ ಬಗ್ಗೆ, ಇಲ್ಲಿಯವರೆಗೆ ನಮ್ಮ ರಾಜ್ಯದ ನಿಲುವು ಏನಿದೆ, ಇಲ್ಲಿಯವರೆಗೆ ಏನು ನಡೆದುಕೊಂಡು ಬಂದಿದೆ. ಈಗ ಅವರು ಯಾವ ದೃಷ್ಟಿಯಿಂದ ಅದನ್ನು ರೇಕಪ್ ಮಾಡುತ್ತಾರೆ, ಆಲಮಟ್ಟಿಯ ಒಂದೇ ಇಷ್ಯೂ ಅಲ್ಲ. ಆಲಮಟ್ಟಿ ಇಷ್ಯೂನಿಂದ ಎಂಟೈರ್ ಕೃಷ್ಣ ಬೇಸಿನ್‌ನಲ್ಲಿ ನಮಗೆ ಆಗಿರತಕ್ಕಂಥಾದ್ದು ಅಥವಾ ಆಂಧ್ರಕ್ಕೆ ಆಗಿರತಕ್ಕಂಥಾದ್ದು ಯಾರಿಗೆ ಬೆನಿಫಿಟ್ಟಾಗಿದೆ ಅಥವಾ ಯಾರಿಗೆ ಅನ್ಯಾಯವಾಗಿದೆ, ಅದು ಹೊರಗೆ ಬರಬೇಕಲ್ಲಾ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಾನೇನು ವಿನಂತಿ ಮಾಡುತ್ತೇನೆಂದರೆ, ಕಾವೇರಿ ವಿಚಾರದಲ್ಲಿ ಈಗಾಗಲೇ ಸಾಕಷ್ಟು, ದೇಶದ ಜನರ ಮುಂದೆ ನಾವು ಅಪರಾಧಿ ಸ್ಥಾನದಲ್ಲಿ ನಿಲ್ಲುವಂಥಾದ್ದು ಆಗಿದೆ. ನಾವು ಬಜಾವತ್ ತೀರ್ಮಾನದ ಪ್ರಕಾರ ಆಲಮಟ್ಟಿ ಅಣೆಕಟ್ಟು ಕಟ್ಟುತ್ತಾ ಇದ್ದೇವೆ. ಯಾವುದೇ ಸುಪ್ರೀಂ ಕೋರ್ಟ್ ಇಂಟರ್‌ಫಿಯರ್ ಆಗಿಲ್ಲ. ಅವರಿಗೆ ಅನ್ಯಾಯವಾದರೆ, ಸುಪ್ರೀಂಕೋರ್ಟ್‌ಗೆ ಹೋಗಲಿ. ಈಗ ಹೊಸದಾಗಿ ಎಳೆದುಕೊಂಡು, ಮೈಮೇಲೆ ಹಾಕಿಕೊಂಡು ಇಡೀ ದೇಶದ ಜನರನ್ನು, ಅವರು ಯಾರು ಬಂದು ನೋಡುವುದಕ್ಕೆ? ಅನ್ಯಾಯ ಮಾಡಿದ್ದರೆ, ಅವರು ಸುಪ್ರೀಂಕೋರ್ಟ್‌ಗೆ ಹೋಗಲಿ. ಯಾರು ವೈಲೇಟ್ ಮಾಡಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಲಿ. ದಯಮಾಡಿ, ಕಾಂಟ್ರವಸಿಸೆಗೆ ಹೋಗುವುದು ಬೇಡ. ಅವರು ಕರ್ನಾಟಕದಲ್ಲಿ ಪ್ರದೇಶ ಮಾಡುವುದಕ್ಕೆ ನಾವು ಬಿಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಈ ಅವಿಶ್ವಾಸ ನಿರ್ಣಯವನ್ನು ತರಲಿಕ್ಕೆ ಇದೇ ಮುಖ್ಯ ಕಾರಣ, ಬೇರೆ ಮಾತೇನಲ್ಲ. ಇವೆರಡೂ ಪ್ರಾಮುಖ್ಯವಾಗಿ ಬಂದಿದ್ದೇ ಅವಿಶ್ವಾಸಕ್ಕೆ ಕಾರಣವಾಯಿತು. ಮಾನ್ಯ ನಂಜೇಗೌಡರ ವಾದ ಸರಿ. ನನಗಿನಿಸುತ್ತದೆ, ಸರ್ಕಾರಕ್ಕೆ ಏನಾದರೊಂದು ನಿಲುವು ಇರಬೇಕು. ನನ್ನ ದೃಷ್ಟಿಯಲ್ಲಿ ಈ ಸರ್ಕಾರಕ್ಕೆ ನಿಲುವು ಇಲ್ಲ. ಒಂದು ಕಡೆ ತಜ್ಞರ ಸಮಿತಿ ರದ್ದಾಯಿತು ಎಂದು ಹೇಳುತ್ತಾರೆ. ಮತ್ತೊಂದು ಕಡೆ, ತಜ್ಞರ ಸಮಿತಿ ಭೇಟಿ ಇಲ್ಲವೆಂದು ಮಾನ್ಯಮುಖ್ಯ ಮಂತ್ರಿಗಳು ಹೇಳುತ್ತಾರೆ. ಇನ್ನೊಂದು ಕಡೆ ತಜ್ಞರ ಸಮಿತಿ ರಚನೆ ಕೈಬಿಡಲು ಪ್ರಧಾನ ಮಂತ್ರಿಗಳು ನಿರ್ಧಾರ ಎಂದು ಬರುತ್ತದೆ. ಒಂದರಿಂದೆ ಒಂದು, ಒಂದರಿಂದೆ

ಒಂದು, ಗೊಂದಲದಲ್ಲಿದ್ದೇವೆ. ನನಗನಿಸುತ್ತದೆ, ನಾವೆಲ್ಲಿದ್ದೇವೆ. ಬಚಾವತ್ ತೀರ್ಪು ನಮ್ಮ ಅಂತಿಮ. ಅದರ ಬಗ್ಗೆ ಯಾವುದೇ ಬದಲಾವಣೆ ಇಲ್ಲ. ಎನ್ನತಕ್ಕಂತಾದ್ದು ಒಂದು. ಇಲ್ಲಿ ಯಾವುದೇ ತಜ್ಞರ ಸಮಿತಿಯಾಗಲೀ, ಮುಖ್ಯಮಂತ್ರಿಗಳ ಸಮಿತಿಯಾಗಲೀ, ಯಾರೂ ಕರ್ನಾಟಕದ ನೆಲದೊಳಕ್ಕೆ ಬರಕೂಡದು ಎನ್ನುವ ಸ್ಪಷ್ಟ ನಿಲುವನ್ನು ರಾಜ್ಯಸರ್ಕಾರ ತಾಳುವುದಕ್ಕೆ ಏನು ಅಧೈರ್ಯವಾಗಿದೆ. ? ಏಕೆ ಇವರಿಗೆ ಧೈರ್ಯ ಇಲ್ಲ. ಕಾರಣ ಏನು ? ಬರಬೇಡಿ, ನಿಮಗೆ ಇಲ್ಲಿ ಕಾಲಾವಕಾಶ ಇಲ್ಲ, ಅವಕಾಶ ಕೊಡುವುದಿಲ್ಲವೆಂದು ಹೇಳುವುದಕ್ಕೆ ಏಕೆ ಆಗುತ್ತಿಲ್ಲ ? ಸರ್ಕಾರ ಏಕೆ ಹೇಳುವುದಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ಸ್ಪಷ್ಟಪಡಿಸಬೇಕು. ಅಧ್ಯಕ್ಷರೇ, ತಮಗೆ ಹೇಳುತ್ತೇನೆ. ಹಿಂದೆ ಈ ಆಲಮಟ್ಟಿ ಜಲಾಶಯಕ್ಕೆ ಯಾರಿಗೂ ಹೇಳದೇ, ಕೇಳದೇ ಕದ್ದು ಆಂಧ್ರದ ಒಬ್ಬ ರಾಜಕಾರಿಣಿ, ಆ ಜೊತೆಯಲ್ಲಿ ಒಂದು ನಿಯೋಗ ಕರೆದುಕೊಂಡು ಬಂದು, ಅಲ್ಲಿ ನಡೆದಿರತಕ್ಕ ಕಾಮಗಾರಿ ಕೆಲಸಗಳನ್ನೆಲ್ಲಾ ಕಣ್ಣಾರೆ ನೋಡಿ, ಚಿತ್ರಗಳನ್ನು ತೆಗೆದು, ಪ್ರತಿಯೊಂದನ್ನೂ ಮಾಡಿ ತೆಗೆದುಕೊಂಡು ಹೋಗುವವರೆಗೆ, ಕರ್ನಾಟಕ ಸರ್ಕಾರ, ಅದರ ಬಗ್ಗೆ ಗಮನ ಕೊಡಲಿಲ್ಲ. ಮೊದಲನೆಯದಾಗಿ ಅವರನ್ನು ತಡೆಯಬೇಕಾಗಿತ್ತು. ಆಲಮಟ್ಟಿ ಜಲಾಶಯದೊಳಕ್ಕೆ ನಿಮ್ಮನ್ನು ಬಿಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗಿತ್ತು. ಮತ್ತು ಯಾರು ಒಳಗಡೆ ಬಂದಿರುತ್ತಾರೆ ಅವರಿಗೆ ಎಚ್ಚರಿಕೆಯನ್ನು ಕೊಡಬೇಕಾಗಿತ್ತು. ಆ ಎಚ್ಚರಿಕೆಯನ್ನೂ ಧಾಟಿ ಅವರು ಹೋದರೆ, ಕರ್ನಾಟಕ ಸರ್ಕಾರ; ಅವರನ್ನು ಬಂಧಿಸಬೇಕಾಗಿತ್ತು. ಅನಧಿಕೃತವಾಗಿ ಯಾರು ಒಬ್ಬ ರಾಜಕಾರಿಣಿ, ಜನಾರ್ಧನರೆಡ್ಡಿ ಎಂಬುವರು, ಆಂಧ್ರದ ರಾಜಕಾರಿಣಿ ಒಂದು ನಿಯೋಗವನ್ನು ನೋಡುವುದಕ್ಕೆ ಕರೆದುಕೊಂಡು ಬಂದಾಗ, ನಾವು ಅವತ್ತು ಗಂಭೀರವಾಗಿ ಸುಮ್ಮನೆ ಕುಳಿತಿದ್ದೆವು. ನಮ್ಮ ಜಲಾಶಯಗಳನ್ನು ಯಾರು ಬೇಕಾದರೂ ನೋಡಿಕೊಂಡು ಹೋಗಬಹುದು; ಯಾರು ಬೇಕಾದರೂ ಹೋಗಬಹುದು. ಜಲಾಶಯಗಳಿಗೆ ರಕ್ಷಣೆ ಇಲ್ಲ, ಜಲಾಶಯಗಳ ಪರಿಸ್ಥಿತಿ ಏನು? ಇದರ ಬಗ್ಗೆ ನಮ್ಮ ಸರ್ಕಾರಕ್ಕೆ ಗಮನ ಬೇಡವೇ ?

ಶ್ರೀ ಬಿ. ಎಸ್. ಯಡಿಯೂರಪ್ಪ : ದಯಮಾಡಿ, ಮುಖ್ಯಮಂತ್ರಿಗಳು ಈ ಕಡೆ ಗಮನ ಕೊಡಿ. ಮಾನ್ಯ ವಾಟಾಳ್ ನಾಗರಾಜರು ಪ್ರಮುಖವಾದ ವಿಷಯವನ್ನು ಹೇಳುತ್ತಿದ್ದಾರೆ. ಆಂಧ್ರದ ರಾಜಕಾರಿಣಿಗಳು ಬಂದು, ಅಲ್ಲಿ ಚಿತ್ರಗಳನ್ನು ತೆಗೆದುಕೊಂಡು , ಎಲ್ಲಾ ನೋಡಿ ವರದಿ ಕೊಟ್ಟಿದ್ದಾರೆ, ಅವರು ಯಾರು ? ಯಾರ ಜೊತೆಬಂದರು ? ಯಾವ ಈ ಏರಿಯಾದಲ್ಲಿ ಆಂಧ್ರದ ಕಂಟ್ರಾಕ್ಟರು ಕೆಲಸ ಮಾಡುತ್ತಿದ್ದಾರೋ , ಅವರು ಕರ್ನಾಟಕದ ಕಂಟ್ರಾಕ್ಟರು ಎಂದು ಹೇಳಿಕೊಂಡು, ಅವರ ಕಾರಿನಲ್ಲಿ, ಅವರ ಜೊತೆಗೇ ಬಂದು ನಡೆಯುತ್ತಿರುವಂಥ ಕೆಲಸಗಳು. ಇದಕ್ಕೆ ನಾವೇಕೆ ರಕ್ಷಣೆ ಕೊಡಬೇಕು ? ನಮ್ಮ ಕರ್ನಾಟಕದಲ್ಲಿ ನೀರಾವರಿ ಕೆಲಸ ಮಾಡುವುದಕ್ಕೆ ಬೇಕಾದಷ್ಟು ಜನ ಒಳ್ಳೆಯ ಕಂಟ್ರಾಕ್ಟರ್ಸ್ ಇದ್ದಾರೆ. ಡಿಲೇ ಮಾಡಿ, ದುಡ್ಡು ಕ್ಲೆಮ್ ಮಾಡಿ, ಅವರನ್ನೆಲ್ಲಾ ಕರೆದುಕೊಂಡು ಬಂದು ಫೋಟೋ ತೆಗೆಸಿ, ಆ ರಾಜ್ಯದ ಹಿತಕ್ಕೋಸ್ಕರ ಇಲ್ಲಿ ಕಂಟ್ರಾಕ್ಟ್ ಕೆಲಸ ಮಾಡುವುದಕ್ಕೆ ಏಕೆ ಪ್ರೋತ್ಸಾಹ ಕೊಡುತ್ತೀರಿ ?

ಶ್ರೀ ವಾಟಾಳ್ ನಾಗರಾಜ್ : ಅದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಕಳಕಳಿಯಿಂದ ಹೇಳುತ್ತೇನೆ. ಮಾನ್ಯ ನೀರಾವರಿ ಸಚಿವರೂ ಕೂಡ ಬಂದಿದ್ದಾರೆ. ಇಂತಹ ಸಂದರ್ಭ ಬಂದಾಗ ನಾವು ಪಕ್ಷಬೇಧ ಮರೆತು ಸ್ಪಷ್ಟವಾಗಿರಬೇಕು. ತಾವು ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು. ನೀವು, ನಮ್ಮನ್ನು ಕರೆದು ಈ ಪರಿಸ್ಥಿತಿ ಇದೆ, ಪ್ರಧಾನ ಮಂತ್ರಿಗಳು ಈ ರೀತಿ ಹೇಳಿದ್ದಾರೆ, ತಜ್ಞರ ಸಮಿತಿ ಬಗ್ಗೆ ಹೀಗಿದೆ, ಮುಖ್ಯಮಂತ್ರಿಗಳ ಸಮಿತಿ ನಡೆಯುತ್ತಾ ಇದೆ. ಅಲ್ಲಿ ನಡೆದಂಥ ಪ್ರತಿ ಅಕ್ಷರ, ಅಕ್ಷರವನ್ನೂ ನಮ್ಮ ಜೊತೆಯಲ್ಲಿ ಮಾತನಾಡಬಹುದಿತ್ತು. ನಾವು ನಿಮ್ಮ ವಿರೋಧಿಗಳೇನಲ್ಲ ಅಥವಾ ನಿಮ್ಮ ಶತೃಗಳೇನಲ್ಲ. ನಾವೇನು ಬೇರೆ ರಾಜ್ಯದವರಲ್ಲ. ನಮ್ಮ ಜೊತೆಯಲ್ಲಿ ನೀವು ಮಾತನಾಡಬಹುದಾಗಿತ್ತು. ಹಿಂದಿನ ಸರ್ಕಾರಗಳ ಸಂಪ್ರದಾಯ, ಕಾಂಗ್ರೆಸ್ ಸರ್ಕಾರ, ಮೊಯ್ಲಿಯವರು ಇರಬಹುದು, ಬಂಗಾರಪ್ಪನವರು ಇರಬಹುದು, ವೀರೇಂದ್ರ ಪಾಟೀಲರು ಇರಬಹುದು, ಇಂತಹ ವಿಚಾರ ಬಂದಾಗ ಪ್ರತಿಯೊಂದನ್ನೂ, ನೆಲ ಜಲದ ಪ್ರಶ್ನೆ ಬಂದಾಗ ಪ್ರಧಾನ ಮಂತ್ರಿಗಳು ಗೌಪ್ಯವಾಗಿ ಹೇಳಿರತಕ್ಕಂಥ ಮಾತುಗಳನ್ನೂ ಸಹ ವಿರೋಧಪಕ್ಷದ ನಾಯಕರುಗಳ ಜೊತೆಯಲ್ಲಿ ಈ ರೀತಿ ಇದೆ, ನಾನೇನು ಮಾಡತಕ್ಕಂಥದ್ದು ಎಂದು ಹಂಚಿಕೊಳ್ಳುತ್ತಿದ್ದರು. ನಮ್ಮ ಮುಖ್ಯಮಂತ್ರಿಗಳು ಏಕೆ, ಎಡವುತ್ತಿದ್ದಾರೆ? ಏಕೆ ಇವರು ಜಾರಿದ್ದಾರೆ? ಈ ಎರಡು ಪ್ರಶ್ನೆ ಬಹಳ ಪ್ರಾಮುಖ್ಯವಾದದ್ದು. ಇವತ್ತು ಲೋಕಸಭೆಯಲ್ಲಿ ಈ ಚರ್ಚೆ ಬರುತ್ತಾ ಇದ್ದರೆ, ನಮ್ಮ ಲೋಕಸಭಾ ಸದಸ್ಯರಿಗೆ ಯಾವರೀತಿ ಮಾಹಿತಿಯನ್ನು ಒದಗಿಸಿದ್ದೀರಿ. ? ಅವರು ಮಾತನಾಡುವುದಕ್ಕೆ ನಾವು ಏನೇನು ಕೊಟ್ಟಿದ್ದೇವೆ. ಏನೇನು ಹೇಳಿದ್ದೇವೆ, ಯಾವುದೂ ಇಲ್ಲ. ಡೆಲ್ಲಿಯಲ್ಲಿ ಈ ರೀತಿ ಮಾಹಿತಿ ಕೊಡತಕ್ಕ ವ್ಯವಸ್ಥೆಯೂ ಇಲ್ಲ. ನಮ್ಮ ವಾರ್ತಾ ಭವನ ಸತ್ತಿದೆ. ವಾರ್ತಾ ಭವನದಲ್ಲಿ ನಮ್ಮ ಕೈಪಿಡಿ ಇರಬೇಕಲ್ಲಾ. ಆಲಮಟ್ಟಿ ಆಣೆಕಟ್ಟು, ಇತರ ಇತಿಹಾಸ ಈ ರೀತಿ ಇದೆ. ಇದರ ಪರಿಸ್ಥಿತಿ ಹೀಗಿದೆ ಎಂಬುದೆಲ್ಲವನ್ನೂ ಸಂಗ್ರಹ ಮಾಡಿ, ಕೈಪಿಡಿ ಮಾಡಿ ನಮ್ಮ ಪಾರ್ಲಿಮೆಂಟ್ ಸದಸ್ಯರಿಗೆ ಕೊಡುವುದಕ್ಕೆ ಅಲ್ಲಿನ ವಾರ್ತಾ ಇಲಾಖೆ ವ್ಯವಸ್ಥೆ ಮಾಡಿರಬೇಕು. ಅಲ್ಲಿ ವಾರ್ತಾ ಇಲಾಖೆ ಇಲ್ಲವೇ ಇಲ್ಲ. ನಮ್ಮ ಡೆಲ್ಲಿಯಲ್ಲಿ ನಾವು ಒಂದುರೀತಿ ಗುಲಾಮರು. ಡೆಲ್ಲಿಯಲ್ಲಿ ನಮಗೆ ಹಿಂದೆ ಮುಂದೆ ಯಾರೂ ಇಲ್ಲ. ಈ ಪರಿಸ್ಥಿತಿ - ನಿರ್ಮಾಣವಾಗಿದೆ. ಯಾರಾದರೂ ಡೆಲ್ಲಿಯಲ್ಲಿ, ನಮ್ಮ ಲೋಕಸಭಾ ಸದಸ್ಯರು ನಾಳೆ ಇಂತಹ ವಿಚಾರ ಬರುತ್ತದೆ, ಇದರ ಬಗ್ಗೆ ಮಾಹಿತಿ ಬೇಕೆಂದು ಕೇಳಿದರೆ, ಕೊಡತಕ್ಕ ಒಂದು ಎಜೆನ್ಸಿ, ಒಂದು ವ್ಯವಸ್ಥೆ ಖಂಡಿತ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೊನ್ನೆ 10ನೇ ತಾರಿಖು ಡೆಲ್ಲಿಯಲ್ಲಿ ನಡೆದ ಸಭೆಗೆ ನಾವೆಲ್ಲರೂ ಹೋಗಿದ್ದೆವು. ಆಗ ಜೀ ಟಿ.ವಿ.ಯವರು, ಈನಾಡು ಟಿ.ವಿ.ಯವರು. ಪಿ.ಟಿ.ಐ ನವರು, ಯು.ಎನ್.ಐ.ನವರು ಇವರೆಲ್ಲರೂ ಬಂದು ಕೇಳಿದರು. ನಿಮ್ಮಲ್ಲಿ ಏನಾದರೂ ಈ ಕೃಷ್ಣಾ ಬೇಸಿನ್ ಪ್ರಾಜೆಕ್ಟ್, ವಿಶೇಷವಾಗಿ ಆಲಮಟ್ಟಿ, ನಾರಾಯಣಪುರಕ್ಕೆ ಸಂಬಂಧಪಟ್ಟಂತೆ, ಲಿಟರೇಚರ್ ಇದ್ದರೆ, ನಮಗೆ ಒಂದು ಕಾಪಿ ಕೊಡಿ. ಏಕೆಂದರೆ, ನಾವು ಬರೆಯುವಾಗ ಕೆಲವು ರೆಫರ್ ಮಾಡಬೇಕಾಗುತ್ತದೆಂದು ನಮ್ಮ ಕೇಳಿದರು. ಅಲ್ಲಿ ಪಾರ್ಲಿಮೆಂಟ್ ಸೆಕೆಂಡ್ ಫ್ಲೋರ್‌ನಲ್ಲಿ

ಇನ್‌ಫರ್ಮೇಷನ್ ಡಿಪಾರ್ಟಮೆಂಟಿನ ಒಂದು ವಿಂಗ್ ಇದೆ. ಅವರನ್ನು ಕೇಳಿದರೆ, ಅವರಲ್ಲಿಯೂ ಕೂಡ ಯಾವುದೇ ಮಾಹಿತಿ ಇಲ್ಲ. ಕಾವೇರಿ ಬಗ್ಗೆ ಕೆಲವು ಬರೆದಂಥಾದ್ದು, ಪ್ರಿಂಟ್ ಮಾಡಿದಂಥದ್ದು ಇದೆ. ಏಕೆಂದರೆ, ಅದು ಗಲಾಟೆ ನಡೆದಿತ್ತು ಎಂದು ಮಾಡಿಸಿದ್ದಾರೆ. ಆದರೆ, ಈ ಕೃಷ್ಣಾ ಬಗ್ಗೆ ಏನೇನೂ ಇಲ್ಲ. ದಯವಿಟ್ಟು; ಅದು ಬಗ್ಗೆಯೂ ಪ್ರಿಂಟ್ ಮಾಡಿ, ಲಿಟರೇಚರನ್ನು ಪಾರ್ಲಿಮೆಂಟ್ ಸದಸ್ಯರಿಗೆ ಕೊಡಬೇಕು. ನಾನು ಈಗಾಗಲೇ ಹೇಳಿದೆ. ಪ್ರೆಸ್‌ನವರಿಗೆ, ವೀಡಿಯೋದವರಿಗೆ ಪಾರ್ಲಿಮೆಂಟ್ ಸದಸ್ಯರಿಗೆ ಮತ್ತು ಸೋಷಿಯಲ್ ವರ್ಕರ್ಸ್‌ಗೆ, ಅಸೆಂಬ್ಲಿ ಸದಸ್ಯರಿಗೆ ಹಂಚಿ.

ಶ್ರೀ ಕೆ. ಎನ್. ನಾಗೇಗೌಡ : ಕೃಷ್ಣಾ ಬಗ್ಗೆ ಮಾಹಿತಿ ಕೊಡುವ ವಿಚಾರದಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಏನು ಸಲಹೆ ಕೊಟ್ಟಿದ್ದಾರೆ, ಅದೇರೀತಿ ನಾನು ಈಗಾಗಲೇ 3 - 4 ದಿವಸದ ಹಿಂದೆ ಸಭೆ ಕರೆದು, ಜೀ ಟಿ.ವಿ. ಇರಲಿ, ಸನ್. ಟಿ.ವಿ. ಇರಲಿ ಅದು ಯಾವುದೇ ಟಿ.ವಿ.ಇರಲಿ. ಎಲ್ಲಾ ಖಾಸಗಿ ಟಿ.ವಿ.ಯವರಿಗೆ ಕ್ಯಾಸಟ್ ಮಾಡಿಸಿ, ನಮ್ಮ ಜಲಾಶಯಗಳಲ್ಲಿರತಕ್ಕ ಕೆಲವು ಫ್ಯಾಕ್ಟ್ಸ್‌ಗಳನ್ನು ಮತ್ತು ಬಚಾವತ್ ಅವಾರ್ಡಿನಲ್ಲಿರತಕ್ಕ ಕೆಲವು ಫ್ಯಾಕ್ಟ್ಸ್‌ಗಳನ್ನು ಚಿತ್ರೀಕರಣ ಮಾಡುವುದಕ್ಕೂ ಸಹಿತ ನಾವು ಆಲೋಚನೆ ಮಾಡಿ, ನಾವು ಈಗಾಗಲೇ ಕಾರ್ಯಕ್ರಮ ರೂಪಿಸುತ್ತಾ ಇದ್ದೇವೆ. ಎರಡನೆಯದು ನಮ್ಮ ಮಾಹಿತಿಗಳು, ಎಲ್ಲಾ ದಿನಪತ್ರಿಕೆಗಳಲ್ಲಿ, ಅಖಿಲ ಭಾರತ ಮಟ್ಟದ ಎಲ್ಲಾ ಪತ್ರಿಕೆಗಳಲ್ಲಿ ಕೊಡುವುದಕ್ಕೆ ನಮ್ಮ ರೆಸಿಡೆಂಟ್ ಕಮೀಷನರ್, ನಮ್ಮ ಕಾರ್ಯದರ್ಶಿಯವರು, ಇನ್‌ಫರ್ಮೇಷನ್ ಡಿಪಾರ್ಟ್‌ಮೆಂಟಿನವರು ಯಾವ ಯಾವ ಫ್ಯಾಕ್ಟ್ಸ್‌ಗಳನ್ನು ಇಟ್ಟುಕೊಳ್ಳಬೇಕು. ಯಾವುದನ್ನು ಬಿಡಬೇಕು, ಯಾವುದನ್ನು ಅಲ್ಲಿ ತೋರಿಸಬೇಕು, ತೋರಿಸಬಾರದು ಎಂಬುದಕ್ಕೆ ಕೂಲಂಕುಷವಾಗಿ ಚರ್ಚೆ ಮಾಡಿ, ಯಾವುದನ್ನು ಮಾಡಬೇಕು, ಯಾವುದನ್ನು ಮಾಡಬಾರದು ಎನ್ನುವ ಬಗ್ಗೆ ಕರೆಕ್ಟ್ ಇನ್‌ಫರ್ಮೇಷನ್ ಮಾಡಿ, ನಂತರ ಹೋಗಬೇಕಾಗಿದೆ. ಇದು ಇನ್ನೂ ಸ್ವಲ್ಪ ಚರ್ಚೆಯ ಹಂತದಲ್ಲಿರುವುದರಿಂದ, ಮಾಡುತ್ತಾ ಇದ್ದೇವೆ. ಈಗ ತಾವೇನು ಎಂ.ಪಿ. ಗಳಿಗೆ ಕೊಡಬೇಕೆಂದು ಹೇಳಿದ್ದೀರಿ, ಈಗಾಗಲೇ ನಾವು ಇದರ ಬಗ್ಗೆ ವ್ಯವಸ್ಥೆ ಮಾಡುತ್ತಿದ್ದೇವೆ. ಡೆಲ್ಲಿ ರಿಸಿಡೆಂಟ್ ಕಮೀಷನರ್ ಇವತ್ತು ಸಂಜೆಯೊಳಗಡೆ, ಎಲ್ಲರಿಗೂ ಇಂಪಾರ್ಟೆಂಟ್ ಫ್ಯಾಕ್ಟ್ಸ್ ಯಾವುಯಾವುದಿದೆ, ಅದನ್ನು ಕಳುಹಿಸಿಕೊಡುವುದಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಖರ್ಗೆಯವರು ಹೇಳಿದಹಾಗೆ, ಒಂದು ವಾರದಲ್ಲಿ ಅಥವಾ ಇನ್ನು 8 - 10 ದಿವಸದಲ್ಲಿ ಕ್ಲಿಯರ್ ಆಗಿ ಇಡೀ ದೇಶಕ್ಕೆ ಗೊತ್ತಾಗುವಂತೆ ಎಲ್ಲಾ ಕಾರ್ಯಕ್ರಮವನ್ನು ರೂಪಿಸುತ್ತೇವೆ.

ಶ್ರೀ ಹೆಚ್.ಎನ್. ನಂಜೇಗೌಡ: ನಮ್ಮ ಬಗ್ಗೆ ಗೊತ್ತಾದರೆ ಸಾಕಾಗಲಿಲ್ಲ. ನಮ್ಮ ಪ್ರಾಜೆಕ್ಟ್ಸ್ ಬಗ್ಗೆ ಗೊತ್ತಾದರೆ ಸಾಕಾಗಲಿಲ್ಲ. ಈಗ ಆಂಧ್ರದಲ್ಲಿ ಕೆಲವು ಪ್ರಾಜೆಕ್ಟ್ಸ್ ಮಾಡಿದ್ದಾರೆ. ತೆಲುಗು ಗಂಗಾ ಮಾಡಿದ್ದಾರೆ, ಶ್ರೀ ಶೈಲಂನಲ್ಲಿ ಕೆನಾಲ್‌ಗಳನ್ನು ಎಕ್ಸ್‌ಟೆಂಡ್ ಮಾಡಿಕೊಂಡಿದ್ದಾರೆ, ನಾನು ಹೇಳಿದ್ದೆ, ಅಂಕಿ ಅಂಶ ಕೊಟ್ಟೆ. ಅವರ ಷೇರಿಗಿಂತ, 379 ಟಿ.ಎಂ.ಸಿ.ಎಫ್.ಟಿ ಜಾಸ್ತಿಲ ಪಯೋಗ ಮಾಡಿಕೊಳ್ಳುವುದಕ್ಕೆ ಅವರು ಪ್ಲಾನ್ ಹಾಕಿದ್ದಾರೆ. ಅದು ಅವರಿಗೂ ಗೊತ್ತಾಗಬೇಕು.

ಲೋಕಸಭಾ ಸದಸ್ಯರಿಗೂ ಸಹ ಇದರ ಬಗ್ಗೆ ಮಾಹಿತಿಯನ್ನು ಒದಗಿಸಿಕೊಡಬೇಕು. ನಮಗೆ ಒದಗಿಸಿಕೊಟ್ಟರೆ ಸಾಕಾಗುವುದಿಲ್ಲ.

ಶ್ರೀ ಕೆ. ಎನ್. ನಾಗೇಗೌಡ: ಮಾನ್ಯ ಅಧ್ಯಕ್ಷರೇ, ತೆಲಗು ಗಂಗಾ ಬಗ್ಗೆ 300, ಅವರು ಹೇಳಿದಂತೆ ಶ್ರೀ ಶೈಲ ಲೆಫ್ಟ್, ಶ್ರೀ ಶೈಲ ರೈಟ್ ಭೀಮ, ಪಂಚೆಬೆಲಿ 79 ಇನ್ನೂ 23 ನಮ್ಮ ಗೋದಾವರಿ ಡೈವರ್‌ಷನ ಸ್ಕೀಮ್‌ನಲ್ಲಿ ಉಪಯೋಗಿಸಿಕೊಂಡಿದ್ದಾರಲ್ಲಾ ಅದನ್ನು ಸೇರಿಸಿ 79 -23-91 ಪ್ಲೆಸ್ 300 ಇಟ್ಟು ಲೆಕ್ಕ ಹಾಕಿ ಅದನ್ನು ನಮ್ಮ ಮುಖ್ಯಮಂತ್ರಿಗಳ ಕಾನ್ಫರೆನ್ಸ್‌ನಲ್ಲಿ ಮೆಮೋರ್‍ಯಾಡ್‌ಂನಲ್ಲಿ ಸಹ ಎಲ್ಲೆಲ್ಲಿ ಅವರು ಎಷ್ಟೆಷ್ಟು ಉಪಯೋಗಿಸಿಕೊಂಡಿದ್ದಾರೆ ಎನ್ನುವುದನ್ನು ಕೊಟ್ಟಿದ್ದೇವೆ. ಆದರಲ್ಲಿಯೂ ಸಹ ಈ ಮಾಹಿತಿಯನ್ನು ಸೇರಿಸಬೇಕೆನ್ನುವ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಈಮಾತನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರಲು ಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಈಗ ಮಾನ್ಯ ನೀರಾವರಿ ಸಚಿವರು ಝೀ. ಟಿ.ವಿ.ಗೆ ಒಂದು ಚಿತ್ರ ತೆಗೆಯಲು ನಾವು ಮಾಹಿತಿ ಎಲ್ಲಾ ರೆಡಿಮಾಡುತ್ತಿದ್ದೇನೆ, ಮಾಹಿತಿಯನ್ನು ಇವತ್ತು ಒದಗಿಸುತ್ತೇವೆ ಎಂದು ಹೇಳಿದರು. ಒಂದು ಮಾತನ್ನು ನಾನು ತಮಗೆ ಹೇಳುತ್ತಿದ್ದೇನೆ ಏನು ಮಾಹಿತಿಯನ್ನು ತಾವು ತಯಾರು ಮಾಡಿದ್ದೀರಿ, ಅದು ಯಾವ ರೀತಿ ಮಾಡಬೇಕೆಂದು ಹೊರಟಿದ್ದೀರಿ ತಮ್ಮ ನಿರ್ಧಾರಗಳು ಏನು ಆದರ ಚರಿತ್ರೆಗಳು ಏನು ಇವೆಲ್ಲವನ್ನು ನಮ್ಮ ಜೊತೆಯಲ್ಲಿ ಕುಳಿತು ನೀವು ಚರ್ಚೆ ಮಾಡಿ. ನಮ್ಮ ಜೊತೆಯಲ್ಲಿ ಕುಳಿತು ಚರ್ಚೆ ಮಾಡತಕ್ಕಂಥ ಸೌಜನ್ಯವನ್ನು ತಾವು ಕಲಿತುಕೊಳ್ಳಿ, ಆ ಸೌಜನ್ಯವನ್ನು ಬಿಟ್ಟು ನೀವೇ ಹೋಗಿ ಝೀ.ಟಿ.ವಿ.ಗೆ ಆಲ್ಮಟ್ಟಿಯನ್ನು ನಾವು ಎಂದೂ ಏರಿಸುವುದಿಲ್ಲ ಅಂದರೆ ಅದು ಆಗುವುದಿಲ್ಲ. ಅದಕ್ಕೆ ಒಂದು ಇತಿಹಾಸ ಇದೆ ಅದೆಲ್ಲವನ್ನೂ ತಾವು ಕ್ರೋಢೀಕರಿಸಿ ತಜ್ಞರ ಸಮಿತಿಯನ್ನು ಕರೆದು ನಾವು ಇದರ ಬಗ್ಗೆ ಯಾವ ರೀತಿ ಏನೇನು ಮಾಡಬೇಕು ಎನ್ನುವುದು ಒಂದು. ಮತ್ತೊಂದು ಕೈಪಿಡಿಯ ಮುದ್ರಣ ಇದು ಕೇವಲ ಆಲ್ಮಟ್ಟಿಗೆ ಸಂಬಂಧಪಟ್ಟಿದ್ದುದು ಅಲ್ಲ ತೆಲಗು ಗಂಗಾ ನಿರ್ಮಾಣ ಏನು? ಅದರ ಹಿಂದೆ ನಡೆದಂಥ ಕಥೆ ಏನು ? ತೆಲಗು ಗಂಗಾಕ್ಕೆ ಕಾರಣಕರ್ತರು ಯಾರು? ಈ ತೆಲಗು ಗಂಗಾ ಪ್ರಾರಂಭವಾದ ಉದ್ದೇಶ ಏನು ? ಅಂತಿಮವಾಗಿ ತೆಲಗು ಗಂಗಾ ಹೋದಂತಹ ದಾರಿ ಏನು? ಜುರಾಲ ಬಗ್ಗೆ, ಶ್ರೀ ಶೈಲಂ ಬಗ್ಗೆ, ನಮ್ಮಲ್ಲಿ ಯಾವ ಮಾಹಿತಿ ಇಲ್ಲ ಸ್ವಾಮಿ, ಈ ಮಾಹಿತಿ ನಮಗೆ ಸಿಕ್ಕಿಲ್ಲ. ನನಗನಿಸುತ್ತದೆ ಬೇರೆಯವರಿಗೆ ಕೊಡುವ ಮಾತು ಇರಲಿ ನಮ್ಮ ಶಾಸನ ಸಭಾ ಸದಸ್ಯರುಗಳಿಗೆ ಒಂದು ಕೈಪಿಡಿ ಇವತ್ತಿನವರೆಗೂ ಬರಲಿಲ್ಲ. ವಿರೋಧಪಕ್ಷದಮುಖಂಡರುಗಳಿಗೆ ಬರಲಿಲ್ಲ. ಪಾರ್ಲಿಮೆಂಟ್ ಸದಸ್ಯರಿಗೆ ಬರಲಿಲ್ಲ. ನಮ್ಮ ರಾಜ್ಯದ ಕೇಂದ್ರದಲ್ಲಿರುವಂತಹ ಸಚಿವರುಗಳಿಗೆ ಬರಲಿಲ್ಲ. ನಾನು ವಾರ್ತಾ ಇಲಾಖೆಯನ್ನು ದೂಷಣೆ ಮಾಡುತ್ತಿಲ್ಲ. ಆ ಇಲಾಖೆಗೆ ಶಕ್ತಿ ಕೊಟ್ಟರೆ ತಾನು ಅಲ್ಲಿ ಕನಿಷ್ಟ ದರ್ಜೆಯ ಒಬ್ಬ ಅಧಿಕಾರಿಯನ್ನು ಇಟ್ಟಿದ್ದಾರೆ. ಸಣ್ಣ ಒಂದು ಕೊಠಡಿಯಲ್ಲಿ 25 ಪುಸ್ತಕ ಇದೆ. ಅಲ್ಲಿ ಏನೆಂದರೆ ಏನೂ ಇಲ್ಲ, ಅವರ ಒಂದು ಟಿ.ವಿ ಕ್ಯಾಮರಾ ಬಾಡಿಗೆಗೆ ತರಬೇಕು. ಒಂದು ಪತ್ರಿಕಾ ಪ್ರತಿನಿಧಿಗಳ

ಸಭೆ ಪಡೆಯಬೇಕಾದರೆ ಕರ್ನಾಟಕ ಭವನಕ್ಕೆ ಬರಬೇಕು. ಅವರು ಒಂದು ವ್ಯಾನ್ ತರಬೇಕಾದರೆ ಬಾಡಿಗೆಗೆ ತರಬೇಕು. ಅವ್ಯವಸ್ಥೆಯ ಪರಮಾವಧಿ ಡೆಲ್ಲಿಯ ವಾರ್ತಾ ಭವನ. ಡೆಲ್ಲಿಯ ವಾರ್ತಾ ಭವನವನ್ನು ಶಕ್ತಿಯುತವಾಗಿ ಮಾಡಿ ಆ ವಾರ್ತಾ ಭವನದ ಮೂಲಕ ನಮ್ಮ ಇಡೀ ಕರ್ನಾಟಕದ ಸಮಗ್ರ ಚಿತ್ರ ಕಣ್ಣು ಮುಚ್ಚಿ ತೆಗೆದ ತಕ್ಷಣ ಪ್ರತಿಯೊಂದು ಬಾಗಿಲಿನಲ್ಲಿಯೂ ನಮ್ಮ ರಾಜ್ಯದ ಕೈಪಿಡಿಗಳು ಆಲ್ಮಟ್ಟಿಯದು ಆಗಲಿ ಕೃಷ್ಣಾ ಆಗಲಿ ಕಾವೇರಿ ಆಗಲಿ ಪ್ರತಿಯೊಂದು ಸಿಗತಕ್ಕಂಥ ಒಂದು ವ್ಯವಸ್ಥೆ ಸರ್ಕಾರ ಇದುವರೆಗೂ ಮಾಡಿಲಿಲ್ಲ. ನಾನು ಈ ಸರ್ಕಾರ ಮಾಡಲಿಲ್ಲ ಎಂದು ಹೇಳುವುದಿಲ್ಲ. ಹಿಂದಿನಿಂದ ಈ ಧೋರಣೆ ಇದೆ. ಈ ಧೋರಣೆ ಬೆಳೆದು ಬಂದಿದೆ ಅದಕ್ಕೆ ಈಗ ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ತ್ವರಿತವಾಗಿ ನೀರಾವರಿ ಇಲಾಖೆ ವಾರ್ತಾ ಇಲಾಖೆ ಒಂದು ಕಡೆ ಕುಳಿತುಕೊಳ್ಳಬೇಕು. ಮತ್ತೊಂದು ತಮ್ಮ ಸರ್ಕಾರ ಉಳಿದರೆ ನಾವು ವಿರೋಧಪಕ್ಷವನ್ನು ಕರೆಯಿರಿ. ಉಳಿಯದಿದ್ದರೆ ನಾವೇನೂ ಮಾಡುವುದಕ್ಕೆ ಆಗುವುದಿಲ್ಲ. ಮತದಾನವಾದ ನಂತರ ನಿಮ್ಮ ಸರ್ಕಾರದ ಉಳಿದರೆ ನಮ್ಮದೇನೂ ಅಭ್ಯಂತರ ಇಲ್ಲ.

ಶ್ರೀ ಸಿ ಭೈರೇಗೌಡ: ನಿಜ ಹೇಳುತ್ತಿದ್ದೀರೋ ?

ಶ್ರೀ ವಾಟಾಳ್ ನಾಗರಾಜ್ : ಇವತ್ತು ನನಗೆ ಸುದ್ದಿ ಬಂದರೆ. ನೀವು 20 ಜನ ಗೈರು ಹಾಜರಾಗುತ್ತೀರಿ ಎಂದು. ಅದು ಇರಲಿ ಅದು ಮತದಾನಕ್ಕೆ ಬಂದಾಗ. ಈಗ ನಾನು ಅದಕ್ಕೆ ಹೋಗುವುದಿಲ್ಲ. ಮಾನ್ಯ ನೀರಾವರಿ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳಾದ ಜೆ.ಎಚ್ ಪಟೇಲರು ಅವರೇ ಆಗಲಿ ಯಾರೇ ಆಗಲಿ ಸರ್ಕಾರ ಎನ್ನುವುದು ಒಂದು ಇರಲೇಬೇಕಲ್ಲಾ ಮುಂದೆ. ಈ ಸರ್ಕಾರ ಹೋದರೆ ಇನ್ನೊಂದು ಸರ್ಕಾರ ಬರಲೇಬೇಕು. ನಾವೇನೂ ಬದಲಾವಣೆ ಆಗುವುದಿಲ್ಲ. ಸರ್ಕಾರ ಈ ಬಗ್ಗೆ ಲಘುವಾಗಿ ಕಾಣುವುದಕ್ಕೆ ಆಗುವದಿಲ್ಲ. ಇದರ ಬಗ್ಗೆ ಸ್ಪಷ್ಟವಾದ ಒಂದು ತೀರ್ಮಾನ ತೆಗೆದುಕೊಳ್ಳಬೇಕು ನಾನು ತಮ್ಮ ಮೂಲಕ ಹೇಳುತ್ತಿದ್ದೇನೆ ಯಾವುದೇ ತರಹದ ಸಮಿತಿ ಆಲ್ಮಟ್ಟಿಗೆ ಕಾಲಿಟ್ಟರೆ ಕರ್ನಾಟಕ ಸಮಗ್ರ ಕನ್ನಡಿಗರ ಹೋರಾಟದ ಸಂಕೇತವಾಗಿ ಅವರನ್ನು ತಡೆ ಹಿಡಿಯತಕ್ಕಂಥ ಪ್ರಚಂಡವಾದ ಚಳುವಳಿಯನ್ನು ನಾವು ಆರಂಭಿಸಬೇಕಾಗುತ್ತದೆ ನಾನು ಈ ಸರ್ಕಾರದ ಮೇಲೆ ನೇರವಾದ ಆಲೋಚನೆಯನ್ನು ಮಾಡುತ್ತಿದ್ದೇನೆ. ಸುಮ್ಮನೆ ಇದು ಒಂದು ತರಹ ಹುಡುಗಾಟಿಕೆ ಆಗಬಾರದು. ಈ ಸರ್ಕಾರದ ಬಂದ ನಂತರ ನಮ್ಮ ಹಿತಕ್ಕೆ ಬಹಳ ಧಕ್ಕೆ ಬರುತ್ತದೆ.. ಎಂದು ನಾನು ಹೇಳುತ್ತೇನೆ ಪೋಲಿಸ್ ಇಲಾಖೆಯಲ್ಲಿ 3 ತಿಂಗಳಿಂದ ಏನಾಗಿದೆ ಎಂದು ನಾನು ಹೇಳುವುದಕ್ಕೆ ನಾಚಿಕೆಯಾಗುತ್ತದೆ. ನಿನ್ನೆಯ ದಿವಸ ಗಣೇಶನ ಹಬ್ಬಕ್ಕೆ ಎಂದು ಹೇಳಿ ಹಣ ವಸೂಲಿಗೆ ಹೋಗಿದ್ದಾರೆ. ಅವರು ಯಾರು ? ಅವರೇನೂ ರೌಡಿಗಳು ಅಲ್ಲ. ಅವರು ಯಾರೋ ಬೇರೆ ದರೋಡೆ ಕೋರರೂ ಅಲ್ಲ ಅವರು ಯುವ ಕಾಂಗ್ರೆಸ್ ಪಕ್ಷದ ಪದಾಧಿಕಾರಿಗಳು. ಅವರನ್ನು ನೀವು ಗಣೇಶನ ಹಬ್ಬಕ್ಕೆ ವಸೂಲಿ ಮಾಡಲು ಹೊರಟಿದ್ದೀರಿ ಎಂದು ಕೇಳಿ ಅವರನ್ನು ಹಸ್ತಗಿರಿ ಮಾಡಿ ಖೈದಿಗಳಿಗೆ ಕೊಡುವ ರೀತಿ ಸೇಟ್‌ಗಳನ್ನು ಕೊಟ್ಟು ಇಡೀ ರಾತ್ರಿ ಅವರನ್ನು ಕೂರಿಸಿ ಒಂದು ರೀತಿ ದೌರ್ಜನ್ಯ ಮಾಡಿದ್ದಾರೆ ಈ ಬೆಂಗಳೂರಿನಲ್ಲಿ. ಇವರೆಲ್ಲಾ ಯುವ ಕಾಂಗ್ರೆಸ್‌ನ ಪದಾಧೀಕಾರಿಗಳು.

ಇವರು ದರೋಢೆಕೋರರು ಅಲ್ಲ. ದರೋಡೆಕೋರರು ರಾಜರೋಷವಾಗಿ ಓಡಾಡುತ್ತಿದ್ದಾರೆ. ಲೂಟಿಕೋರರು ರಾಜಾರೋಷವಾಗಿ ಓಡಾಡುತ್ತಿದ್ದಾರೆ. ಅವರು ಹಗಲು ರಾತ್ರಿ ಐಶಾರಾಮವಾಗಿ ಭಾರಿ ಭಾರಿ ಬಂಗಲೇಗಳಲ್ಲಿ ಲೂಟಿ ಮಾಡಿ ಸಾವಿರಾರು ಎಕರೆ ಜಮೀನುಗಳನ್ನು ಕಬಳಿಸಿ ರಾಜ್ಯಕ್ಕೆ ಮಾರಕವಾಗಿರತಕ್ಕಂಥ ಜನ ಆರಾಮವಾಗಿ ರಸ್ತೆಯಲ್ಲಿ ಓಡಾಡುತ್ತಿದ್ದಾರೆ. ಬಡಪಾಯಿ ಯಾವುದೋ ಒಂದು ಪಕ್ಷದ ಕಾರ್ಯಕರ್ತರು.......

ಶ್ರೀ ಎಂ ಶ್ರೀನಿವಾಸ್ : ಗಣೇಶನ ಹಬ್ಬಕ್ಕೆ ಹಣ ವಸೂಲಿ ಮಾಡುವವರು 5 ರೂಪಾಯಿ 10 ರೂಪಾಯಿ ವಸೂಲಿ ಮಾಡುತ್ತಾರೆ. ಅವರು ಲಕ್ಷಾಂತರ ರೂಪಾಯಿಗಳನ್ನು ಸರ್ಕಾರಕ್ಕೆ ಎಲ್ಲಿಂದತಂದು ಕೊಡುತ್ತಾರೆ? ದೊಡ್ಡ ದೊಡ್ಡ ಜಮೀನುಗಳನ್ನು ಕಬಳಿಸುವವರು ಆದರೆ ಲಕ್ಷಗಳು ಕೊಡುತ್ತಾರೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದ್ದು ಬೇರೆ ವಿಚಾರ. ಮಾನ್ಯ ಸದಸ್ಯರಿಗೆ ಮಾತನಾಡಬೇಕೆನ್ನುವುದನ್ನು ಸ್ವಲ್ಪ ಹೇಳಿ , ಇದನ್ನು ಯಾವು ಯಾವುದಕ್ಕೂ ತೆಗೆದುಕೊಂಡು ಹೋಗಬಾರದು.

ಶ್ರೀ ಎಂ. ಶ್ರೀನಿವಾಸ್ : ನನಗೆ ಅವಕಾಶ ಸಿಕ್ಕಿದರೆ ನಾನು ಹೇಳುತ್ತೇನೆ. ನನ್ನ ಹತ್ತಿರ ಮಾಹಿತಿ ಇದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ನಾನು ಪೋಲೀಸ್ ಇಲಾಖೆಯ ಅಧಿಕಾರಿಗಳು ಇದರಲ್ಲಿ ರಾಜಕೀಯ ಮಾಡಿದಿದ್ರೆ ಹೇಳುವುದಕ್ಕೆ ಹೋಗುವುದಿಲ್ಲ. ಅಥವಾ ಅವರು ಯಾವುದೋ ಒತ್ತಡಕ್ಕೆ ಮಣಿದು ಈ ಕೆಲಸ ಮಾಡಿದ್ದಾರೆಂದು ನಾನು ಹೇಳುವದಕ್ಕೆ ಹೋಗುವುದಿಲ್ಲ. ಇಂತಹ ಪರಿಸ್ಥಿತಿ ನಿರ್ಮಾಣ ಆದರೆ ಇದು ಬಹಳ ಒಳ್ಳೆಯ ನೀತಿ ಏನೂ ಅಲ್ಲ. ಈ ಬಗ್ಗೆ ಸ್ಪಷ್ಟವಾಗಿ ಸಮಗ್ರವಾಗಿ ತನಿಖೆ ಆಗಬೇಕು. ಅವರು ಇವತ್ತು ಬೆಳಿಗ್ಗೆ ಬಂದು ಕಣ್ಣೀರು ಇಡುತ್ತಾರೆ. ನಾವೆಲ್ಲಾ ಕಾಂಗ್ರೇಸ್ಸ್ ಕಾರ್ಯಕರ್ತರು ಎಂದು ಹೇಳಿದರು. ತಾವು, ಗಣೇಶೋತ್ಸವ ಮಾಡುವುದಕ್ಕೆ ಅಡ್ಡಿ ಮಾಡುತ್ತಿದ್ದೀರಿ ಸ್ವಾತಂತ್ರ್ಯೋತ್ಸವ ಮಾಡುವುದಕ್ಕೆ ಅಡ್ಡಿ ಮಾಡುತ್ತಿದ್ದೀರಿ ಗಣರಾಜ್ಯೋತ್ಸವ ಮಾಡುವುದಕ್ಕೆ ಅಡ್ಡಿ ಮಾಡುತ್ತಿದ್ದಿರಿ ಇದು ಸರಿಯಲ್ಲ. ಇಂಥಾದ್ದರಬಗ್ಗೆ ನಾವು ಪ್ರಾಮಾಣಿಕವಾಗಿ ಚಿಂತನೆ ಮಾಡಬೇಕೇ ಹೊರತು ಈ ನೀತಿ ಸರಿಯಲ್ಲ. ನಾನು ತಮಗೆ ಬರೀ 40 ದಿವಸದ ಒಂದು ಚಿತ್ರ ಕೊಡುತ್ತೇನೆ. ಈ 40 ದಿವಸದಲ್ಲೇ ನಡೆದಿದೆ ಎಂದು ತಾವು ತಿಳಿದುಕೊಳ್ಳಬೇಕಾಗಿಲ್ಲ. ಈ ದರೋಡೆ ಬೆಂಗಳೂರು ನಗರದಲ್ಲಿ 8 - 10 ವರ್ಷಗಳಿಂದ ನಡೆಯುತ್ತಿದೆ. ಆ ಬಂಧನದ ಬಗ್ಗೆ ನಾನು ಬಿಟ್ಟಿದ್ದೇನೆ. ಸರ್ಕಾರ ಅದರ ಬಗ್ಗೆ ಸಂಪೂರ್ಣವಾಗಿ ಚರ್ಚೆ ಮಾಡಲಿ. ಇದು ಸಾರ್ವಜನಿಕ ಕೆಲಸ ಮಾಡತಕ್ಕಂಥ ವ್ಯಕ್ತಿಯ ಮಾನಭಂಗ. ಅವರ ಮಾನ ಹಾನಿಯಾಗಿದೆ. ಪೋಲೀಸ್‌ನವರು ಸ್ಲೇಟ್ ಕೊಟ್ಟು ಖೈದಿಯ ರೀತಿ ನಡೆಸಿಕೊಂಡಿದ್ದಾರೆ.

ಅವರುಗಳಿಗೆ ಆಗಿರುವ ಅನ್ಯಾಯದ ವಿರುದ್ಧ ಮಾನ ನಷ್ಟದ ಮೊಕದ್ದಮೆಯನ್ನು ಸಂಬಂಧಪಟ್ಟ ನ್ಯಾಯಾಲಯದಲ್ಲಿ ಹಾಕತಕ್ಕ ಚಿಂತನೆಯಲ್ಲಿ ಇದ್ದಾರೆ. ಅದಕ್ಕೆ ನಾವೆಲ್ಲರೂ ಬೆಂಬಲ ಕೊಡುತ್ತೇವೆ. ಹೀಗಾದರೆ ರಾಜಕೀಯ ಪಕ್ಷಗಳ ಕಾರ್ಯಕರ್ತರು ರಸ್ತೆಯಲ್ಲಿ ಓಡಾಡುವುದಕ್ಕಾಗುವುದಿಲ್ಲ, ಮಾತನಾಡುವುದಕ್ಕಾಗುವುದಿಲ್ಲ ಎನ್ನುವುದಾದರೆ ಇದು ಪೋಲಿಸ್ ರಾಜ್ಯ ಎಂದು ನಾವು ಹೇಳಬೇಕಾಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಆ ಹುಡುಗರನ್ನು ಬಿಡಬೇಕೆಂದು ಕೇಳಲು ಹೋದ ಇನ್ನೊಬ್ಬ ಹುಡುಗನನ್ನು ಇಲ್ಲೇ ಕುಳಿತುಕೋ ಎಂದು ಹೇಳಿ ಅವನಿಗೆ ಒಂದು ಬೋರ್ಡ್ ಹಾಕಿ ಕೂರಿಸಿರುವುದರಿಂದ ಅವರ ಮಾನ ಮರ್ಯಾದೆ ಹರಾಜು ಮಾಡಿದಂಥಾತಾಗಿದೆ. ಈಗಲೇ ರಾಜಕಾರಣಿಗಳು ಎಂದರೆ ಅಲರ್ಜಿ ಬರುವ ವಾತಾವರಣ ಉಂಟಾಗಿರುವ ಈ ದೇಶದಲ್ಲಿ ಅದರಲ್ಲೂ ಒಳ್ಳೆಯ ಕಾರ್ಯಕರ್ತರಾಗಿರುವ ಹುಡುಗರನ್ನು ಯಾರಿಗೋ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಅಕ್ಯೂಸ್ಡ್ ಮಾಡಿರುವ ಪೋಲೀಸರ ವಿರುದ್ಧ ಆ್ಯಕ್ಷನ್ ತೆಗೆದುಕೊಳ್ಳಬೇಕು. ಸುಮ್ಮಸುಮ್ಮನೆ ನಿರಪರಾಧಿಗಳ ಮೇಲೆ ಕೇಸ್ ಹಾಕಿ ಚಾರ್ಜಿಶೀಟ್‌ಡ್ ಹಾಕತಕ್ಕಂಥಾದ್ದು ಅಥವಾ ಪೋಲೀಸ್ ಕಸ್ಟಡಿಯಲ್ಲಿ ಇರಿಸತಕ್ಕಂಥ ಕೆಲಸ ಮಾಡುವುದು ಸರಿಯಲ್ಲ. ಇದರ ಬಗ್ಗೆ ಮಾನ್ಯ ಉಪ ಮುಖ್ಯ ಮಂತ್ರಿಯವರು ಗಮನಹರಿಸಿ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ, ಇದು ರಾಜಕೀಯ ದುರುದ್ದೇಶದಿಂದ ಮಾಡಿದ್ದಾರೆ ಎನ್ನುವ ಅಭಿಪ್ರಾಯಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಆ ಅಭಿಪ್ರಾಯಕ್ಕೆ ಅವಕಾಶ ಮಾಡಿಕೊಡದ ರೀತಿಯಲ್ಲಿ ದಯವಿಟ್ಟು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ: ಈ ದಿವಸ ಬೆಳಿಗ್ಗೆ ಆ ಹುಡುಗರು ನನ್ನ ರೂಮಿಗೆ ಬಂದಿದ್ದು ಇದೇ ರೀತಿ ಆದರೆ ನಾವು ವಿಧಾನ ಸೌಧದ ಮುಂದೆ ಸೂಯಿಸೈಡ್ ಮಾಡಿಕೊಳ್ಳುತ್ತೇನೆಂದು ಹೇಳಿದ್ದಾರೆ. ಗಣೇಶೋತ್ಸವಕ್ಕೆ ಹಣ ಕಲೆಕ್ಟ್ ಮಾಡುವ ಹುಡುಗರಿಗೆ ಇಂಥಾ ದೌರ್ಜನ್ಯ ನಡೆದಿರುವುದು ಸರಿಯಲ್ಲವಾದ್ದರಿಂದ ಸಂಭಂಧಪಟ್ಟ ಮಂತ್ರಿಗಳು ಇವರ ಬಗ್ಗೆ ಗಮನಹರಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಈ ರೀತಿ ದೌರ್ಜನ್ಯ ಮಾಡಿರುವುದರಿಂದ ನಾಳೆ ದಿವಸ ಆ ಹುಡುಗರು ಆತ್ಮಹತ್ಯೆ ಮಾಡಿಕೊಳ್ಳುವಂಥ ಸಂದರ್ಭ ಬರಬಹುದು.

ಶ್ರೀ ವಾಟಾಳ್ ನಾಗರಾಜ್: ಈ ಪತ್ರಿಕೆಯಲ್ಲಿ ಬಂದಿರುವ ಫೋಟೋಗಳನ್ನು ನೋಡಿ ಎಲ್ಲೊ ವೀರಪ್ಪನ್ ಕಡೆಯವರನ್ನು ಹಿಡಿದಿರಬೇಕೆಂದು ಅಂದುಕೊಂಡೆ. ಆದರೆ, ರಾಜಕೀಯ ಪಕ್ಷದ ಕಾರ್ಯಕರ್ತರನ್ನು ಪೋಲೀಸರು ಹಿಡಿದು ಪತ್ರಿಕೆಗಳಲ್ಲಿ ಅವರ ಫೋಟೋಗಳನ್ನು ಹಾಕಿಸಿದ್ದಾರೆ. ಇದು ಹೇಗಿದೆ? ಸ್ಲೇಟ್‌ಗಳ ಮೇಲೆ ಅವರ ಹೆಸರುಗಳನ್ನು ಬರೆದು ಹುಡುಗರ ಮುಂದೆ ಅದನ್ನು ಇಟ್ಟು ಫೋಟೋ ತೆಗೆಸಿದ್ದಾರೆ. ಈ ರೀತಿ ಮಾಡಿದ ಪೋಲೀಸರನ್ನು ಅಮಾನತ್ತಿನಲ್ಲಿ ಇಟ್ಟರೆ ಅಥವಾ ಬದಲಾವಣೆ ಮಾಡಿದರೆ ಈ ಪತ್ರಿಕೆಯಲ್ಲಿ ಬಂದಿರುವ ದೃಶ್ಯವನ್ನು ಮತ್ತೆ ಬದಲಾವಣೆ ಮಾಡುವುದಕ್ಕೆ ಸಾಧ್ಯವೆ? ಈ ರೀತಿ ಫೋಟೋಗಳು ಬಂದಿರುವುದರಿಂದ

ಅವರ ಬಂಧು ಬಳಗದವರಲ್ಲಿ ಯಾವ ಅಭಿಪ್ರಾಯ ಬರುತ್ತದೆ? ಅವರುಗಳಲ್ಲಿ ಒಬ್ಬ ಹುಡುಗನಂತೂ ಆತ್ಮಹತ್ಯೆ ಮಾಡಿಕೊಳ್ಳುವಂಥ ಪರಿಸ್ಥಿತಿಗೆ ಬಂದು ತಲುಪಿದ್ದಾನೆ. ಈ ಘಟನೆ ಬಗ್ಗೆ ಒಂದು ಪಕ್ಷ ಪೋಲೀಸ್ ಉನ್ನತ ಅಧಿಕಾರಿಗಳ ಗಮನಕ್ಕೆ ಭಾರದೇ ಇದ್ದರೆ ಕೂಡಲೇ ಇದರ ಬಗ್ಗೆ ಗಮನ ಹರಿಸಿ ಸಂಬಂಧಪಟ್ಟ ಪೋಲೀಸರ ವಿರುದ್ಧ ತೀವ್ರ ಕ್ರಮ ತೆಗೆದುಕೊಳ್ಳಬೇಕು. ಅವನ ಮೇಲೆ, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹೇಗಿದೆ ಎಂಬ ಬಗ್ಗೆ ಹೇಳುತ್ತೇನೆ, ಇಡೀ ರಾಜ್ಯದ ವಿಷಯ ಬಿಟ್ಟು ಬರೀ ಬೆಂಗಳೂರು ನಗರದ ಮಟ್ಟಿಗೆ ಹೇಳುವುದಾದರೆ, ಪ್ರತಿದಿನ ಅಪರಾಧಗಳ ಪಟ್ಟಿಯೇ ಪತ್ರಿಕೆಗಳಲ್ಲಿ ಬರುತ್ತಿದೆ. ನಗರದಲ್ಲಿ ದರೋಡೆ, ಚಿನ್ನಾಭರಣ ಕಳವು, ವಾಹನಗಳಿಂದ ಲೂಟಿ, ಲಾಕಪ್ ಸಾವು, ದೊಡ್ಡ ಬಳ್ಳಾಪುರದಲ್ಲಿ ಅಧಿಕಾರಿಗಳ ಮೇಲೆ ಹಲ್ಲೆ, ಪಟ್ಟಣದಲ್ಲಿ ಕಳ್ಳತನ, ಸುಲಿಗೆ, ವಾಹನ ಕಳ್ಳು ಅಂಗವಿ ಕಳವು, ಅಧಿಕಾರಿಗಳ ಮೇಲೆ ಹಲ್ಲೆ, ಸರಗಳ್ಳತನ, ಕಾರು ಕಳವು ಹೀಗೆ ಪ್ರತಿ ದಿನ ಅಪರಾಧಗಳು ಹೆಚ್ಚಾಗಿ ನಡೆಯುತ್ತಿರುವುದರಿಂದ ಸಮಾಜದಲ್ಲಿ ನಾಗರೀಕರು ಭಯಭೀತಿಯಿಂದ ಓಡಾಡಬೇಕಾಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಅಪರಾಧಗಳನ್ನು ತಡೆಯುವುದಕ್ಕೆ ಏನು ಕ್ರಮಗಳನ್ನು ಸರ್ಕಾರ ಕೈಗೊಂಡಿದೆ? ಸರ್ಕಾರದಲ್ಲಿ ಅಧಿಕಾರಿಗಳ ಸಂಖ್ಯೆ ಕಡಿಮೆಯಾಗಿರುವುದರಿಂದ ಈ ತರಹ ಆಗುತ್ತಿದೆಯೇ ಅಥವಾ ಅಧಿಕಾರಿಗಳಲ್ಲಿ ಧಕ್ಷತೆ ಕಡಿಮೆಯಾಗಿದೆಯೋ?

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ಅಧಿಕಾರಿಗಳಲ್ಲಿ ಧಕ್ಷತೆ ಕಡಿಮೆಯಾಗಿರುವುದರಿಂದ, ಹೆಚ್ಚಿನ ಧಕ್ಷತೆ ಪಡೆಯುವ ಸಲುವಾಗಿ ಗೃಹ ಇಲಾಖೆಯ ರಾಜ್ಯ ಸಚಿವರ ಜೊತೆಗೆ ಎಳೆಂಟು ಜನ ಪೋಲೀಸ್ ಅಧಿಕಾರಿಗಳು ವಿದೇಶಕ್ಕೆ ಹೋಗಿದ್ದಾರೆ. ಅಲ್ಲಿ ಧಕ್ಷತೆ ಬಗ್ಗೆ ಅಭ್ಯಾಸ ಮಾಡಿಕೊಂಡು ಬಂದ ಮೇಲೆ ಇಲ್ಲಿ ನಡೆಯತಕ್ಕಂಥ ದರೋಡೆ, ಕೊಲೆ, ಸುಲಿಗೆ ಮುಂತಾದ ಅಪರಾಧಗಳನ್ನು ನಿಲ್ಲಿಸುತ್ತಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಈಗಾಗಲೇ ಇನ್‌ಫೆಂಟ್ ಎನ್ನುವ ಪೋಲೀಸ್ ಅಧಿಕಾರಿ ಹೊರ ದೇಶದಲ್ಲಿ ತರಬೇತಿ ತೆಗೆದುಕೊಂಡು ಬಂದು ಕೊಟ್ಟ ವರದಿ ಪ್ರಕಾರ ಕ್ರಮ ತೆಗೆದು ಕೊಳ್ಳದೇ ಇರುವಾಗ ಪುನಃ ಮತ್ತೊಂದು ಸಾರಿ ಅಧ್ಯಯನ ಮಾಡಲು ಹೋಗುವ ಅವಶ್ಯಕತೆ ಏನಿತ್ತು?

ಶ್ರೀ ವಾಟಾಳ್ ನಾಗರಾಜ್: ಕರ್ನಾಟಕದಲ್ಲಿ ಕರ್ಮಕಾಂಡವಾಗಿರುವ ಸಂಚಾರಿ ವ್ಯವಸ್ಥೆಯನ್ನು ಸರಿಪಡಿಸುವ ಬಗ್ಗೆ ಏನು ಕ್ರಮಕೈಗೊಳ್ಳಬೇಕೆಂಬ ಬಗ್ಗೆ ಅಧ್ಯಯನ ಮಾಡಲು ಗೃಹ ಮಂತ್ರಿಯವರು ಮತ್ತು ಅಧಿಕಾರಿಗಳು ಬೇರೆ ನಾಲ್ಕು ದೇಶಗಳಿಗೆ ಹೋಗಿ ಕಲಿಯುವಂಥ ಅವಶ್ಯಕತೆಯಿಲ್ಲ. ಈ ರೀತಿ ನಿಯೋಗ ತೆಗೆದುಕೊಂಡು ಹೊರ ದೇಶಗಳಿಗೆ ಹೋಗುವುದು ಒಳ್ಳೆಯ ಸಂಪ್ರದಾಯವಲ್ಲವೆಂದು ನಾನು ಹೇಳಬೇಕಾಗುತ್ತದೆ. ಕರ್ನಾಟಕದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಸರಿ ಮಾಡುವ ಬಗ್ಗೆ ಧಕ್ಷತೆ ಇರುವಂಥ ಉತ್ತಮ ಅಧಿಕಾರಿಗಳು ಇದ್ದಾರೆ. ಆದರೆ, ಈ ಉತ್ತಮ ಅಧಿಕಾರಿಗಳನ್ನು ಕಾಲ ಕಾಲಕ್ಕೆ ಬರುವಂಥ ಸರ್ಕಾರಗಳು ನಮಗೆ

ಬೇಕಾದವರು ಒಳ್ಳೆಯ ಸ್ಥಳದಲ್ಲಿ ಇರಬೇಕನ್ನುವ ದೃಷ್ಟಿಯಿಂದ ದಕ್ಷ ಅಧಿಕಾರಿಗಳನ್ನು ಸ್ಥಾನಪಲ್ಲಟ ಮಾಡುತ್ತಿರುತ್ತಾರೆ. ಪ್ರತಿ ನಿತ್ಯ ಲೂಟಿ, ದರೋಡೆ, ಕಳ್ಳತನ, ಸುಲಿಗೆ ನಡೆಯುತ್ತಿರುವುದು ಯಾರ ಮೇಲೆ ಸವಾಲಾಗಿದೆ? ಇದು ಪೋಲೀಸ್ ಇಲಾಖೆ ಮೇಲೆಯೇ ಸವಾಲಾಗುತ್ತಿದೆ. ಈ ವಿಷಯವನ್ನು ಅಷ್ಟು ಕಣ್ಣುಮುಚ್ಚಿ ಕೊಂಡು ಲಘುವಾಗಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಪ್ರತಿ ದಿನ ನಡೆಯುತ್ತಿರುವ ದರೋಡೆ, ಕೋಲೆ, ಸುಲಿಗೆಗಳನ್ನು ನೋಡಿದರೆ ನನಗೇ ನಾಚಿಕೆಯಾಗುತ್ತದೆ. ಈ ಅಪರಾಧಗಳನ್ನು ತಡೆಯುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಕಾನೂನು ಸುವ್ಯವಸ್ಥೆಯು ಬೆಂಗಳೂರಿನಲ್ಲಿ ಹದಗೆಟ್ಟಿದೆ, ಕರ್ನಾಟಕ ರಾಜ್ಯ ಪೂರ್ತಿ ಹದಗೆಟ್ಟಿದೆ, ರಾಜ್ಯದ ನಾಗರೀಕರಿಗೆ ರಕ್ಷಣೆ ಇಲ್ಲ, ಹೆಣ್ಣು ಮಕ್ಕಳಿಗೆ ರಕ್ಷಣೆ ಇಲ್ಲ, ರಸ್ತೆಯ ಮೇಲೆ ಎರಡು ಚಕ್ರ ವಾಹನಗಳಲ್ಲಿ ಬಂದು ಮಹಿಳೆಯರ ಕುತ್ತಿಗೆಯಲ್ಲಿರುವ ತಾಳಿಗಳನ್ನು ಕಿತ್ತುಕೊಂಡು ಹೋಗುತ್ತಿದ್ದಾರೆ. ಮಹಿಳೆಯರ ಮೇಲೆ ಬೀಳುತ್ತಿದ್ದಾರೆ, ಮನೆಗಳಿಗೆ ನುಗ್ಗುತ್ತಿದ್ದಾರೆ, ಬಾಗಿಲುಗಳನ್ನು ಒಡೆಯುತ್ತಿದ್ದಾರೆ, ಇಂಥಾ ಪರಿಸ್ಥಿತಿ ಉಂಟಾಗಿರುವುದರಿಂದ ನಾಗರೀಕರುಗಳಿಗೆ ಬಹಳ ಭಯ ಉಂಟಾಗಿದೆ. ಆದುದರಿಂದ, ಮಾನ್ಯ ಮುಖ್ಯ ಮಂತ್ರಿಯವರು ಈ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು. ನಮ್ಮ ಶಾಸಕರ ಭವನದ ಆವರಣದಲ್ಲೇ ಕಾರು ಕಳವಾಗಿದೆ, ಶಾಸಕರ ಕೊಠಡಿಯಲ್ಲಿ ಗಡಿಯಾರಗಳು ಕಳುವಾಗುತ್ತಿವೆ. ಅಂದರೆ ನಾವು ಎಲ್ಲಿಗೆ ತಲುಪುತ್ತಿದ್ದೇವೆ? ಇದು ಯಾವ ಒಬ್ಬ ಅಧಿಕಾರಿ ಮೇಲೆ ನನ್ನ ಆರೋಪ ಅಲ್ಲಿ. ಆದುದರಿಂದ ಇದರ ಬಗ್ಗೆ ಸರ್ಕಾರ ತೀವ್ರವಾಗಿ ಗಮನಹರಿಸಿ ಕ್ರಮ ತೆಗೆದುಕೊಳ್ಳಬೇಕು. ಮತ್ತೆ, ಈ ರಾಜ್ಯದಲ್ಲಿ 11 ಸಾವಿರ ಜನಕ್ಕೆ ಸರ್ಕಾರದಲ್ಲಿ ಕೆಲಸ ಕೊಡುತ್ತೇವೆಂದು ಹೇಳಿರುವ ಈ ಸರ್ಕಾರ ನನ್ನ ಕ್ಷೇತ್ರವಾದ ಚಾಮರಾಜನಗರದ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಕೆಲಸ ಮಾಡುತ್ತಿದ್ದ ಪರಿಶಿಷ್ಟ ವರ್ಗದ 11 ಜನ ಹಂಗಾಮಿ ಕೆಲಸಗಾರರನ್ನು ಕೆಲಸದಿಂದ ತೆಗೆದುಹಾಕಲಾಗಿದೆ. ಇವರುಗಳಿಗೆ ಪ್ರಾರಂಭಿಕ ನೋಟೀಸ್ ಕೂಡ ಕೊಡದೆ ಕೆಲಸದಿಂದ ತೆಗೆದಿರುವುದು ಸರಿಯಲ್ಲ. ಆದುದರಿಂದ, ಕೂಡಲೇ ಅವರುಗಳನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕು. ಆಮೇಲೆ ಸಿರಗುಪ್ಪ ಪಟ್ಟಣ ಪಂಚಾಯಿತಿಯಲ್ಲಿ ಒಂದು ವಿದ್ಯುಚ್ಛಕ್ತಿ ಜನರೇಟರನ್ನು ಖರೀದಿ ಮಾಡಿದ್ದಾರೆ. 3 ಲಕ್ಷ ರೂಪಾಯಿ ಬೆಲೆ ಭಾಳುವ ಜನರೇಟರ್‌ಗೆ 4 ಲಕ್ಷ ರೂಪಪಾಯಿಗಳನ್ನು ಕೊಟ್ಟು ಖರೀದಿ ಮಾಡಲಾಗಿದೆ.

12:50

ಜನರೇಟರ್‌ನ ಬೆಲೆ 3 ಲಕ್ಷ ಇದ್ದರೆ ಅದರ ಖರೀದಿ ನಾಲ್ಕು ಲಕ್ಷಗಳು. ಈ ತರಹದಲ್ಲಿ ಅನೇಕ ಪುರಸಭೆಗಳ ಪರಿಸ್ಥಿತಿಯು ಹೀನಾಯವಾಗಿದೆ. ಮತ್ತೊಂದು ವಿಚಾರವನ್ನು ತಮ್ಮಗಮನಕ್ಕೆ ತರುತ್ತೇನೆ. ಈ ಸರಕಾರವು ಬಂದಮೇಲೆ, ಅಕಾಡಮಿಗಳನ್ನು ಬದಲಾವಣೆ ಮಾಡತಕ್ಕಂಥಾದ್ದು, ಪ್ರಾಧಿಕಾರಗಳನ್ನು ಬದಲಾವಣೆ ಮಾಡತಕ್ಕಂಥಾದ್ದು, ಅವರ ಹಕ್ಕು ಎಂದು ನಿರ್ಧಾರವಾಗಿದೆ. ಉದಾಹರಣೆಗೆ ಒಂದು ವಿಷಯವನ್ನು ಹೇಳಬಯಸುತ್ತೇನೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಡಾ॥ ಹೆಚ್. ನರಸಿಂಹಯ್ಯನವರು ಇದ್ದರು. ಅವರು ಹೊಸ ಸರಕಾರ ಬಂದ ಕೂಡಲೇ ರಾಜೀನಾಮೆಯನ್ನು ನೀಡಿದರು. ಹಾಗೆಯೇ ಅದಕ್ಕಿಂತ ಹಿಂದೆ ಇದ್ದ ಮಾನ್ಯ ಶ್ರೀ ಜಿ. ನಾರಾಯಣರವರೂ ಕೂಡ ಆಗ ರಾಜೀನಾಮೆ ಕೊಟ್ಟಿದ್ದರು. ಹೀಗೆ ಖಾಲಿ ಇರುವ

ಜಾಗಕ್ಕೆ ಮಾನ್ಯ ಜೆ. ಹೆಚ್. ಪಟೇಲ್‌ರವರು ಮುಖ್ಯಮಂತ್ರಿಯಾದ ಮೇಲೆ ನೇಮಕ ಮಾಡಬೇಕಾಗಿತ್ತು. ಇಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷಗಿರಿಗೆ ರಾಜಕೀಯ ಏನಿದೆ? ಹಾಗಯೇ ಅಧ್ಯಕ್ಷರಿಗಿದ್ದ ಮೂರನೇ ಮಹಡಿಯ ಕಾರ್ಯಾಲಯವನ್ನು ಯಾವ ಕಸದ ಬುಟ್ಟಿಗೆ ಹಾಕಿದ್ದೀರಿ? ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಿಗಿದ್ದ ಕಾರ್ಯಾಲಯವನ್ನು ಒಬ್ಬ ಸಚಿವರಿಗೆ ಕೊಟ್ಟಿದ್ದೀರಿ. ಹಾಗಾದರೆ ಈ ಕಾರ್ಯಾಲಯವು ಯಾವ ಕಸದ ತೊಟ್ಟಿಗೆ ಹೋಗಿದೆ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಅಧ್ಯಕ್ಷರೇ , ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ವಿಚಾರದಲ್ಲಿ ಯಾವ ರಾಜಕೀಯವೂ ಇಲ್ಲ. ಡಾ|| ನರಸಿಂಹಯ್ಯನವರನ್ನು ಮುಂದುವರಿಯುವಂತೆ ಕೇಳಿಕೊಂಡಾಗ ಖಂಡಿತವಾಗಿಯೂ ಆಗುವುದಿಲ್ಲವೆಂದು ಹೇಳಿದರು. ಅವರ ಸ್ಥಳದಲ್ಲಿ ಇನ್ನೊಬ್ಬರನ್ನು ನೇಮಕ ಮಾಡಲು ತೀರ್ಮಾನ ತೆಗೆದುಕೊಂಡಿದ್ದೇವೆ. ಪ್ರಾಧಿಕಾರಕ್ಕೆ ಒಳ್ಳೆಯ ಕಾರ್ಯಾಲಯವನ್ನು ಕೊಡಲು ವ್ಯವಸ್ಥೆ ಮಾಡುತ್ತೇವೆ. ಆ ಬಗ್ಗೆ ಚಿಂತೆ ಬೇಡ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಚಿವೆಯವರು ಮಾಡುವುದಿಲ್ಲವೆಂದು ಹೇಳುವುದಿಲ್ಲ, ನೀವು ಮುಂದೆ ಮಾಡುತ್ತೀರಿ. ನಿಮ್ಮ ಸರಕಾರ ಬಂದು 80 ದಿವಸಗಳು ಮುಗಿದವು. ಕನ್ನಡದ ಬಗ್ಗೆ ಇಲ್ಲಿ ಒಂದು ಮಸೂದೆಯೂ ಬಂತು. ಅದರ ಪ್ರಕಾರ ಕನ್ನಡದ ಸಮಗ್ರ ಅಭಿವೃದ್ಧಿಗೆ ಮಸೂದೆಗಳನ್ನು ಮಾಡಿ ಚರ್ಚೆ ಮಾಡಿ ಅವರಿಗೆ ಸಾಕಷ್ಟು ಹೆಚ್ಚಿನ ಶಕ್ತಿಯನ್ನು ಕೊಟ್ಟಿದ್ದೇವೆ. ಅವರು ಚೆನ್ನಾಗಿ ಆಡಳಿತ ನಡೆಸ ಬೇಕೆಂದು ಹೇಳಿದ್ದೇವೆ. ಆಡಳಿತ ನಡೆಸತಕ್ಕಂಥ ಅಧ್ಯಕ್ಷರಿಗೇ ಇವೊತ್ತು ನೇಮಕವಾಗಿಲ್ಲ. ಅಧ್ಯಕ್ಷರಿಗಿದ್ದ ಕೊಠಡಿ, ಕಾರ್ಯಾಲಯಗಳು ಎಲ್ಲಿಗೆ ಹೋಯಿತೋ? ನಿಮ್ಮ ಮಂತ್ರಿಗಳಿಗೇ ಕಾರ್ಯಾಲಯವಿಲ್ಲದಿರುವಾಗ ಅವರಿಗೆ ಇನ್ನೆಲ್ಲಿಂದ ಕೊಡುತ್ತೀರಿ? ಅಂತೂ ಅವರಿಗೆ ಎಲ್ಲಿಯಾದರೂ ಕಾರ್ಯಾಲಯವನ್ನು ಕೊಟ್ಟುಕೊಳ್ಳಿ, ಅದು ಬೇರೆ ಪ್ರಶ್ನೆ. ಆದರೆ ಇವೊತ್ತು ಆ ಕಾರ್ಯಾಲಯ ಇಲ್ಲ ಎಂಬ ಮಾತನ್ನು ಹೇಳುತ್ತಿದ್ದೇನೆ. ಕನ್ನಡ ಆಡಳಿತ ಭಾಷೆಯ ಬಗ್ಗೆ ಈ ಸರಕಾರ ಏನು ಮಾಡಿದೆ? ಹಿಂದೆ ಕಾಂಗ್ರೆಸ್ ಸರಕಾರದವರು ಇದ್ದಾಗ ಸ್ವಲ್ಪ ಹೆಚ್ಚು ಕಾಳಜಿ ಇತ್ತು. ಅದರೆ ತಮಗೆ ಆ ಬಗ್ಗೆ ಸ್ವಲ್ಪವೂ ಕಾಳಜಿ ಇಲ್ಲವೇ ಎಂದೆನಿಸುತ್ತದೆ. ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗಿನಿಂದ ಈಗ ಮಾನ್ಯ ಪಟೇಲ್‌ರವರು ಮುಖ್ಯಮಂತ್ರಿಯಾಗಿರುವವರೆಗೆ ನೋಡುತ್ತಾ ಇದ್ದೇವೆ, ಕನ್ನಡದ ಬಗ್ಗೆ, ಕನ್ನಡ ಸಂಸ್ಕೃತಿ ಬಗ್ಗೆ, ಕನ್ನಡ ಆಡಳಿತದ ಬಗ್ಗೆ ಕನ್ನಡ ಭಾಷೆಯ ಬಗ್ಗೆ ಸ್ವಲ್ಪವೂ ನಿಮ್ಮ ಚಿಂತನೆಯಿಲ್ಲ. ಈಗ ಹೆಸರಿಗೆ ಕನ್ನಡ ಆಡಳಿತ ಭಾಷೆಯಾಗಿದ್ದರೂ ಹೇಳುವುದಾದರೆ ಅದು ಆತ್ಮವಂಚನೆಯಾಗುತ್ತದೆ. ನಾನು ಅತ್ಯಂತ ನೋವಿನಿಂದ ಈ ಮಾತನ್ನು ಹೇಳುತ್ತಾ ಇದ್ದೇನೆ. ಸರಕಾರದ ಪ್ರಕಟಣೆಗಳು ಇಂಗ್ಲೀಷ್‌ನಲ್ಲಿ! ಸರಕಾರದ ಆದೇಶಗಳು ಇಂಗ್ಲೀಷ್‌ನಲ್ಲಿ, ಕಮಿಟಿಗಳ ಆದೇಶಗಳು ವರದಿಗಳು ಇಂಗ್ಲೀಷ್‌ನಲ್ಲಿ! ಮಂತ್ರಿಗಳ ಆದೇಶಗಳು ಇಂಗ್ಲೀಷ್‌ನಲ್ಲಿ, ವಾರ್ತಾ ಇಲಾಖೆಯ ಪತ್ರಗಳು ಇಂಗ್ಲೀಷ್‌ನಲ್ಲಿ , ಆಡಳಿತವು ಸಂಪೂರ್ಣವಾಗಿ ಕುಸಿದು ಬಿದ್ದಿದೆ; ಕನ್ನಡದಲ್ಲಿ ಒಂದು ಅಕ್ಷರವೂ ಇಲ್ಲ. ಹಾಗೆಯೇ ನಮ್ಮ ಶಾಸನ ಸಭೆಯ ವಿಷಯಸಮಿತಿಯ ವರದಿಗಳು ಇಂಗ್ಲೀಷ್‌ನಲ್ಲಿ ಬರುತ್ತಾ ಇವೆ.

ಶ್ರೀಮತಿ ಪ್ರಮಿಳಾ ನೇಸರ್ಗಿ : ನಾನು ಅಧ್ಯಕ್ಷೆಯಾಗಿದ್ದ ಸಮಿತಿಯ ಒಂಭತ್ತು ವರದಿಗಳನ್ನು ಕೂಡ ಕನ್ನಡದಲ್ಲಿಯೇ ಕೊಟ್ಟಿದ್ದೇನೆ.

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಸದಸ್ಯೆಯವರು ಮಾತೆತ್ತಿದರೆ ನನ್ನನ್ನು ಜಗಳಕ್ಕೆ ಕರೆಯುತ್ತಾರೆ. ನಾನು ತಮಗೆ ಸಾಕಷ್ಟು ವರದಿಗಳನ್ನು ಕೊಡುತ್ತೇನೆ. ಇವುಗಳೆಲ್ಲವೂ ಇಂಗ್ಲೀಷ್‌ನಲ್ಲಿ ಇವೆ. ಜಿಲ್ಲಾಪರಿಷತ್ ದಕ್ಷಿಣ ಕನ್ನಡ ಜಿಲ್ಲೆ ಇದು ಇಂಗ್ಲೀಷ್‌ನಲ್ಲಿದೆ. ದ.ಕ.ಜಿಲ್ಲೆಯ ಲಂಡನ್‌ನಲ್ಲಿದೆಯೇ? ವಿದ್ಯುತ್‌ಚ್ಛಕ್ತಿ ಮಂಡಳಿ. ಇದೂ ಇಂಗ್ಲೀಷ್‌ನಲ್ಲಿಯೇ ಇದೆ.

(ಈ ಹಂತದಲ್ಲಿ ಮಾನ್ಯ ಶ್ರೀ ವಾಟಾಳ್ ನಾಗರಾಜ್‌ರವರು ಇಂಗ್ಲೀಷ್‌ನಲ್ಲಿದ್ದ ವರದಿಗಳನ್ನು ಹರಿದು ಹಾಕಿದರು)

ಶ್ರೀ ಬಿ. ಎಸ್. ಯಡಿಯೂರಪ್ಪ: ಮಾನ್ಯ ವಾಟಾಳ್ ನಾಗರಾಜ್‌ರವರೇ, ದಯಮಾಡಿ ಹರಿಯ ಬೇಡಿ.

ಶ್ರೀ ವಾಟಾಳ್‌ನಾಗರಾಜ್ : ಇಂಗ್ಲೀಷ್‌ನಲ್ಲಿದ್ದರೆ ಹರಿಯ ಬೇಕಾಗುತ್ತದೆ. ನೀವು ಹೇಳಿಬಿಟ್ಟರೆ ನಾನು ಬಿಟ್ಟುಬಿಡುವುದಕ್ಕೆ ಆಗುತ್ತದೆಯೇ ? ತಾವು ವಿರೋಧಪಕ್ಷದ ನಾಯಕರು ಇದು ಯಾವ ಭಾಷೆಯಲ್ಲಿದೆ? ಯಾವ ಭಾಷೆಯಲ್ಲಿರಬೇಕೆಂದು ಹೇಳಿ? ಇದು ನಮಗೆ ಬೇಕೆ? ಇದು ನಮ್ಮ ಹಣೆಬರಹ. ನಾವು ಕನ್ನಡವನ್ನು ರಾಜ್ಯದ ಆಡಳಿತ ಭಾಷೆಎಂದು ಮಾಡಿಕೊಂಡಿದ್ದೇವೆ. ಇದು ಕೇವಲ ಮೊಸಕ್ಕೆ ಷೋಕಿಗೆ, ಮೋಜಿಗೆ ಆಡಳಿತ ಭಾಷೆ ಎಂದು ಮಾಡಿಕೊಂಡಿದ್ದೇವೆ. ನಾಲ್ಕು ದ್ವಾರದಲ್ಲಿ ಕನ್ನಡವೇ ಸತ್ಯ, ಕನ್ನಡವೇ ನಿತ್ಯ ಎಂದು ಬರೆಸಿಬಿಟ್ಟಿದ್ದರು. ಮಳೆ ಬಂದು , ನೆನೆದು ಒದ್ದೆಯಾಗಿ ಕೆಳಗೆ ಬಿದ್ದು ಹೋಯಿತು. ಕನ್ನಡವೂ ಕೂಡ ಆಡಳಿತ ಭಾಷೆಯಾಗಿ ಇವರ ಕಾಲದಲ್ಲಿ ನೆಲಕಚ್ಚಿತು. ಕನ್ನಡದಲ್ಲಿ ಆಡಳಿತ ಎಲ್ಲಿದೆ ಎಂದು ನೀವೇ ಹೇಳಿ. ಹೀಗೆ ಮಾಡಿ ಕನ್ನಡ ನಾಡಿನ ಜನತೆಗೆ ಒಂದು ರೀತಿಯ ತೆರೆಮರೆಯ ಮೋಸ ಮತ್ತು ಭಾಷೆಗೆ ಮಾಡಿರತಕ್ಕಂಥ ಅಪಚಾರವೂ ಆಗಿದೆ. ಹೀಗೆ ಇದಾಗ ಬಾರದು.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಜೆ.ಹೆಚ್. ಪಟೇಲ್‌ರವರು ಲೋಕಸಭೆಗೆ ಮೊದಲಬಾರಿಗೆ ಹೋದಾಗ ಮೊದಲಭಾರಿಗೆ ಅಲ್ಲಿ ಕನ್ನಡದಲ್ಲಿ ಮಾತನಾಡಿದವರು. ಅದನ್ನು ಓದಿ ನಾವುಗಳು ಹುಡುಗರಾಗಿದ್ದಾಗ ಆನಂದಪಟ್ಟಿದ್ದೆವು. ಅಂಥವರು ಮುಖ್ಯಮಂತ್ರಿಯಾಗಿದ್ದಾಗಲೂ ಕನ್ನಡಕ್ಕೆ ಈ ದುಸ್ಥಿತಿ ಬಂದಿದೆ ಎಂದು ಹೇಳಿ ಹರಿದು ಹಾಕಿ ರಾಜೀನಾಮೆ ಕೊಟ್ಟು ಹೋಗಿ ಎಂದು ಹೇಳುವುದು ಸರಿಯಲ್ಲವೇ?

(ಗೊಂದಲ)

ಶ್ರೀ ಸಿ. ಭೈರೇಗೌಡ: ನಿಮ್ಮ ಬಾಯಲ್ಲಿ ಆ ಮಾತು ಬರಲಿ ಎಂದು ಕಾಯುತ್ತಾ ಇದ್ದೇವೆ....

ಶ್ರೀ ಚಂದ್ರ ಕಾಂತ ಜಿ.ಬೆಲ್ಲದ್ : ಮಾನ್ಯ ಉಪಮುಖ್ಯ ಮಾಂತ್ರಿಯವರು ಕೂಡ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದವರು. ಮುಖ್ಯಮಂತ್ರಿಗಳು ಕೂಡ ಕನ್ನಡದ ಅಭಿಮಾನಿಗಳಾಗಿದ್ದವರು. ಅಂಥವರುಗಳು ಇರುವಾಗಲೂ ಕನ್ನಡದ ಪರಿಸ್ಥಿತಿಯು ಹೀಗೆ ಆಗುವಂತಾಗಿದೆ.

ಶ್ರೀ ಸಿದ್ದರಾಮಯ್ಯ : ನನ್ನನ್ನೂ ಕೂಡ ಕನ್ನಡ ಕಾವಲು ಸಮಿತಿಯ ಅಧ್ಯಕ್ಷನನ್ನಾಗಿ ಮಾಡಿದ್ದರು. ನಾನು ಒಂದು ವರ್ಷ ಕೆಲಸ ಮಾಡಿದ್ದೇನೆ. ಕನ್ನಡ ಪೂರ್ಣವಾಗಿ ಆಡಳಿತಭಾಷೆಯಾಗಬೇಕೆಂದು ಹೇಳುತ್ತಿರುವುದು ನಿನ್ನೆ ಮೊನ್ನೆಯ ಮಾತಲ್ಲ. ಮಾನ್ಯ ವಾಟಾಳ್‌ರವರು ಹೇಳುವುದರಲ್ಲಿ ಸತ್ಯಾಂಶವಿದೆ. ಇಲ್ಲಿ ಈ ಕುರಿತು ಮಾನಸಿತವಾಗಿ ಸಿದ್ಧತೆಗಳು ಇನ್ನೂ ಆಗುತ್ತಾ ಇಲ್ಲ. ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಸಾಕಷ್ಟು ಆಗಿದೆ. ಕನ್ನಡವನ್ನು ಸಂಪೂರ್ಣವಾಗಿ ಮಾಡಬೇಕೆಂದು ಅನೇಕ ಸುತ್ತೋಲೆಗಳು 1974 ರಿಂದ ಇವೊತ್ತಿನವರೆಗೆ ಹೋಗಿವೆ. ಆದೆಷ್ಟು ಸುತ್ತೋಲೆಗಳು ಹೋಗಿವೆ ಎಂದು ಹೇಳುವುದಕ್ಕೆ ಬರುವುದಿಲ್ಲ. ನನ್ನ ಕಾಲದಲ್ಲಿ ಕನ್ನಡದಲ್ಲಿಯೇ ಎಲ್ಲಾ ವ್ಯವಹಾರಗಳು ಆಗಬೇಕು, ಕನ್ನಡ ಟೈಪ್‌ರೈಟರ್‌ಗಳನ್ನು ತೆಗೆದುಕೊಳ್ಳಬೇಕು ಎಂಬಿತ್ಯಾದಿಯಾಗಿ ಆಯಿತು. ಈಗಲೂ ಕೂಡ ಎಲ್ಲಾ ಮಟ್ಟದಲ್ಲಿ ಮಾಡಬೇಕೆಂದು ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಂಡಿದ್ದಾರೆ. ಕನ್ನಡವೇ ಆಡಳಿತಭಾಷೆಯಾಗಬೇಕೆಂಬ ಬಗ್ಗೆ ಎರಡನೇ ವಿಚಾರವೇ ಇಲ್ಲ. ಕರ್ನಾಟಕದಲ್ಲಿ ಕನ್ನಡ ನಾಡಿನಲ್ಲಿ ಕನ್ನಡವೇ ಸಾರ್ವಭೌಮ. ಇದನ್ನು ಜಾರಿಗೆ ತರತಕ್ಕಂಥದ್ದರಲ್ಲಿ ರಾಜ್ಯಮಟ್ಟದಲ್ಲಿ ಸೆಕ್ರೇಟರಿಯೇಟ್‌ನಲ್ಲಿ ಸ್ವಲ್ಪ ಬದಲಾವಣೆಗಳು ಆಗಬೇಕು. ಆ ಪ್ರಯತ್ನಗಳನ್ನು ಮಾಡುತ್ತಾ ಇದ್ದೇವೆ. ಅದು ನೆರವೇರಲು ಸ್ವಲ್ಪ ಕಾಲಾವಕಾಶ ಆಗಬಹುದು. ಏಕೆಂದರೆ ಎಲ್ಲಾ ಆಗಿಬಿಟ್ಟಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಕನ್ನಡ ಆಡಳಿತ ಭಾಷೆಯು ಸಂಪೂರ್ಣವಾಗಿ ಆಗಿಬಿಟ್ಟಿದೆ ಎಂದು ಹೇಳಿದರೂ ಅದು ಸತ್ಯವಾದ ಮಾತು ಆಗುವುದಿಲ್ಲ. ಆದರೆ ನಾವೆಲ್ಲರೂ ಕಟ್ಟುನಿಟ್ಟಾಗಿ ಕನ್ನಡವನ್ನು ಬಳಸಬೇಕು. ನಾನು ಎಲ್ಲಾ ಕಡತಗಳಲ್ಲಿ ಕನ್ನಡವನ್ನೇ ಬಳಸುತ್ತೇನೆ. ಯಾವುದೇ ಫೈಲ್‌ನಲ್ಲಿ ಯಾಗಲೀ ಕನ್ನಡ ಬಿಟ್ಟು ಬೇರೆ ಭಾಷೆಯನ್ನು ನಾನು ಬರೆಯುವುದೇ ಇಲ್ಲ. ಕರ್ನಾಟಕಕ್ಕೆ ಸೀಮಿತವಾಗಿರುವ ವ್ಯವಹಾರಗಳನ್ನು ಕನ್ನಡದಲ್ಲಿಯೇ ಮಾಡುತ್ತೇವೆ. ಬೇರೆ ರಾಜ್ಯಗಳಿಗೆ, ಕೇಂದ್ರಕ್ಕೆ ವ್ಯವಹರಿಸುವಾಗ ಮಾತ್ರ ಇಂಗ್ಲೀಷ್‌ನ ಬಳಕೆಯಾಗುತ್ತಿರಬಹುದು. ಆದ್ದರಿಂದ ಈ ಕುರಿತಾದ ಸುತ್ತೋಲೆಗಳು ಬೇಕಾದಷ್ಟು ಬಂದಿವೆ. ಆದರೆ ನಮ್ಮ ಅಧಿಕಾರಿಗಳಿಗೆ ಇನ್ನೂ ಮಾನಸಿಕ ಸಿದ್ದತೆಗಳು ಆಗಬೇಕಾಗಿದ್ದು ಅದನ್ನು ನಾವು ಮಾಡುತ್ತೇವೆಂದು ಹೇಳ ಬಯಸುತ್ತೇನೆ.

ಶ್ರೀ ಎಂ.ಶ್ರೀನಿವಾಸ್ : ಕರ್ನಾಟಕದಲ್ಲಿನ ಐ ಎ ಎಸ್ ಅಧಿಕಾರಿಗಳನ್ನು ಮಾತ್ರ ಹಾಕಿಕೊಳ್ಳಲು ಕ್ರಮ ತೆಗೆದುಕೊಳ್ಳಬೇಕು. ಹೊರರಾಜ್ಯಗಳಿಂದ ಬಂದ ಐ ಎ ಎಸ್ ಅಧಿಕಾರಿಗಳಿಗೆ ಕನ್ನಡದ ಬಗ್ಗೆ ಅಷ್ಟು ಕಾಳಜಿ ಇರುವುದಿಲ್ಲ. ಅವರಿಗೆ ಕನ್ನಡ ಬಗ್ಗೆ ಪ್ರೀತಿ ಇರುವುದಿಲ್ಲ.

ಶ್ರೀ ಸಿದ್ಧರಾಮಯ್ಯ: ಐ ಎ ಎಸ್ ಅನ್ನುವುದು ಆಲ್ ಇಂಡಿಯಾ ಸರ್ವೀಸ್. ಐ ಎ ಎಸ್ ನವರೂ ಕೂಡ ಕನ್ನಡ ಕಲಿಯಬೇಕೆಂದು ಸುತ್ತೋಲೆ ಕೊಟ್ಟಿದ್ದುದು ಇದೆ. ಐ ಎ ಎಸ್‌ನವರು ಯಾವುದೇ ರಾಜ್ಯದವರು ಇದ್ದರೂ ಕೂಡ ಅವರುಗಳು ಆಯಾಯ ಪ್ರಾಂತೀಯ ಭಾಷೆಗಳನ್ನು ಕಲಿಯಬೇಕೆಂದಿದೆ. ಕರ್ನಾಟಕದಲ್ಲೂ ಯಾವುದೇ ಪ್ರಾಂತ್ಯದಿಂದ ಅವರು ಬಂದಿದ್ದರೂ ಕನ್ನಡ ಕಲಿತು ಕನ್ನಡದಲ್ಲೇ ವ್ಯವಹರಿಸಬೇಕು, ಇದರಲ್ಲಿ ಯಾವುದೇ ರಾಜಿ ಇಲ್ಲ.

ಶ್ರೀ ಎಸ್ ಎಸ್ ಪಾಟೀಲ್: ಉಪಸಭಾಧ್ಯಕ್ಷರೇ, ದುರ್ದೈವದಿಂದ ನಾನು ಹೇಳುತ್ತಿದ್ದೇನೆ ಬೇರೆಯವರಿಗೆ ನಾವು ಹೇಳುವದು ಬೇಡ, ಶಾಸಕರೆಲ್ಲರೂ ಕನ್ನಡದಲ್ಲಿ ಇವತ್ತು ವ್ಯವಹರಿಸಬೇಕು ಬಹಳ ಶಾಸಕರು ಇಂಗ್ಲಿಷಿನಲ್ಲಿ ಕಳುಹಿಸುತ್ತಾರೆ, ನಾನು ಹಿಂದಕ್ಕೆ ಕಳುಹಿಸಿದ್ದೇನೆ, ಆದರೂ ಶಾಸಕರು ಕನ್ನಡದಲ್ಲಿ ಕಳುಹಿಸುತ್ತಿಲ್ಲ.

ಶ್ರೀಮತಿ ಪ್ರಮಿಳಾ ನೇಸರ್ಗಿ: ಒಪ್ಪುತ್ತೇನೆ. ಆದರೆ ನಮ್ಮ ಫರ್ನಾಂಡಿಸ್‌ರವರು ಎಂಎಲ್‌ಎ ಆದಾಗಿನಿಂದ ಕೇಳುತ್ತಿದ್ದಾರೆ ಕನ್ನಡ ಕಲಿಯುವುದಕ್ಕೆ ನನಗೊಬ್ಬ ಮಾಸ್ಟರು ಕೊಡಿ ಎಂದು. ನಾನು ಸಚಿವರನ್ನು ಕೇಳುತ್ತೇನೆ, ಶಾಸಕರಿಗೆ ಕನ್ನಡ ಕಲಿಸುವುದಕ್ಕೆ ಇಲ್ಲಿ ಒಬ್ಬ ಮಾಸ್ಟರನ್ನು ಇಡುತ್ತಿರೋ ?

ಶ್ರೀ ಎಸ್. ಎಸ್ ಪಾಟೀಲ್ : ಅಮ್ಮಾ ತಾವು ಮೊದಲು ಕನ್ನಡದಲ್ಲಿ ಸಂಪೂರ್ಣ ಮಾಡಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಒಂದು ನಿಮಿಷ, ಎಲ್ಲಾ ಹಂತದಲ್ಲಿ ಕನ್ನಡ ಆಡಳಿತಭಾಷೆಯಾಗಬೇಕೆಂದು ಈಗಾಗಲೇ ಸಾಕಷ್ಟು ಸುತ್ತೋಲೆಗಳನ್ನು ಕಳುಹಿಸಿಯಾಗಿದೆ. ಯಾರಿಗೆ ಕನ್ನಡ ಅಭ್ಯಾಸ ಇಲ್ಲ ಅಂಥವರಿಗಾಗಿ ಕ್ಲಾಸಸ್‌ನ್ನು ಜಿಲ್ಲಾ ಮಟ್ಟದಲ್ಲಿ ನಮ್ಮ ಇಲಾಖೆ ಮೂಲಕ ತರಬೇತಿ ಕೊಡುವ ವ್ಯವಸ್ಥೆ ಮಾಡಿದ್ದೇವೆ. ಸಾಧ್ಯವಾದಷ್ಟು ಮಟ್ಟಿಗೆ ತಾಲ್ಲೂಕು ಜಿಲ್ಲಾಮಟ್ಟಗಳಿಂದ ಎಲ್ಲಾ ಇಂಗ್ಲಿಷ್ ಬೆರಳಚ್ಚು ಯಂತ್ರಗಳನ್ನು ವಾಪಸ್ ಪಡೆದಿದ್ದೇವೆ. ಕೇವಲ ದೆಹಲಿಗೆ ಬರೆಯುವಾಗ ಮಾತ್ರ ಇಂಗ್ಲಿಷಿನಲ್ಲಿ ಬರೆಯಬೇಕೆಂದು ಸುತ್ತೋಲೆ ಕೊಟ್ಟಾಗಿದೆ. ಮಾನಸಿಕವಾಗಿ ಕೆಲವು ಅಧಿಕಾರಿಗಳಿಗೆ ಕನ್ನಡ ಬಳಸುವ ಬಗ್ಗೆ ಪರಿವರ್ತನೆಯಾಗಬೇಕಾಗಿದೆ, ಅದು ಇಲ್ಲಿ ಬೆಂಗಳೂರಿನಲ್ಲಿ ವಿಧಾನಸಭೆಯಲ್ಲಿ ಆಗಬೇಕಾಗಿದೆ. ವಾಟಾಳ್‌ರು ಹೇಳಿದಂತೆ ಮಂಗಳೂರಿನದ್ದು ಕನ್ನಡದಲ್ಲಿ ಏಕೆ ಕೊಡಲಿಲ್ಲ, ಇಂಗ್ಲಿಷಿನಲ್ಲಿ ಏಕೆ ಕೊಡಬೇಕಾಗಿತ್ತು? ತಪ್ಪದು, ನಾವು ಒಪ್ಪಿಕೊಳ್ಳುತ್ತೇವೆ. ಜಿಲ್ಲಾಮಟ್ಟದಿಂದ ಒಂದೊ ಎರಡೋ ಇಟ್ಟು ಉಳಿದ ಇಂಗ್ಲಿಷ್ ಬೆರಳಚ್ಚುಯಂತ್ರಗಳನ್ನು ವಿತ್‌ಡ್ರಾ ಮಾಡಿ ಬಿಟ್ಟಿದ್ದೇವೆ ಹಾಗೂ ಬೇರೆ ಇಲಾಖೆಗಳ ನೌಕರರಿಗೆ ಕಡ್ಡಾಯವಾಗಿ ಕನ್ನಡ ಕಲಿಯಬೇಕು ಎಂದು ನಮ್ಮ ಇಲಾಖೆಯಿಂದ ತರಬೇತಿ ಸಹ ಕೊಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಗಮನಕ್ಕೆ ತರುತ್ತಿದ್ದೇನೆ, ಸಾರ್ವಜನಿಕ ಉದ್ದಿಮೆಗಳ ಸಮಿತಿ.

ಶ್ರೀ ಸಿ . ಬೈರೇಗೌಡ : ಸಾರ್ವಜನಿಕ ಉದ್ದಿಮೆಗಳ ಸಮಿತಿ ವರದಿ ಈ ಸದನದ ವರದಿಯಾಗುತ್ತದೆ ಅಧ್ಯಕ್ಷರ ವ್ಯಾಪ್ತಿಗಳು ಒಳಪಡುತ್ತದೆ. ದಯವಿಟ್ಟು ಬೇರೆ ಸಂಧರ್ಭದಲ್ಲಿ ಮಾತಾಡುವುದು ವಾಸಿ .

ಶ್ರೀ ವಾಟಾಳ್ ನಾಗರಾಜ್ : ಮೂಲತಃ ನಮ್ಮಲ್ಲಿ ಬದಲಾವಣೆಯಾಗಬೇಕು ಮತ್ತು ನಮ್ಮ ಆತ್ಮಶಕ್ತಿ ಬರಬೇಕು, ಆತ್ಮಶಕ್ತಿಲ್ಲದಿದ್ದರೆ ಏನೂ ಆಗುವುದಿಲ್ಲ. ಸಿದ್ದರಾಮಯ್ಯನವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಮೊಯ್ಲಿಯವರೇ ಆಗಲೆ ನಾನು ಹೇಳಿದೆ, ನಿಮ್ಮ ಸರ್ಕಾರಗಳು ಕನ್ನಡ ಸಂಸ್ಕೃತಿ ಇಲಾಖೆ ಸಚಿವೆರಾದ ಲೀಲಾದೇವಿ ಪ್ರಸಾದರು ಕನ್ನಡ ಸಂಸ್ಕೃತಿಯ ವಂಶಿಕರು, ಅವರೇನು ಇತಿಹಾಸ ಇಲ್ಲದವರಲ್ಲ. ಕರ್ನಾಟಕ ಏಕೀಕರಣಕ್ಕಾಗಿ ಹೋರಾಟ ಮಾಡಿದ ಪಂಡಿತ ಜಿ. ಶಿವಮೂರ್ತಿ ಶಾಸ್ತ್ರಿಯವರ ಮನೆತನದವರು, ಅವರು ಇನ್ನು ನಿಧಾನ ಮಾಡುವುದಕ್ಕಾಗುವುದಿಲ್ಲ. ಅವರಿಗೆ ಹೇಳುತ್ತೇನೆ.ಬೇಕಾದವರು ಒಳ್ಳೆಯ ಸ್ಥಳದಲ್ಲಿ ಇರಬೇಕನ್ನುವ ದೃಷ್ಠಿಯಿಂದ ದಕ್ಷ ಅಧಿಕಾರಿಗಳನ್ನು, ಈಗ ಅವಿಶ್ವಾಸದ ಮೇಲೆ ನಿಮ್ಮನ್ನು ಮನೆಗೆ ಕಳುಹಿಸಬೇಕೆಂದು ಮಾಡಿದ್ದೇವೆ, ಅಥವಾ ಉಳಿದರೆ ನೀವು ನಾಳೆ ರಾಜೀನಾಮೆ ಕೊಟ್ಟು ನನ್ನ ಕೈಲಿ ಆಗುವುದಿಲ್ಲ ಎಂದು ಹೋಗಿ ಇಲ್ಲ ಕೆಲವು ಷರತ್ತು ಹಾಕಿ , ಇಂತಿಂಥ ಕಾರಣದ ಮೇಲೆ ಇಷ್ಟು ದಿವಸದಲ್ಲಿ ಕನ್ನಡ ಆಡಳಿತ ಭಾಷೆಯಾಗಲಿಲ್ಲವೆಂದರೆ ನಾನು ರಾಜೀನಾಮೆ ಕೊಡುತ್ತೇನೆಂದು ಹೇಳಿ.....ಇಲ್ಲದ್ದಿರೆ ಏನಾಗುತ್ತದೆ ಅಂದರೆ ತಾವು ಸಚಿವರಾಗಿದ್ದು ಮೊದಲನೆಯದು ನಿಮ್ಮ ಮನೆತನಕ್ಕೆ ಆಮೇಲೆ ರಾಜ್ಯಕ್ಕೆ ಅಪಚಾರವಾಗುತ್ತದೆಂದು ತಮಗೆ ನೇರವಾಗಿ ಹೇಳುತ್ತಿದ್ದೇನೆ.

ಶ್ರೀ ಲೀಲಾದೇವಿ ಆರ್ ಪ್ರಸಾದ್ : ನನ್ನ ಮನೆತನಕ್ಕೂ ಸರ್ಕಾರಕ್ಕೂ ಅಪಚಾರ ಆಗುವಂತಹ ಕೆಲಸ ಯಾವತ್ತೂ ನಾನು ಮಾಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇಷ್ಟೆ ಅಲ್ಲ, ಜಿಲ್ಲಾಧಿಕಾರಿಗಳ ಕಛೇರಿ ಇಂಗ್ಲೀಷ್, ತಾಲ್ಲೂಕು ಕಛೇರಿ ಇಂಗ್ಲೀಷ್ , ಭಾಷೆಗಾಗಿ ನಾನು ಯಾರನ್ನೋ ದ್ವೇಷ ಮಾಡುತ್ತೇನೆ ಎಂದು ಅಲ್ಲ, ನಮ್ಮ ಸರ್ಕಾದರ ನೀತಿ, ನಿಯಮ. ನಾನು ಇನ್ನು ಮುಂದಕ್ಕೆ ಹೋಗುತ್ತೇನೆ, ಸರೋಜಿನಿ ಮಹಿಷಿ ವರದಿ ಏನಾಯಿತು ಸ್ವಾಮಿ ? ಒಪ್ಪಿದ್ದೀರಾ ಏನು ಮಾಡಿದ್ದೀರಿ ? ಸಂಪೂರ್ಣವಾಗಿ ಸರೋಜಿನಿ ಮಹಿಷಿ ವರದಿಯನ್ನು ಇವರು ಜಾರಿಗೆ ಕೊಟ್ಟಿಲ್ಲ, ಎಲ್ಲೆಲ್ಲಿ ಬೇಕೋ ಅಲ್ಲಿ ಹರಕು ಮುರುಕು ಅಲ್ಲಲ್ಲಿ ಸ್ವಲ್ಪ ಮಾಡಿದ್ದು ಬಿಟ್ಟರೆ ಆ ವರದಿಗೆ ಎಷ್ಟು ಶಕ್ತಿ ಕೊಡಬೇಕಾಗಿತ್ತು ಆ ಶಕ್ತಿ ಇವರು ಕೊಡದೆ ವರದಿಯನ್ನು ಮೂಲೆಗುಂಪು ಮಾಡಿದ್ದಾರೆಂದ ಸ್ಪಷ್ಟಪಡಿಸುತ್ತೇನೆ. ಆಮೇಲೆ ಕನ್ನಡ ಚಿತ್ರರಂಗ ಬಗ್ಗೆ ಹೊಸ ಸರ್ಕಾರ ಬಂದ ಮೇಲೆ ಗುಣಮಟ್ಟ ಇರುವ ಚಿತ್ರಗಳಿಗೆ ಮಾತ್ರ ಕೊಡುತ್ತೇವೆ

ಮಿಕ್ಕವಕ್ಕೆ ಕೊಡುವುದಿಲ್ಲವೆಂದು ನಮ್ಮ ಸ್ನೇಹಿತರೂ ಹಿರಿಯ ಸಚಿವರಾದ ನಾಣಯ್ಯನವರು ಘೋಷಿಸಿದ್ದಾರೆ. ಕನ್ನಡ ಚಿತ್ರರಂಗದ ಬೆಳವಣಗೆಗಾಗಿ ಹಿಂದೆ ಹಣಕಾಸು ಸಚಿವರಾಗಿದ್ದ ಶ್ರೀ ರಾಮಕೃಷ್ಣ ಹೆಗಡೆಯವರು ಆಗ ವೀರೇಂದ್ರಪಾಟೀಲರು ಮುಖ್ಯಮಂತ್ರಿಯಾಗಿದ್ದರು, ತಮಿಳುನಾಡು, ಆಂಧ್ರ ಬೇರೆ ಕಡೆಗಳಲ್ಲಿ ಕನ್ನಡ ಚಿತ್ರ ತೆಗೆಯುತ್ತಿದ್ದಾರೆ ಅವರಿಗೆ ಸಹಾಯಧನ ಕೊಡುವ ಮೂಲಕ ಅವರನ್ನು ಕರ್ನಾಟಕಕ್ಕೆ ತಂದು ಇಲ್ಲಿ ಅವರು ನೆಲೆಯೂರಿಸಬೇಕೆಂದು ಮಾಡಿದ ಒಂದು ಪರಮ ಪವಿತ್ರ ಯೋಜನೆ. ಈ ಯೋಜನೆಯನ್ನು ಸಾರಾಸಗಟು ತೆಗೆಯುತ್ತೇವೆಂದು, ಗುಣಮಟ್ಟ ನಿರ್ಧಾರ ಮಾಡುವವರು ಯಾರು ?

ಶ್ರೀ ಎಂ.ಸಿ. ನಾಣಯ್ಯ : ಮಧ್ಯದಲ್ಲೇ ಒಂದು ಸ್ಪಷ್ಟೀಕರಣ ಕೊಡುತ್ತೇನೆ, ಉಪಾಧ್ಯಕ್ಷರೇ, ಎರಡನೇ ಲೈನ್ ಇರುವವರೆಲ್ಲಾ ಫಸ್ಟ್ ಲೈನ್‌ಗೆ ಬಂದರೆ ಮಾತುಕತೆ ನಡೆಸಬಹುದು, ಬೇಗ ಬಂದುಬಿಡಿ. ಈಗ ಮಾನ್ಯ ವಾಟಾಳರು ಎತ್ತಿರುವ ವಿಚಾರದಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕನ್ನಡ ಚಲನಚಿತ್ರವನ್ನು ಇನ್ನೂ ಎತ್ತರಕ್ಕೆ ತೆಗೆದುಕೊಂಡುಹೋಗಬೇಕೆಂದು ಸಂಪೂರ್ಣವಾಗಿ ಮನರಂಜನತೆರಿಗೆ ವಿನಾಯಿತಿ ಕೊಟ್ಟಿತು. ಇದೇ ರಾಷ್ಟ್ರದಲ್ಲಿ ಯಾವುದೇ ಸರ್ಕಾರ ಕೊಟ್ಟಿಲ್ಲ ಅದನ್ನು ಪ್ರಥಮವಾಗಿ ಮಾಡಿದ್ದುದು ಕರ್ನಾಟಕ ಸರ್ಕಾರ. ಇದು ಇಡೀ ಸದನದ ಒಟ್ಟಾಭಿಪ್ರಾಯ. ಕನ್ನಡ ಚಲನ ಚಿತ್ರಗಳನ್ನು ಎತ್ತರಕ್ಕೆ ಬೆಳೆಸಬೇಕು. ಆದರೆ ಹಿಂಸೆ ಕ್ರೌರ್ಯ ಅಶ್ಲೀಲತೆ ನಗ್ನತೆ ಇಂತಹ ಚಿತ್ರಗಳಿಗೆ ಸರಕಾರಗ ಮುಖಾಂತರ ಪ್ರೋತ್ಸಾಹ ಕೊಡುವುದು ಸರಿಯಲ್ಲ. ಆದ್ದರಿಂದ ನಾವು ಸಾರಾಸಗಟಾಗಿ ಎಲ್ಲಾ ಚಿತ್ರಗಳಿಗೂ ಕೊಡುವುದಿಲ್ಲವೆಂದು ಹೇಳಿಲ್ಲ. ಹಿಂಸೆಯನ್ನೇ ನಗ್ನತೆಯನ್ನೇ ಕ್ರೌರ್ಯವನ್ನೇ ಬಹಳ ಪ್ರತಿಬಿಂಬಿಸಲಿಕ್ಕೆ ಇರತಕ್ಕಂತಹ ಚಿತ್ರಗಳಿಗೆ ಪ್ರೋತ್ಸಾಹ ಕೊಡಬಾರದೆಂಬ ಹಿನ್ನೆಲೆಯಲ್ಲಿ ಅದು ಸಮಿತಿಯ ಮುಂದೆ ಬಂದು ಅವರು ವರದಿಯನ್ನು ತಂದಾದ ಮೇಲೆ ಈ ಕಾರ್ಯಕ್ರಮ. ಸಾರಾಸಗಟಾಗಿ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ನನಗನ್ನಿಸುತ್ತದೆ. ಇದನ್ನು ನೋಡುವ ಸಮಿತಿ ಯಾರು ? ಇವರಿಗೆ ಬೇಕಾದವರ 4 ಜನರನ್ನು ಸಮಿತಿಯ ಸದಸ್ಯರನ್ನಾಗಿ ಮಾಡಿ ಆ ಸಮಿತಿಯವರು ನಾಳೆ ನೀವು ಸಹಾಯದನ ಕೊಡುವುದಕ್ಕೆ ನಿರ್ಧಾರ ಮಾಡಿ ಎಂದು ಹೇಳಿದರೆ ಕನ್ನಡ ಚಿತ್ರ ತೆಗೆದವನು ಆ ಸಮಿತಿಯ ಸದಸ್ಯರ ಮನೆ ಮುಂದೆ ಡಬ್ಬ ಹೊತ್ತುಕೊಂಡು ಅಲ್ಲಿ ಕ್ಯಾಮರಾ ಇಟ್ಟುಕೊಂಡು ಚಿತ್ರವನ್ನು ಅವರಿಗೆ ತೋರಿಸಬೇಕೇ ; ಇದು ಒಳ್ಳೆಯ ನೀತಿ ಇಲ್ಲ. ಸರಕಾರ ಕೂಡಲೇ ವಿಚಾರ ಮಾಡಬೇಕು. ಗುಣಮಟ್ಟ ಬೇಡವೆಂದು ಹೇಳುವುದಿಲ್ಲ ಇದನ್ನು ನಿರ್ಧಾರ ಮಾಡುವವರು ಯಾರು? ನಾವು ಅದನ್ನು ಹೇಳಬೇಕು. ಹೇಳೋಣ. ಗುಣಮಟ್ಟವನ್ನು ಜನರೇ ತೀರ್ಮಾನ ಮಾಡುತ್ತಾರೆ. ಒಂದು ಚಿತ್ರ ನೋಡಬೇಕಾದರೆ ಅವರು ಎಲ್ಲ ವಿಚಾರ ಮಾಡುತ್ತಾರೆ. ಪುಟ್ಟಣ್ಣ ಕಣಗಾಲ್ ಅವರ ಚಿತ್ರ ವಿಶ್ವ ಮಾರುಕಟ್ಟೆಗೆ ಹೋಯಿತು ಅದು ತಮಗೂ ಗೊತ್ತಿರಬಹುದು. ಆ ಪ್ರಶ್ನೆ ಬೇರೆ. ಆದರೆ ನಾವು ಸಂಪೂರ್ಣವಾಗಿ ಸಹಾಯಧನ ಕೊಡುತ್ತೇವೆಂದು ಚಿತ್ರ ತೆಗೆಯುವುದಕ್ಕೆ ಕೈಹಾಕುತ್ತೇವೆ, ಆಗ ನಮ್ಮಲ್ಲಿ ಹೆಚ್ಚಿನ ವ್ಯವಸ್ಥೆಯಾಗುತ್ತದೆ ಮಾರುಕಟ್ಟೆ ಜಾಸ್ತಿಯಾಗುತ್ತದೆ ಕನ್ನಡ ಚಿತ್ರೋದ್ಯಮ ಜಾಸ್ತಿಯಾಗುತ್ತದೆ ಅದು ಬೆಳೆಯುತ್ತದೆ, ಆ ದೃಷ್ಟಿಯಿಂದ ತಾವು ಪ್ರಾಮಾಣಿಕವಾಗಿ

ಚಿಂತನೆ ಮಾಡಬೇಕು. ನಿಮ್ಮ ನೀತಿ ಸರಿಯಾದುದ್ದಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಕಂಠೀರವ ಸ್ಟುಡಿಯೋವನ್ನು ಮಾರಬೇಕೆಂದು ಒಂದು ಕಡೆ ಸರಕಾರದ ನೀತಿ ಇದೆ, ಮತ್ತೊಂದು ಕಡೆ ಮಕ್ಕಳ ಚಲನ ಚಿತ್ರ ಸಂಸ್ಥೆಗೆ 10 ಎಕರೆ ಕೊಡಬೇಕೆಂದು ನೀತಿ ಇದೆ. ನನಗನ್ನಿಸುತ್ತದೆ 19 ಎಕರೆ ಪ್ರದೇಶದಲ್ಲಿರತಕ್ಕಂತಹ ಕಂಠೀರವ ಸ್ಟುಡಿಯೋ ಅದಕ್ಕೆ ಈ ನಾಡಿನ ಹಿರಿಯ ಕಲಾವಿದ ಜಿ.ಹೆಚ್. ವೀರಣ್ಣನವರು, ಕರಿಬಸವಯ್ಯನವರು ಎಲ್ಲರೂ ಸೇರಿ ಕಟ್ಟಿದಂತಹ ಸಂಸ್ಥೆಯನ್ನು ಮಾರಲೂ ಬರದು. ಅದನ್ನು ಮಕ್ಕಳ ಚಲನ ಚಿತ್ರ ಸಂಸ್ಥೆಗೂ ಕೊಡಬಾರದು. ಮಕ್ಕಳ ಚಿತ್ರ ಸಂಸ್ಥೆಗೆ ಬೇರೆ ಕಡೆ ಜಾಗ ಕೊಡಿ. ಚಿತ್ರ ನಗರಿ ತೆಗೆಯುತ್ತಿದ್ದೇವೆಲ್ಲಾ ಅಲ್ಲಿ 250 ಎಕರೆ ಜಾಗ ಇದೆ ಅಲ್ಲಿ ಇವರಿಗೆ ಕೊಡಿ. ಆಂಧ್ರಕ್ಕೆ ಹೋಗುತ್ತದೆಂದು ಬೊಬ್ಬೆಯಾಗುತ್ತಿದೆ ಅದನ್ನು ತಡೆಹಿಡಿಯಿರಿ. ಕರ್ನಾಟಕ ಏಕೀಕರಣವಾಗಿ ಈ ನವೆಂಬರಿಗೆ 40 ವರ್ಷಗಳಾಗುತ್ತವೆ. ಕರ್ನಾಟಕ ಏಕೀಕರಣಕ್ಕೆ ಒಂದು ಇತಿಹಾಸ ಒಂದು ಹಿನ್ನೆಲೆ ಇದೆ. ಅದು ತಮಗೂ ಗೊತ್ತಿರಬಹುದು. ಅನೇಕ ಭಾಗಗಳಲ್ಲಿ ಭಾವನಾತ್ಮಕವಾಗಿ ಬೆಳವಣಿಗೆಯಾಗುತ್ತಿದೆ, ಬಹಳ ಪ್ರಾಮಾಣಿಕವಾಗಿ ಆಗುತ್ತಿದೆ. ಅದನ್ನು ನಾವು ಪಕ್ಷಭೇದ ಮರೆತು ಯಾವ ಜಿಲ್ಲೆಯಲ್ಲಿ, ಕರ್ನಾಟಕದ ಯಾವ ಮೂಲೆಯಲ್ಲಿ ಅನ್ಯಾಯವಾಗಿದೆ ಆ ಎಲ್ಲಾ ಕಡೆ ಸಮಗ್ರವಾಗಿ ಚಿಂತನೆ ಮಾಡಿ, ಆ ಜನರ ಬೇಡಿಕೆಯನ್ನು ಈಡೇರಿಸುವುದಕ್ಕೆ ಪ್ರಯತ್ನ ಪಡಬೇಕು. ಗುಲ್ಬರ್ಗ ಆಗಬಹುದು ಬಿಜಾಪುರ ಆಗಬಹುದು ಧಾರವಾಡ ಜಿಲ್ಲೆಯಾಗಿರಬಹುದು ಇತರೆ ಯಾವುದೇ ಜಿಲ್ಲೆ ಆಗಿರಬಹುದು. ಎಲ್ಲಿ ಅನ್ಯಾಯ ನಡೆದಿದೆ ಎಂದು ತೀರ್ಮಾನವಾದಾಗ, ಆ ಸ್ಥಳವನ್ನು ಪತ್ತೆ ಹಚ್ಚಿ ಆ ಸ್ಥಳದಲ್ಲಿ ಅಭಿವೃದ್ಧಿ ಕಾರ್ಯವನ್ನು ಮಾಡುವುದು ಬಹಳ ಸ್ಪಷ್ಟವಾದುದು. ಈ ಸಂದರ್ಭಗಳಲ್ಲಿ ಅನೇಕ ಬೇಡಿಕೆಗಳ ಬಗ್ಗೆ ಏನು ಚಳುವಳಿ ನಡೆಯುತ್ತಿದೆ ನಾನು ಅದನ್ನು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ಚಳುವಳಿ ಮಾಡುವುದು ಅವರ ಹಕ್ಕು. ಆದರೆ ಅವರ ಕೂಗು ಬೇರೆ ರೂಪದಲ್ಲಿ ಕರ್ನಾಟಕ ಏಕೀಕರಣಕ್ಕೆ ಯಾವುದೇ ದೃಷ್ಟಿಯಲ್ಲಿ ಅದು ತೊಂದರೆಯಾಗದ ರೀತಿಯಲ್ಲಿ ನಾವೆಲ್ಲರೂ ಬಹಳ ಅತ್ಯಂತ ಜವಾಬ್ದಾರಿಯುತವಾಗಿ ನೋಡಿಕೊಳ್ಳಬೇಕಾಗುದು ನಮ್ಮ ಕರ್ತವ್ಯ. ಎಂದೆಂದೂ ಕರ್ನಾಟಕ ಒಂದೇ. ಕರ್ನಾಟಕವನ್ನು ಎರಡು ಭಾಗವನ್ನಾಗಿ ಮಾಡುವುದಕ್ಕೆ ಎಂದೆಂದೂ ಸಾಧ್ಯಾವಿಲ್ಲದೆನ್ನುವ ಮಾತನ್ನು ತಮ್ಮ ಮೂಲಕ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು : ತಾವು ಮುಗಿಸಿಬಿಡಿ ವೇಳೆ ಬಹಳ ಆಯಿತು 1 - ಗಂಟೆ 20 ನಿಮಿಷ ಆಯಿತು ಮತ್ತೆ ಬೇರೆಯವರಿಗೆ ಅವಕಾಶ ಸಿಗಬೇಕಾಗಿದೆ. ಬೇಗನೆ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್ : ಈ ವಿಚಾರದಲ್ಲಿ ಕೇಂದ್ರದ ಒಬ್ಬ ಸಚಿವರು, ಸತ್ಯಾಗ್ರಹ ಮಾಡತಕ್ಕಂತಹ ಹಿರಿಯ ವ್ಯಕ್ತಿ ನಾಡಿನ ಹಿರಿಯ ಪತ್ರಕರ್ತ ಶ್ರೀ ಪಾಟೀಲ್ ಪುಟ್ಟಪ್ಪನವರನ್ನು ಕೆಲಸ ಇಲ್ಲದಿರತಕ್ಕಂತಹವರು ಎಂದು ಕರೆದಿದ್ದಾರೆ. ಇದು ಒಳ್ಳೆಯ ನೀತಿ ಅಲ್ಲ. ನಾವು ಆಡತಕ್ಕಂಥ ಭಾಷೆ ಮಾತು ಕೇಂದ್ರದ ವಾರ್ತಾ ಸಚಿವರು ಗುಲ್ಬರ್ಗದಲ್ಲಿ ಮಾತನಾಡುವಾಗ ಇವರಿಗೆ ಕೆಲಸವಿಲ್ಲವೆಂದೇನು ಹೇಳಿದ್ದಾರೆ ಇದು ಸರಿಯಾದ ನೀತಿ ಅಲ್ಲ ಇದು ಒಪ್ಪುವ ಮಾತಲ್ಲ. ನಿಜವಾಗಿಯೂ ಇದೊಂದು ರೀತಿಯ ಅಕ್ಷಮ್ಯ ಅಪರಾಧ ಇದರ ಜೊತೆಗೆ ಮತ್ತೊಂದು ಕಡೆ

ಅವರ ಮಾತು ಇನ್ನೂ ತೀಕ್ಷ್ಣವಾಗಿ ಹೋಗುತ್ತದೆ. ಈ ನಾಡಿನ ಹಿರಿಯ ಪತ್ರಕರ್ತರು ಕರ್ನಾಟಕ ಏಕೀಕರಣಕ್ಕೆ ದುಡಿದಂತಹವರು ಸಂಯುಕ್ತ ಕರ್ನಾಟಕ ಪತ್ರಿಕೆಯ ಹಿರಿಯ ಸಂಪಾದಕರಾದ ಶ್ರೀ ಕೆ ಶಾಮರಾವ್ ಅವರ ಬಗ್ಗೆ ವಾರ್ತಾ ಸಚಿವರು ಲಘುವಾಗಿ ಮಾತನಾಡಿದ್ದಾರೆ. ಇದು ಒಳ್ಳೆಯ ನೀತಿ ಅಲ್ಲ. ಪಾಟೀಲ್ ಪುಟ್ಟಪ್ಪನವರು ಹೇಳಿದ್ದಾರೆ ಅವರ ಮೇಲೆ ನೇರವಾಗಿ ನ್ಯಾಯಾಲಯದ ಕಟಕಟೆಯ ಮೇಲೆ ನಿಲ್ಲಿಸುತ್ತೇನೆ ಎಂದು. ನಾನು ಅದನ್ನು ಒಪ್ಪುತ್ತೇನೆ. ಶಾಮರಾಯರ ಮನೆ ಭಾಷ್ಯಂ ಸರ್ಕಲ್‌ನಲ್ಲಿದ್ದಾಗ ತುಂಬುಗಾಲು ಇಡುತ್ತಿದ್ದಿನಿ ಯಾರ‍್ಯಾರು ಹೋಗುತ್ತಿದ್ದಿರಿ ಬೆಳಿಗ್ಗೆ ಎದ್ದು ಏನು ಹೇಳಬೇಕು ಎಂದು ಅವರ ಆಶೀರ್ವಾದ ಪಡೆಯುತ್ತಿದ್ದಿರಿ. ಒಂದು ಹೇಳಿಕೆ ಕೊಡಬೇಕಾದರೂ ಕೂಡ ಅವರ ಹತ್ತಿರ ಆಶೀರ್ವಾದ ಪಡೆಯುತ್ತಿದ್ದಿರಿ ಅದೇ ಇವತ್ತು ಶಾಮರಾಯರು ಯಾರು ಎಂದು ಲಘುವಾಗಿ ಮಾತನಾಡತಕ್ಕಂತಹ ಸ್ಥಿತಿಗೆ ಹೋಗಿರತಕ್ಕಂಥಾದ್ದು ತೀವ್ರ ಅಪರಾಧ ಅನ್ಯಾಯವೆಂದು ಹೇಳುತ್ತಿದ್ದೇನೆ. ಇದು ಬಹಳ ಪ್ರಾಮುಖ್ಯವಾದ ವಿಚಾರ. ನಾನು ಹಿಂದೆ ಪೋಲೀಸ್ ಬಗ್ಗೆ ಮಾತನಾಡುವಾಗ ಈ ಸದನದ ಸದಸ್ಯರಾಗಿದ್ದಂತಹ ಶ್ರೀಮಾನ್ ಜೀವರಾಜ್ ಆಳ್ವ ಅವರು ಮಾಜಿ ಮುಖ್ಯ ಮಂತ್ರಿ ರಾಮಕೃಷ್ಣ ಹೆಗಡೆಯವರ ಕೊಲೆಯ ಸಂಚು ನಡೆದಿದೆ ಎಂದು ಸರಕಾರಕ್ಕೆ ಒಂದು ದೂರನ್ನು ಕೊಟ್ಟಿದ್ದಾರೆ. ಸರಕಾರ ಇದನ್ನು ಯಾವ ರೀತಿಯಲ್ಲಿ ತೀರ್ಮಾನ ಮಾಡಿದೆ ಇದರ ಬಗ್ಗೆ ಸರಕಾರದ ನಿರ್ಧಾರವೇನು ಅದನ್ನು ಏನಾದರೂ ಸಿ.ಓ.ಡಿ.ಗೆ ವಹಿಸುತ್ತೀರೋ ಇಲ್ಲವೇ ಸಿ.ಬಿ.ಐ.ಗೆ ವಹಿಸುತ್ತೀರೋ, ಎಲ್ಲಿಗೆ ವಹಿಸುತ್ತೀರಿ ಎಂಬುದನ್ನು ಸರಕಾರ ತೀರ್ಮಾನ ಮಾಡಿ ಹೇಳಲಿ. ಇದು ಬಹಳ ಗುರುತರವಾಗಿರತಕ್ಕಂಥಾದ್ದು. ಈ ರಾಜ್ಯದಲಿ ಕಳೆದ 15 ದಿವಸಗಳಿಂದ ಒಂದು ಕಡೆ ಗುಡುಗು ಮತ್ತೊಂದು ಕಡೆ ಸಿಡಿಲು ಇವೆರಡರ ಶಬ್ದ ಬಹಳವಾಗಿದೆ, ಆದರೆ ಅಂತಿಮವಾಗಿ ಮಳೆ ಬರಲಿಲ್ಲ. ಒಂದು ಕಡೆ ಮಾಜಿ ಮುಖ್ಯ ಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರ ಧಾಳಿ ಅವರ ಪ್ರಚಾರ ಆ ಪ್ರಚಾರದ ವೈಖರಿ ನೋಡಿದರೆ ನಾವೆಲ್ಲಾ ಇನ್ನು ಯಾವ ಪಕ್ಷ ಈ ರಾಜ್ಯದಲ್ಲಿ ಇಲ್ಲವೋ ಎನ್ನುವ ರೀತಿಯ ಪ್ರಚಾರ ಇದೆ. ಮತ್ತೊಂದು ಕಡೆ ಪ್ರಧಾನ ಮಂತ್ರಿಯವರ ಪ್ರಚಾರ ಈ ಎರಡೂ ಸಿಡಿಲು ಮತ್ತು ಗುಡುಗಿನ ಶಬ್ದ ದಿಗಂತದಲ್ಲಿ ಇದೆ ಆದರೆ ಮಳೆ ಮಾತ್ರ ಬರಲಿಲ್ಲ.

ಶ್ರೀ ಎಲ್ ಆರ್ ಶಿವರಾಮೇಗೌಡ : ಪತ್ರಿಕೆಗಳು ಸತ್ಯಾಂಶವನ್ನು ಹೊರಗೆ ಕೆಡವದೇ ಇರಬಹುದು. ಪತ್ರಿಕೆಗಳು ಹ್ಯಾಂಡ್ ಬಿಲ್ ಆಗಿ ಪರಿವರ್ತನೆ ಆಗಬಹುದು. ಅವರು ತಪ್ಪು ಮಾಹಿತಿಯನ್ನು ಜನರಿಗೆ ಕೊಡಬಹುದು. ಆ ಪತ್ರಿಕೆಯವರು ಸತ್ಯವಂತರೆಂದು ಹೇಳಬೇಕೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರ ಮನೆಗೆ ಹೋಗಿ ವಿಚಾರ ತಿಳಿದುಕೊಳ್ಳುತ್ತಿದ್ದರಲ್ಲಾ. ನಿಮ್ಮ ಪರ ಪ್ರಚಾರ ಮಾಡುವಾಗ ಅದು ಹ್ಯಾಂಡ್ ಬಿಲ್ ಆಗುವುದಿಲ್ಲವೇ ನಿಮಗೆ ವಿರುದ್ಧವಾದಾಗ ಅದು ಹ್ಯಾಂಡ್ ಬಿಲ್ ! ನಿಮ್ಮ ಪರ ಇದ್ದಾಗ........

(ಗೊಂದಲ)

ಶ್ರೀ ಸಿ. ಬೈರೇಗೌಡ: ನಿಮ್ಮ ಪರ ಆಗಲೀ ನಮ್ಮ ಪರ ಆಗಲಿ ಯಾರ ಪರವೂ ಆಗುವುದು ಬೇಕಾಗಿಲ್ಲ. ಜನರಿಗೆ ಸತ್ಯಾಂಶ ಮುಟ್ಟುವುದು ಅವಶ್ಯಕತೆ ಇದೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರ ಮನೆಗೆ ಹೋಗಿ ಅವರ ದರ್ಶನ ತೆಗೆದುಕೊಂಡು ನಿಮ್ಮ ಆಶೀರ್ವಾದ ಬೇಕು, ನಿಮ್ಮ ಬೆಂಬಲ ಇರಬೇಕು ನೀವು ನಮ್ಮ ಗುರುಗಳು ಎಂದು ತಾವೇ ಹೇಳಿದವರು........

(ಗೊಂದಲ)

ಶ್ರೀ ಸಿ. ಬೈರೇಗೌಡ : ಯಾರ ಪರವಾಗಿಂದೂ ಹೇಳಬೇಕಾಗಿಲ್ಲ. ಪತ್ರಿಕಾ ಧರ್ಮವನ್ನು ಪಾಲನೆ ಮಾಡಬೇಕು. ಆ ಕೆಲಸ ಮಾಡಿದರೆ ಸಾಕು.

(ಗೊಂದಲ)

ಶ್ರೀ ಎಂ. ಮಲ್ಲಕಾರ್ಜುನ ಖರ್ಗೆ : ನೀವು ಮಾಡಿದಂಥದ್ದನ್ನು ಕೆಟ್ಟ ಕೆಲಸವನ್ನು ಬರೆದರೆ ಹೀಗೆ............

ಉಪಾಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ತಾವು ಈಗ ಮುಕ್ತಾಯ ಮಾಡಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ: ಒಂದು ವಿಚಾರವನ್ನು ನಾನು ಇಲ್ಲಿ ಹೇಳಬೇಕಾಗಿದೆ. ಮಾನ್ಯ ವಾಟಾಳ್‌ರವರ ಬಗ್ಗೆ ನನಗೆ ಬಹಳ ಗೌರವ ಇದೆ. ಅವರು ಹೇಳಿರತಕ್ಕಂತಹ ವಿಚಾರವನ್ನು ಎಲ್ಲರೂ ಗಮನಿಸಬೇಕಾಗಿದೆ.

1:20 ಪಿ . ಎಂ

ಇವತ್ತು ಹಾಸನದಲ್ಲಿ ಪ್ರಧಾನಮಂತ್ರಿಗಳು ನನ್ನ ಒಕ್ಕಲಿಗ ಜನಾಂಗ ನನ್ನ ಹಿಂದೆ ಇದ್ದಾರೆ ಎನ್ನುವ ಮಾತನ್ನು ನೀವು ರೆಕಾರ್ಡ್‌ನಲ್ಲಿ ತೋರಿಸುತ್ತೀರಾ? ಇವತ್ತು ಪತ್ರಿಕೆ ಹ್ಯಾಂಡ್ ಬಿಲ್ ಎಂದು ಹೇಳದೆ ಇನ್ನೇನು ಹೇಳುತ್ತೀರಿ? ಮಾನ್ಯ ಇಬ್ರಾಹಿಂರವರು ಮತ್ತು ಪ್ರಧಾನಮಂತ್ರಿಗಳು ಆ ಪತ್ರಿಕೆ ಬಗ್ಗೆ ಹೇಳಿರುವುದು ನೂರಕ್ಕೆ ನೂರು ಸತ್ಯ. ಆ ಪತ್ರಿಕೆ ಹ್ಯಾಂಡ್ ಬಿಲ್ ಅಲ್ಲವೇ? ಒಂದು ಪಕ್ಷವನ್ನು ಸರ್ವನಾಶ ಮಾಡಬೇಕು, ಇವತ್ತು ಒಬ್ಬ ರೈತನ ಮಗ ಅಧಿಕಾರ ಗದ್ದುಗೆಯನ್ನು ಭಾರತದ

ಮಟ್ಟದಲ್ಲಿ ಹಿಡಿದಿರುವ ಸಂದರ್ಭದಲ್ಲಿ ಅವರು ಹಿಡಿಯಬಾರದಾಗಿತ್ತು, ಯಾರೋ ಬೇರೆಯವರಿಗೆ ಆ ಸ್ಥಾನ ಸೀಮಿತವಾಗಿರಬೇಕಾಗಿತ್ತು ಎನ್ನುವುದನ್ನು ಎತ್ತಿ ತೋರಿಸುವ ಕೆಲಸವನ್ನು ಆ ಪತ್ರಿಕೆ ಮಾಡಿದೆ. ಇದನ್ನೆಲ್ಲಾ ನಾವು ಒಕೊಂಡು ಸಮ್ಮನೆ ಇರಬೇಕೇ ? ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳಬೇಕೇ ? ಪತ್ರಿಕೆಗಳಿಗೆ ಸ್ವಾತಂತ್ರ್ಯ ಇದೆ. ನಾವು ಪತ್ರಿಕರ್ತರನ್ನು, ಪತ್ರಿಕೆಗಳನ್ನು ಗೌರವಿಸುತ್ತೇವೆ. ಇದರಲ್ಲಿ ಎರಡನೇ ಮಾತೇ ಇಲ್ಲ. ಆದರೆ ಪತ್ರಿಕೆಗಳು ಇವತ್ತು ಯಾವ ಮಟ್ಟಕ್ಕೆ ಹೋಗುತ್ತಿದ್ದಾವೆ ಎಂದರೆ ಕಂಪ್ಲೇಂಟ್ ಬಂದು ಹ್ಯಾಂಡ್ ಬಿಲ್ ಆಗಿ ಒಂದು ಪಕ್ಷವನ್ನು ಏನೋ ನಾವೇ ಮುಳುಗಿಸುತ್ತೇವೆ ಎನ್ನುವತೀಮಾನಕ್ಕೆ ಹೋಗುತ್ತಿವೆ. ಅದು ಆಗಬಾರದು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರಿಗೆ ಬರೆಯುವಂಥ ಸ್ವಾತಂತ್ರ್ಯ ಇಲ್ಲವೇ ? ಅವರು ಹೇಗೆ ಬರೆಯಬೇಕು ಎಂದುನೀವು ಹೇಳಬೇಕೇ ? ನೀವು ಹೇಳಿದ ಹಾಗೆ ಬರೆಯುವುದಕ್ಕಾಗುತ್ತದೆಯೇ ? ನಿಮ್ಮ ಪ್ರಚಾರಕ್ಕೆ ಬೇಕಾದಾಗ ಪತ್ರಿಕೆಗಳು ಬೇಕು. ವಿರುದ್ಧವಾದಾಗ ಬೇಡ. ಈ ರೀತಿಯಾಗಿ ಯಾರೋ ಒಬ್ಬ ಸದಸ್ಯರು ನಡೆದುಕೊಂಡರೆ ಸರಿಯಲ್ಲ. ಆ ಪತ್ರಿಕೆಯವರು ಬಂದು ಇಲ್ಲಿ ಡಿಫೆಂಡ್ ಮಾಡಿಕೊಳ್ಳುವುದಕ್ಕಾಗುತ್ತದೆಯೇ ? ಈ ಸದನದಲ್ಲಿ ಅವರು ಬಂದು ಹೇಳಿಕೊಳ್ಳುವುದಕ್ಕಾಗುತ್ತದೆಯೇ ?

(ಗೊಂದಲ)

ಉಪಾಧ್ಯಕ್ಷರು : ಶಿವರಾಮೇಗೌಡರೇ, ತಾವು ದಯಮಾಡಿ ಕೂಡಿ. ವಾಟಾಳ್‌ನಾಗರಾಜ್‌ರವರೇ, ತಾವು ದಯಮಾಡಿ ಮುಕ್ತಾಯ ಮಾಡಿ.

ಶ್ರೀ ಎಚ್.ಎನ್. ನಂಜೇಗೌಡ : ಈ ಅವಿಶ್ವಾಸ ನಿರ್ಣಯದ ಚರ್ಚೆಯಾವರೀತಿ ನಡೆಯುತ್ತದೆ ಎಂದರೆ ಚರ್ಚೆ ಮಾಡುತ್ತಾರೆ Commissions and omissions of the Govt, ಮಂತ್ರಿಗಳು ಬೇಕಾದರೆ ಯಾವ ಹಂತದಲ್ಲಿ ಬೇಕಾದರೂ ಇಂಟರ್ ಫಿಯರ್ ಆಗಿ want to reply to the charges ಎಂದರೆ ಅವರಿಗೆ ಅವಕಾಶ ಉಂಟು. ಕೊನೆಯಲ್ಲೇ ಮಾಡಬೇಕು ಎಂದು ಏನೂ ಇಲ್ಲ. ಯಾವ ಹಂತದಲ್ಲಿ ಬೇಕಾದರೂ ಯಾವ ಮಂತ್ರಿ ಬೇಕಾದರೂ ಚಾರ್ಜಸಗೆ ಉತ್ತರ ಕೊಡುತ್ತೇನೆ ಎಂದರೆ ಅವರಿಗೆ ಅವಕಾಶ ಇದೆ. ರೂಲಿಂಗ ಪಾರ್ಟಿ ಸದಸ್ಯರೆಲ್ಲಾ ಎದ್ದು ನಾವು ಉತ್ತರ ಕೊಡುತ್ತೇವೆ ಎಂದು ಹೇಳಿದರೆ ಚರ್ಚೆ ಹೇಗೆ ಸಾಗುವುದು ?

ಉಪಾಧ್ಯಕ್ಷರು : ಈಗ ಅದಕ್ಕೇ ಹೇಳುತ್ತಿದ್ದೇವೆ ಅವರು ಮಾತನಾಡುವುದು ಬೇಡ ವಾಟಾಳ್ ನಾಗರಾಜ್‌ರವರೇ, ತಾವು ಮುಕ್ತಾಯಮಾಡಿಬಿಡಿ.

ಶ್ರೀ ಸಿದ್ಧರಾಮಯ್ಯ : ಅವರ ಅಭಿಪ್ರಾಯವನ್ನು ಅವರು ಹೇಳಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು: ಇಷ್ಟು ಜನ ಎಲ್ಲಾ ಮಾತನಾಡಿ ಮತ್ತೆ ತಾವು ಮಾತನಾಡುವುದು. ಸಮಯ ಎಲ್ಲಿದೆ ಹೇಳಿ ?

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಪತ್ರಿಕಾ ಸ್ವಾತಂತ್ರ್ಯದಲ್ಲಿ, ವ್ಯಕ್ತಿ ಸ್ವಾತಂತ್ರ್ಯದಲ್ಲಿ ಪ್ರಜಾತಂತ್ರದಲ್ಲಿ ನಮ್ಮ ಪಕ್ಷಕ್ಕೆ ನಂಬಿಕೆ ಇದೆ. ಸುಮ್ಮನೆ ಏನೇನೋ ಮಾತನಾಡುವುದಕ್ಕೆ ಹೋಗಬೇಡಿ.

(ಗೊಂದಲ)

ಉಪಾಧ್ಯಕ್ಷರು : ಶ್ರೀನಿವಾಸರವರೇ ದಯಮಾಡಿ ಕೂಡಿ.

ಶ್ರೀ ಕೆ. ಎಸ್. ಈಶ್ವರಪ್ಪ: ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳಿಗೆ ಹ್ಯಾಂಡ್ ಬಿಲ್ ಎಂದರೆ ನೀವು ಆಡಳಿತ ಪಕ್ಷ ಚಮಚಾಗಳು ಎಂದು ಹೇಳಬೇಕಾಗುತ್ತದೆ. ಆಡಳಿತ ಪಕ್ಷದ ಚಮಚಾ ಇವರು. ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳ ಬಗ್ಗೆ ಇವರಿಗೆ ಗೌರವ ಇಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ: ನೀವು ಬಿಜೆಪಿ ಚಮಚಾ.

(ಗೊಂದಲ)

ಶ್ರೀ ಕೆ. ಎಸ್ . ಈಶ್ವರಪ್ಪ: ಚಮಚಾಗಿರಿಯಿಂದಲೇ ಈ ರಾಜ್ಯ ಹಾಳಾಗಿರುವುದು.

(ಗೊಂದಲ)

ಉಪಾಧ್ಯಕ್ಷರು : ವಾಟಾಳ್‌ನಾಗರಾಜ್‌ರವರೇ, ತಾವು ಮುಕ್ತಾಯಮಾಡಿ ಸ್ವಾಮಿ.

ಶ್ರೀ ವಾಟಾಳ್ ನಾಗರಾಜ್ : ತಾವು ಕೋಪಿಸಿಕೊಂಡರೆ ಭಯ ಆಗುತ್ತದೆ.

ಉಪಾಧ್ಯಕ್ಷರು : ಇಲ್ಲ. ಇಲ್ಲ. ತಾವು ದಯಮಾಡಿ ಮಾತನಾಡಿ. ಕೋಪ ಇಲ್ಲ.

(ಗೊಂದಲ)

ಶ್ರೀ ಎಸ್ ಸುರೇಶ್‌ಕುಮಾರ್ : ಅವರೇನು ಅಧಿಕೃತ ವಕ್ತಾರರೇ?

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಶಿವರಾಮೇಗೌಡರೇ, ನಿಮಗೆ ವಿನಂತಿ ಮಾಡಿಕೊಂಡರೂ ತಾವು ಕೇಳುವುದಿಲ್ಲ ಎಂದರೆ ಹೇಗೆ? ಈ ಸಭೆ ನಡೆಸುವುದು ಹೇಗೆ? ನಿಮ್ಮನ್ನೆಲ್ಲಾ ಎಷ್ಟು ವಿನಂತಿ ಮಾಡಿದರೂ ತಾವು ಕೇಳುವುದಕ್ಕೆ ತಯಾರಿಲ್ಲ. ಎಲ್ಲರೂ ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ : ನಮ್ಮ ಅಭಿಪ್ರಾಯ ಹೇಳುವುದಕ್ಕೆ ಅವಕಾಶ ಇಲ್ಲವೇ?

(ಗೊಂದಲ)

ಉಪಾಧ್ಯಕ್ಷರು : ತಾವು ಈ ರೀತಿ ಮಾಡಿದರೆ ಯಾರಿಗೂ ಮಾತನಾಡಲಿಕ್ಕೆ ಅವಕಾಶ ಸಿಗುವುದಿಲ್ಲ. ತಾವುಗಳು ಈ ರೀತಿ ನಿಂತರೆ ಏನು ಮಾಡುವುದು? ಸಭೆಯ ನಿಯಮಗಳನ್ನು ತಾವು ಪಾಲಿಸಬೇಕು. ತಾವು ಕೂಡಬೇಕು. ಯಾರಿಗೂ ಅವಕಾಶ ವಿಲ್ಲ.

(ಗೊಂದಲ)

ಉಪಾಧ್ಯಕ್ಷರು : ಕಾಟ್ವೆಯವರೇ, ತಾವು ಕುಳಿತುಕೊಳ್ಳಿ, ವಾಟಾಳ್ ನಾಗರಾಜ್‌ರವರೇ, ತಾವು ಮುಕ್ತಾಯಮಾಡಿ.

(ಗೊಂದಲ)

ಶ್ರೀ ಎಂ ಶಿವಾನಂದ : ಒಂದನ್ನು ತಾವು ಸ್ಪಷ್ಟಪಡಿಸಬೇಕು. ನಿಂತು ಆ ಕಡೆ ಎದ್ದು ನಿಂತು ಹೊಸ ಪರಂಪರೆಯನ್ನು ಸೃಷ್ಟಿಮಾಡುತ್ತಿದ್ದಾರೆ. ಕೈಯನ್ನು ಕುಟ್ಟುವುದು ಏನು ಇದು: ಕಾಟ್ವೆಯವರು ಕೈ ಕುಟ್ಟುವುದು, ನಾಳೆ ಕೈ ತೋರಿಸಿ ಕುಸ್ತಿ ಮಾಡುವ ರೀತಿ ತೋರಿಸುವುದು. ಏನು ಇದು? ಅದಕ್ಕೊಂದು ಇತಿಮಿತಿ ಬೇಡವೇ? ನಾಲ್ಕು ದಿವಸದಿಂದ ನೋಡುತ್ತಿದ್ದೇವೆ. ನಾವೇನು ಹೊಡೆದಾಡುವುದಕ್ಕೆ ಬಂದಿದ್ದೇವೆಯೇ? ಏನು ಇದು?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ನಾನು ಮಾತನಡುವಾಗ ಬೇರೆ ಏನನ್ನೂ ಮಾತನಾಡಿಲ್ಲ. ಪಾಟೀಲ್ ಪುಟ್ಟಪ್ಪನವರ ಬಗ್ಗೆ, ಶಾಮರಾಯರ ಬಗ್ಗೆ ಮಾತನಾಡುತ್ತಿದ್ದೆ ಅವರುಗಳ ಈ ರಾಜ್ಯದ ಗೌರವಾನ್ವಿತ ವ್ಯಕ್ತಿಗಳು. ಅದರಲ್ಲೇನೂ ಎರಡನೇ ಅಭಿಪ್ರಾಯ ಇಲ್ಲ. ಅವರನ್ನು ಎಲ್ಲ ಪಕ್ಷದವರು ಭೇಟಿಮಾಡಿದ್ದಾರೆ. ಇದರಲ್ಲೇನು ಪಕ್ಷರಹಿತವಾಗಿ ಅವರವರ ಸಂದರ್ಭಕ್ಕೆ ಬಂದಾಗ ಅವರವರ ಸಹಾಯ ಬಂದಾಗ ಅವರವರ ಕಷ್ಟಬಂದಾಗ ಅವರಿಗೆ ಅನುಕೂಲಕ್ಕೆ ಬೇಕಾದಾಗ ಅವರನ್ನೆಲ್ಲಾ ಉಪಯೋಗಿಸಿಕೊಂಡಿರುವುದು ಈ ಕಡೆ ಆ ಕಡೆ ಎಲ್ಲರಲ್ಲೂ ನಡೆದಿದೆ. ಅದರಲ್ಲಿ ಏನು ಹೊಸದು ಇಲ್ಲ. ಆದರೆ........

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ: ಪಾಟೀಲ್ ಪುಟ್ಟಪ್ಪನವರಿಗೆ, ಶಾಮರಾಯರಿಗೆ ಕಷ್ಟ ಬಂದಾಗ ನಮ್ಮ ಹತ್ತಿರಕ್ಕೆ ಬಂದಿಲ್ಲವೇ ? ಅವರು ಪಾಟೀಲ್ ಪುಟ್ಟಪ್ಪನವರು ಮತ್ತೆ ಶಾಮರಾಯರ ಅವರ ಹತ್ತಿರ ಹೋಗಿ ಕಷ್ಟ ಬಂದಾಗ ಬೇರೆಯವರು ಉಪಯೋಗಿಸಿಕೊಂಡಿದ್ದಾರೆ. ಅದೂ ಇದೆ. ಎರಡೂ ಇದ್ದಾವೆ. ಅದರ ಮೇಲೆ ತಾವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ವ್ಯಕ್ತಿಗಳ ಬಗ್ಗೆ ಮಾತನಾಡುವಾಗ ಕೇಂದ್ರದ ಮಂತ್ರಿಗಳಾಗಲಿ, ರಾಜ್ಯದ ಮಂತ್ರಿಗಳಾಗಲಿ ಹಗುರವಾಗಿ ಮಾತನಾಡಬಾರದು ಎನ್ನುವಂಥದ್ದು ಅತ್ಯಂತ ಒತ್ತಾಯ. ಅದಕ್ಕೆ ಈ ಭಾಷೆಗೆ ಪತ್ರಿಕೆಗಳು ಹಸ್ತಪ್ರತಿ ಎಂದು ಹೇಳುವ ಮಾತು ಇದೆಯಲ್ಲಾ, ಇದು ಅಕ್ಷಮ್ಯ ಅಪರಾಧ, ಒಳ್ಳೆಯ ನೀತಿಯಲ್ಲ. ಒಳ್ಳೆಯ ಮಾರ್ಗವಲ್ಲ.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ : ನಿಮ್ಮ ಅಭಿಪ್ರಾಯವನ್ನು ನೀವು ಹೇಳಿ. ನಮ್ಮ ಅಭಿಪ್ರಾಯವನ್ನು ನಾವು ಹೇಳಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಇದು ಪತ್ರಿಕಾ ಸ್ವಾತಂತ್ರ್ಯ ಅಪಹರಣ. ಪತ್ರಿಕಾ ಸ್ವಾತಂತ್ರ್ಯಕ್ಕೆ ಧಕ್ಕೆ. ಅಷ್ಟೇ ಹೊರತು ಇನ್ನೇನೂಅಲ್ಲ. ಅತಿಯಾದ ನಿಷ್ಟೆ ತೋರಿಸುವುದಕ್ಕೆ ಹೋಗಿ.....

ಶ್ರೀ ಎಲ್.ಆರ್. ಶಿವರಾಮೇಗೌಡ : ನಮ್ಮ ಅಭಿಪ್ರಾಯ ನಾವು ಹೇಳಲೇಬಾರದು ಎಂದರೆ ಹೇಗೆ ?

(ಗೊಂದಲ)

ಶ್ರೀ ಎಸ್ ಕೃಷ್ಣಪ್ಪ : ಮಾನ್ಯ ವಾಟಾಳ್ ನಾಗರಾಜ್ ಅವರು ಅತಿಯಾದ ನಿಷ್ಠೆ ತೋರಿಸುತ್ತಿದ್ದಾರೆ.

ಶ್ರೀ ಎಲ್. ಆರ್.ಶಿವರಾಮೇಗೌಡ : ನಮ್ಮ ನಾಯಕರ ಬಗ್ಗೆ ನಿಷ್ಠೆ ಇಟ್ಟಿದ್ದರೆ ಅದರಲ್ಲಿ ತಪ್ಪು ಏನು ಇದೆ ?

ಉಪಾಧ್ಯಕ್ಷರು : ವಾಟಾಳ್ ನಾಗರಾಜ್‌ರವರೇ ತಾವು ಬೇಗ ಮುಗಿಸಿಬಿಡಿ.

ಶ್ರೀ ವಾಟಾಳ್ ನಾಗರಾಜ್ : ನನಗೆ ಮಾತು ಮುಗಿಸಲು ಇವರುಗಳು ಬಿಡುತ್ತಿಲ್ಲ.

ಉಪಾಧ್ಯಕ್ಷರು : ತಾವು ಬೇಗ ಮುಗಿಸಿಬಿಡಿ.

ಶ್ರೀವಾಟಾಳ್ ನಾಗರಾಜ್ : ಈಗ ನನ್ನ ಪರಿಸ್ಥಿತಿ ಏನಾಗಿದೆ ಎಂದರೆ ವಿರಾಟ ಪರ್ವ ದಲ್ಲಿ ಅಭಿಮನ್ಯುವಿನ ಪರಿಸ್ಥಿತಿ . ಸುತ್ತು ಮುತ್ತ ಬೀಳುತ್ತಿದ್ದಾರೆ. ಹೀಗಾದರೆ ಬಹಳ ಕಷ್ಟ ಕೊನೆಗೆ ನಾವು ಅವಿಶ್ವಾಸ ತಂದಿದ್ದರೂ ಯಾರಾದರೂ ನಿಮ್ಮ ಕಡೆ ಒಂದಿಬ್ಬರು ಸಹಕಾರ ಕೊಡಿ. ಮಾನ್ಯ ಪ್ರಕಾಶ್‌ರವರೇ ನೀವಾದರೂ ಕೊಡುತ್ತೀರೋ ? ಸಿಂಧ್ಯರವರೇ ನೀವಾದರೂ ಸಹಕಾರ ಕೊಡುತ್ತೀರೋ ? ಇದು ಏನು ಈ ತರಹ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಹೇಳಿದ ಮಾತಿಗೆ ಆ ಮೂಲೆ ಒಂದು ಬಿಟ್ಟರೆ ಸಂಪೂರ್ಣವಾಗಿ ಈ ಕಡೆ ಆ ಕಡೆ ಎಲ್ಲಾ ನಿಮ್ಮ ಪರವಾಗಿಯೇ ಇದ್ದಾರೆ. ಸಂಪೂರ್ಣವಾಗಿ ನೋಡಿ. ನೀವು ಬಂದಾಗ, ಆ ವಿಷಯ ಬಂದಾಗ ಅಂದರೆ ಆ ಪತ್ರಿಕೆ ವಿಚಾರ ಬಂದಾಗ ಆ ಮೂಲೆ ಮಾತ್ರ ಸ್ವಲ್ಪ ಎಜಿಟೇಟ್ ಮಾಡುತ್ತಿತ್ತು. ಉಳಿದವರು ಎಲ್ಲರೂ ದೂರ ನಿಮ್ಮ ಪರ ನಿಂತಿದ್ದಾರೆ.

ಉಪಾಧ್ಯಕ್ಷರು : ಈ ತರಹ ಆದರೆ ಎಲ್ಲರಿಗೂ ಮಾತನಾಡಲು ಅವಕಾಶ ಸಿಗುವುದಿಲ್ಲ. ಏನೂ ಮಾಡುವುದಕ್ಕೆ ಆಗುವುದಿಲ್ಲ. ಒಬ್ಬರು ಎದ್ದು ನಿಂತರೆ ಮತ್ತೆ 20 ಜನ ಎದ್ದು ನಿಲ್ಲುತ್ತಾರೆ. ಮಾನ್ಯ ಯಡಿಯೂರಪ್ಪನವರು ತಾವು ಹೊರಗೆ ಹೋಗಿದ್ದಿರಿ. ನಿಮಗೆ ಗೊತ್ತಿಲ್ಲ.

ಶ್ರೀ ಬಿ.ಎಸ್ ಯಡಿಯೂರಪ್ಪ : ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ ಲಂಜ್ ಬ್ರೇಕ್ ಬೇಡ. ರಾತ್ರಿ 12 ಗಂಟೆ ಆಗಲಿ, ಒಂದು ಗಂಟೆ ಆಗಲಿ ಸಭೆ ನಡೆಯಬೇಕು ನಾವು ಕುಳಿತುಕೊಳ್ಳುವುದಕ್ಕೆ ತಯಾರಿದ್ದೇವೆ.

ಉಪಾಧ್ಯಕ್ಷರು : 12 ಗಂಟೆ ಎರಡು ಗಂಟೆಯ ಪ್ರಶ್ನೆ ಅಲ್ಲ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಸದನದ ಅಭಿಪ್ರಾಯ ತೆಗೆದುಕೊಳ್ಳಿ ಸಾರ್. ದಯಮಾಡಿ ನೀವು ಕ್ಷಮಿಸಿ, ನೀವು. ಸದನದ ಅಭಿಪ್ರಾಯ ತೆಗೆದುಕೊಳ್ಳಿ, ಲಂಚ್ ಬ್ರೇಕ್ ಬೇಡ.

ಉಪಾಧ್ಯಕ್ಷರು : ತಾವು ದಯಮಾಡಿ ಕೇಳಿರಿ.

ಶ್ರೀ ಬಿ. ಎಸ್. ಯಡಿಯೂರಪ್ಪ: ನಾನು ಪ್ರತಿಪಕ್ಷದ ನಾಯಕನಾಗಿ ನನ್ನ ಅಭಿಪ್ರಾಯ ಕೇಳುವುದಕ್ಕೆ ಅಧಿಕಾರ ಇದೆ.

ಉಪಾಧ್ಯಕ್ಷರು : ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ತಮ್ಮ ಮನಸ್ಸನ್ನು ಒರೆಸುವುದಕ್ಕೆ ಏನು ಪ್ರಯತ್ನ ಮಾಡುತ್ತಿದ್ದೇನೆಂದರೆ ತಮ್ಮ ಬಗ್ಗೆ ತುಂಬಾ ಗೌರವ ಇದೆ, ಪ್ರಶ್ನೆಯೇ ಇಲ್ಲ. ನಾನು ಹೇಳುತ್ತಿರುವುದು ಅತ್ಯಂತ ಪ್ರಮುಖವಾದಂತ ಅನೇಕ ವಿಷಯಗಳನ್ನು ಮಾತನಾಡುವವರು ಇದ್ದಾರೆ . ಲಂಚ್ ಬ್ರೇಕ್ ಬೇಡ. ಆರು ಗಂಟೆ ಅಥವಾ ಇವತ್ತು ನಾವು ಪೂರ್ತಿ ಮಾತನಾಡಲು ಅವಕಾಶ ಕೊಡಿ. ನಾಳೆ ಸರ್ಕಾರ ರಿಪ್ಲೈ ಮಾಡಲಿ. ಇದು ಆಗಬೇಕು, ಇಲ್ಲದೇ ಇದ್ದರೆ ಆಗುವುದಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾಳೆ ಆಗುವುದಿಲ್ಲ.

ಶ್ರೀ ಎಂ.ಸಿ.ನಾಣಯ್ಯ : ನಾವು ಒಪ್ಪುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್ ತಾವು ದಯಮಾಡಿ ಮುಕ್ತಾಯ ಮಾಡಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸುಮಾರು ಒಂದು ಕ್ವಿಂಟಾಲ್ ಅಷ್ಟು ಬೊಜ್ಜು ಇದೆ, ನಿಮಗೆ ಛಾರ್ಜಸ್ ಮಾಡಿದ್ದು ಒಂದು ಕ್ವಿಂಟಾಲಷ್ಟು ಆಗುತ್ತದೆ. ಅದಕ್ಕೆ ನಾಳೆ ಉತ್ತರ ಕೊಡಲಿ. ಅದನ್ನು ಎಲ್ಲ ಹೊತ್ತು ಕೊಂಡು ಹೋಗಿ, ಆ ಛಾರ್ಜಸ್ ಅನ್ನು ತೆಗೆದುಕೊಂಡು ಹೋಗಿ ನಾಳೆ ಉತ್ತರ ಕೊಟ್ಟರೆ ಸರಿ ಹೋಗುತ್ತದೆ.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾಳೆ ಅಲ್ಲ. ಇವತ್ತೇ ಉತ್ತರ ಹೇಳುತ್ತಾರೆ.

ಉಪಾಧ್ಯಕ್ಷರು : ನಾಗರಾಜ್ ಅವರೇ , ತಾವು ದಯಮಾಡಿ ಮುಗಿಸಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಆ ಬೊಜ್ಜು ಆ ಭಾರ ಇಳಿಸಿಕೊಂಡು ನಾಳೆ ಉತ್ತರ ಕೊಡಿ.

ಉಪಾಧ್ಯಕ್ಷರು : ತಾವು ಮುಗಿಸಿ ಬಿಡಿ.

ಶ್ರೀ ವಾಟಾಳ್ ನಾಗರಾಜ್ : ನಾನು ಕೊನೆಯದಾಗಿ ಹೇಳುತ್ತಿದ್ದೇನೆ. ನಮ್ಮಲ್ಲಿ ಈ ನಿಷ್ಠೆ ಬಗ್ಗೆ ಪ್ರಶ್ನೆ ಬಂದಾಗ ಸರ್ಕಾರ ಉಳಿಯುವುದಿಲ್ಲ. ಏಕೆಂದರೆ ನಾನು ಈಗ ಅವಿಶ್ವಾಸದ ಮೇಲೆ ಮಾತನಾಡುತ್ತಿದ್ದೇನೆ.

ಶ್ರೀ. ಸಿ. ಬೈರೆಗೌಡ : ನಿಮ್ಮ ಕೈಯಲ್ಲಿ ಆದರೆ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ತಾವು ಈ ಕಡೆ ಇದ್ದಿರಿ, ಆ ಕಡೆ ಸರ್ಕಾರ ಬರಲಿಲ್ಲವೇ? ಈ ಕಡೆ ತಾವು ಇದ್ದಾಗ ಸರ್ಕಾರ ಬಂತು. ಯಾವ ಘಳಿಗೆಯಲ್ಲಿ ಏನಾಗುತ್ತದೆ ಎಂಬುದು ಗೊತ್ತಿರುವುದಿಲ್ಲ.

ಶ್ರೀ ಸಿ ಬೈರೇಗೌಡ : ನಿಮ್ಮ ಕೈಯಲ್ಲಿ ಆದರೆ ಉರುಳಿಸಿ, ಬೇಡ ಎಂದವರು ಯಾರು ?

ಉಪಾಧ್ಯಕ್ಷರು : ತಾವು ಮುಗಿಸಿ ಬಿಡಿ. ಒಂದೂವರೆ ಗಂಟೆ ಆಯಿತು.

ಶ್ರೀ ವಾಟಾಳ್ ನಾಗರಾಜ್ : ತಾವು ಟೈಮ್ ಇಟ್ಟು ಬಿಡಿ ಸಾರ್. ಇನ್ನು ಆರು ನಿಮಿಷದಲ್ಲಿ ನಾನು ಮುಗಿಸುತ್ತೇನೆ. ತಮಗೆ ಹೇಳುತ್ತಿದ್ದೇನೆ, ಏಕೆಂದರೆ ತಾವು ಸಿಟ್ಟಾಗಬಾರದು. ಈಗ ನಿಷ್ಠೆ, ಯಾವ ರೀತಿ ನಿಷ್ಠೆ ಇರಬೇಕು. ಅದನ್ನು ಆಮೇಲೆ ಹೇಳುತ್ತೇನೆ. ಈಗ ನಮ್ಮಲ್ಲಿ....

ಉಪಾಧ್ಯಕ್ಷರು : ಈಗ ನಿಷ್ಠೆ ಸಲುವಾಗಿ ಮಾನ್ಯ ಖರ್ಗೆಯವರನ್ನು ಕೇಳಿ.

ಶ್ರೀ ವಾಟಾಳ್ ನಾಗರಾಜ್ : ನಿಷ್ಠೆ ವಿಚಾರ. ಈಗ ಎರಡು ತಿಂಗಳ ಹಿಂದೆ ಸರ್.ಸಿ.ವಿ ರಾಮನ್ ರಸ್ತೆಯಲ್ಲಿ ಇವರ ಮುಖಂಡರ ಮನೆಯಲ್ಲಿ ಇವರೆಲ್ಲರೂ ಸಾಲುಗಟ್ಟಿ ನಿಂತಿದ್ದನ್ನು ನೋಡಿದೆ. ಕೈಮುಗಿದು, ಪಾದ ಪೂಜೆ...

(ಗೊಂದಲ)

ಶ್ರೀ ಸಿ. ಎಸ್. ಪುಟ್ಟೇಗೌಡ : ಸ್ವಾಮಿ ನೀವು ಏಕೆ ಅಲ್ಲಿಗೆ ಬಂದಿದ್ದಿರಿ ?

ಶ್ರೀ ವಾಟಾಳ್ ನಾಗರಾಜ್: ಈ ಸದನದಲ್ಲಿ ಹೋದ ಶಾಸನಸಭೆಯಲ್ಲಿ ಇದ್ದವು ತಾವೆಲ್ಲಾ ಬಹಳ ನಿಷ್ಟರು. ತಾವು, ನಾಗಮಾರಪಲ್ಲಿಯವರು, ದೇಶಪಾಂಡೆಯವರು ಅನಂತನಾಗ್ ಅವರು, ಜಿಗಜಿಣಗಿಯವರು, ಇದಾದ ನಂತರ ನಿಮ್ಮನ್ನು ತೆಗೆಯುತ್ತಾರಂತಲ್ಲಾ.

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಿಮಗೆ ಏಕೆ ಈ ಚಿಂತೆ ?

ಶ್ರೀ ವಾಟಾಳ್ ನಾಗರಾಜ್ : ನನಗೆ ಮೊದಲಿನಿಂದಲೂ ಸುಮಾರು 25 ವರ್ಷದಿಂದಲೂ ಮಾನ್ಯ ರಾಮಕೃಷ್ಣ ಹೆಗಡೆಯವರ ಪರಿಚಯು, ವಿಶ್ವಾಸ ಎಲ್ಲಾ ಇದೆ. ಅವರು ವಿಧಾನ ಪರಿಷತ್ ನಲ್ಲಿದ್ದಾಗ ನಾನು ಮತವನ್ನು ಕೊಟ್ಟಿದ್ದೇನೆ. ಅವರನ್ನು ಗೆಲ್ಲಿಸಿದ್ದೇನೆ, ಆ ಪ್ರಶ್ನೆ ಬೇರೆ ಅದು ಒಂದೆ. ಪಾಪ ತಮ್ಮ ನಿಷ್ಠೆ ಬೇಕಾದರೆ ನಾನು ಒಪ್ಪುತ್ತೇನೆ.

ಉಪಾಧ್ಯಕ್ಷರು : ನೀವು ಆಕಡೆ ನೋಡಬೇಡಿ.

ಶ್ರೀ ವಾಟಾಳ್ ನಾಗರಾಜ್ : ದೇಶಪಾಂಡೆಯವರು, ನಾಗಮಾರಪಲ್ಲಿಯವರು, ಅನಂತ್ ನಾಗ್ ಅವರು, ನಿಷ್ಠೆ ಬಗ್ಗೆ ನಾನು ಬಹಳ ನಿಜವಾಗಿ ಒಪ್ಪುತ್ತೇನೆ; ಮೆಚ್ಚುತ್ತೇನೆ. ಹಾಗೆ ಇರಬೇಕು, ತಾವು. ಅದನ್ನು ಬಿಟ್ಟು ತಾವು ದಾರಿ ತಪ್ಪಬಾರದು ಮಾನ್ಯ ಜಿಗಜಿಣಗಿಯವರು ನಿಮ್ಮ ಬಗ್ಗೆ ನನಗೆ ಬಹಳ ನಂಬಿಕೆ ಇದೆ.

ಉಪಾಧ್ಯಕ್ಷರು : ವಾಟಾಳ್ ನಾಗರಾಜ್ ಅವರೇ, ತಾವು ಯಾವ ಕಡೆ ನೋಡಿ ಮಾತನಾಡುತ್ತಿದ್ದೀರಿ ? ತಾವು ಮುಗಿಸಿಬಿಡಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೆ, ನಮ್ಮಲ್ಲಿ ಭಾಗ ಮಾಡುವುದಕ್ಕೆ ಹೋಗುತ್ತಿದ್ದಾರೆ. ಯಾವಾಗಲೂ ನಾವೆಲ್ಲಾ ಜನತಾದಳದಲ್ಲಿರತಕ್ಕವರು. ಮಾನ್ಯ ರಾಮಕೃಷ್ಣ ಹೆಗಡೆಯವರು ಪಾರ್ಟಿ ಬಿಟ್ಟು ಹೋದ ಮೇಲೆ ನಾವ್ಯಾರೂ ಪಾರ್ಟಿ ಬಿಟ್ಟು ಹೋಗಿಲ್ಲ. ನಾವು ಪಾರ್ಟಿಗೆ ನಿಷ್ಠೆಯಿಂದ ಇರತಕ್ಕವರು. ಅವರ ಜೊತೆ ವೈಯುಕ್ತಿಕವಾದ ಸ್ನೇಹ ನಿಮಗೂ ಇದೆ, ನಮಗೂ ಇದೆ. ಬೇರೆ ಎಲ್ಲರಿಗೂ ಇದೆ. ಅದರ ಅರ್ಥ ರಾಜಕೀಯವಾಗಿ ಸ್ನೇಹ ಇಟ್ಟುಕೊಂಡಿದ್ದೇವೆ ಎನ್ನತಕ್ಕ ಭಾವನೆ ನೀವು ತರಬಾರದು. ನಮ್ಮಲ್ಲಿ ಒಡಕು ತರತಕ್ಕದ್ದು ಸರಿಯಲ್ಲ. ನಾವೆಲ್ಲಾ ಜನತಾ ದಳದಲ್ಲಿ ನಿಷ್ಠಾವಂತರಾಗಿರುವವರು.

ಉಪಾಧ್ಯಕ್ಷರು : ತಾವು ಮುಗಿಸಿ ಬಿಡಿ, ನೀವು ಆಕಡೆ ನೋಡಬೇಡಿ. ಈ ಕಡೆ ನೋಡಿ ಮಾತನಾಡಿ .

ಶ್ರೀ ವಾಟಾಳ್ ನಾಗರಾಜ್ : ತಮ್ಮ ಕಡೆ ನೋಡುತ್ತೇನೆ. ನಾನು ತಮ್ಮನ್ನು ಬಿಟ್ಟು ಬೇರೆ ಕಡೆ ನೋಡುವುದಿಲ್ಲ. ಈ ನಿಷ್ಠೆ ಬಗ್ಗೆ ಮಾನ್ಯ ಸೋಮಶೇಖರ್ ಅವರು ಏನು ಹೇಳಿದರು, ನಾನು ಅದನ್ನು ತಪ್ಪು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ನನಗೆ ಬಂದಿರುವ ವರ್ತಮಾನದ ಪ್ರಕಾರ..

ಶ್ರೀ ಎಸ್ . ಕೃಷ್ಣಪ್ಪ: ಇವರಿಗೆ ಏನೇನೋ ವರ್ತಮಾನ ಬರುತ್ತದೆ. ಅದನ್ನೆಲ್ಲಾ ಇಲ್ಲಿ ಹೇಳಿಕೊಂಡು ಹೋಗುತ್ತೀರಾ ?

ಶ್ರೀ ವಾಟಾಳ್ ನಾಗರಾಜ್ : ನಾನು ಆಕಡೆ ನೋಡುವುದಿಲ್ಲ ಉಪಾಧ್ಯಕ್ಷರೆ, ತಮ್ಮ ಕಡೆ ನೋಡುತ್ತೇನೆ.

ಶ್ರೀ ಎಲ್ ಆರ್. ಶಿರಾಮೇಗೌಡ: ಮಾನ್ಯ ಉಪಾಧ್ಯಕ್ಷರೆ, ಇವರಿಗೆ ಬರುವ ವರ್ತ ಮಾನಕ್ಕೆ ಬೇರೆಯವರು ಹೋಣೆ ಯೇ ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕರೆ, ಈ ಅವಿಶ್ವಾಸ ನಿರ್ಣಯ ಮಂಡನೆ ಆದ ನಂತರ ಅಲ್ಲಿಯವರೆಗೂ ಯಾರ ಮೇಲೂ ಏನೂ ಕ್ರಮವನ್ನು ತೆಗೆದುಕೊಳ್ಳ ಭಾರದು ಅವಿಶ್ವಾಸ ನಿರ್ಣಯ ಮಂಡನೆ ಆದ ನಂತರ, ಚರ್ಚೆ ಮುಗಿದ ನಂತರ ದೇಶಪಾಂಡೆಯವರನ್ನು , ನಾಗಭೂರಪಲ್ಲಿಯವರನ್ನು, ಜಿಗಜಿಣಗಿಯವವರನ್ನು, ಅನಂತ್‌ನಾಗ್ ಅವರನ್ನು ಸೋಮಶೇಖರ್ ಅವರನ್ನು ಹೊಗಿ ಹಾಕುವುದು ಸತ್ಯ.

ಶ್ರೀ ಗುರಪಾದಪ್ಪ ನಾಗಮಾರಪಲ್ಲಿ : ನಿಮಗೆ ಏಕೆ ಈ ಚಿಂತೆ ?

ಶ್ರೀ ವಾಟಾಳ್ ನಾಗರಾಜ್ ಆದ್ದರಿಂದ ಇವತ್ತು ನೀವು ಮತದಾನದಲ್ಲಿ ಆಕಡೆ ಭಾಗವಹಿಸುವ ಬದಲು ಈ ಕಡೆ ದಯಮಾಡಿ ಬನ್ನಿ.

ಶ್ರೀ ಆರ್ ವಿ. ದೇಶಪಾಂಡೆ : ಮಂತ್ರಿ - ಮಂಡಲದಲ್ಲಿ ನಾನು ಇದ್ದೇನೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿಶ್ವಾಸ ಇದೆ ಎಂದು ಇದ್ದೇನೆ. ಅಲ್ಲಿಯ ತನಕ ಅವರಿಗೆ ವಿಶ್ವಾಸ ಇರುತ್ತದೆ ಅಲ್ಲಿಯವರೆಗೆ ನಾನು ಮಂತ್ರಿಮಂಡಲದಲ್ಲಿ ಇರುತ್ತೇನೆ. ಮುಖ್ಯಮಂತ್ರಿಗಳಿಗೆ ಹೊರಗೆ ಹಾಕುವ ಅಧಿಕಾರ ಸಹ ಇದೆ, ಇಲ್ಲ ಎಂದು ಹೇಳಲಿಕ್ಕೆ ಬರುವುದಿಲ್ಲ, ನಾನು ರಾಜೀನಾಮೆ ಕೊಡುವು ಅಧಿಕಾರ ಇದೆ. ಆದರೆ ನನಗೆ ಏನು ಕಾಳಜಿ ಆಗುತ್ತದೆ ಎಂದರೆ ಮಾನ್ಯ ವಾಟಾಳ್ ನಾಗರಾಜ್ ಅವರಿಗೆ ನಮ್ಮ ಬಗ್ಗೆ ಏಕೆ ಇಷ್ಟು ಚಿಂತೆ. ತಾವು ಬಹಳ ಯುನೈಟೆಡ್ ಆಗಿದ್ದೇವೆ, ತಾವು ಸ್ಟೇಟಮೆಂಟ್ ನೋಡುಲಿಲ್ಲವೇನು ? ಮಾನ್ಯ ಜೆ.ಎಚ್. ಪಟೇಲ್ ಅವರ ಸರ್ಕಾರ ಮೂರೂವರೆ ವರ್ಷ ಇರುತ್ತದೆ, ನಾವು ಒಗ್ಗಟ್ಟಾಗಿ ಇರುತ್ತೇವೆ, ನಾವು ಒಗ್ಗಟ್ಟಾಗಿ ಕೆಲಸ ಮಾಡುತ್ತೇವೆ ಎಂದು ಹೇಳಿದ್ದೇವೆ ಅದನ್ನು ಬನೀವು ಏಕೆ ಹೇಳಲಿಲ್ಲ ? ಅದನ್ನು ನೀವು ಹೇಳಬೇಕಾಗಿತ್ತು.

ಉಪಾಧ್ಯಕ್ಷರು : ತಾವು ಮುಗಿಸಿಬಿಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇನ್ನು ಮೂರು ನಿಮಿಷದಲ್ಲಿ ನಾನು ಮಾತು ಮುಗಿಸುತ್ತೇನೆ. ಹೆಗಡೆಯವರಿಂದ ದಳಕ್ಕೆ ಹಾನಿ ಇಲ್ಲ - ಸಿದ್ದರಾಮಯ್ಯ. ಉದ್ಘಾಟನೆಯಿಂದ ದಳಕ್ಕೆ ಹಾನಿ - ದೇಶಪಾಂಡೆ. ಇದೆಲ್ಲಾ ಪತ್ರಿಕೆಯಲ್ಲಿ ಬಂದಿದೆ ನೀವು ಹೇಳಿ. ದಳಕ್ಕೆ ಹಾನಿ ಇಲ್ಲ ಹೆಗಡೆಯವರದಿಂದ ಎಂದು .

ಶ್ರೀ ಸಿದ್ದರಾಮಯ್ಯ : ಪತ್ರಿಕೆ ಹೇಳಿಕೆಗಳನ್ನು ಹೇಳಿ ಇಲ್ಲಿ ಭಾಷಣ ಮಾಡಿ ಈ ತರಹ ಎಲ್ಲಾ ಮಾಡಿ ಅವರು ದಾರಿ ತಪ್ಪಿಸಿಬಿಟ್ಟಿದ್ದಾರೆ. ನಮ್ಮ ಹತ್ತಿರ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ನಾವೆಲ್ಲರೂ ಕೂಡ ಒಟ್ಟಾಗಿದ್ದೇವೆ. ಸರ್ಕಾರದ ಮೂರೂವರೆ ವರ್ಷ ಇರುತ್ತದೆ. ನೀವು ಎಷ್ಟೇ ಈ ತರಹದ ಮಾತುಗಳನ್ನು ಆಡಿದರೂ ಕೂಡ ನೀವು ಈ ತರದ ಮಾತುಗಳನ್ನು ಆಡಿ ತೃಪ್ತಿ ಪಟ್ಟುಕೊಳ್ಳಬೇಕೇ ಹೊರತು ಇದರಿಂದ ಏನೇನೂ ಆಗುವುದಿಲ್ಲ. ಯಾವ ಬದಕು ಬುದ್ಧಿಯನ್ನೂ ಮಾಡುವುದಕ್ಕೆ ಆಗುವುದಿಲ್ಲ. ಇದರಲ್ಲಿ ಯಾವುದೇ ಭಿನ್ನಾಬಿಪ್ರಾಯ ತರುವುದಕ್ಕೆ ನೀವು ಎಷ್ಟೇ ಪ್ರಯತ್ನ ಪಟ್ಟರೂ ಕೂಡ ಅಥವಾ ಯಾರೇ ಪ್ರಯತ್ನ ಪಟ್ಟರೂ ಕೂಡ ಯಾವ ಪತ್ರಿಕೆಯವರು ಪ್ರಯತ್ನ ಪಟ್ಟರೂ ಸಾಧ್ಯ ಇಲ್ಲ.

ಉಪಾಧ್ಯಕ್ಷರು : ತಾವು ಮುಗಿಸಿ.

ಶ್ರೀ ಕೆ.ಎಂ. ಕೃಷ್ಣ ಮೂರ್ತಿ : ಕರಿ ಕೊಡಲಿಗೆ ಗುದ್ದ ಬೀಳುವುದಿಲ್ಲ. ನಾವೆಲ್ಲ ಗುದ್ದ.

ಶ್ರೀ ವಾಟಾಳ್ ನಾಗರಾಜ್ : ಈಗ ನಾನು ಅವರ ಅಧಿಕಾರವನ್ನು ನಿಂತು ಹಾಕಬೇಕು ಎನ್ನತಕ್ಕ ಉದ್ದೇಶ ನನಗೆ ಇಲ್ಲದೇ ಇದ್ದರೂ ಅವರು ಉಳಿದುಕೊಳ್ಳುವದಾದರೆ ಉಳಿದು ಕೊಳ್ಳಲಿ ನಾವು ಅವಿಶ್ವಾಸ ನಿರ್ಣಯ ಮಂಡನೆ ಮಾಡಿದ ಮೇಲೆ. ಒಂದು ಮಾತು ತಾವು ಒಪ್ಪುತ್ತೀರಿ. ನಿಷ್ಠೆ ಬಗ್ಗೆ ನಾವು ಹೇಗೆ ಇರಬೇಕು ? ನಿಷ್ಠೆ ಅಂದರೆ......

ಉಪಾಧ್ಯಕ್ಷರು : ನೀವು ಮಾತನಾಡಿದ್ದೇ ಮಾತನಾಡಿಕೊಂಡು ಹೋದರೆ ಹೇಗೆ ? ದಯಮಾಡಿ ಮುಕ್ತಾಯ ಮಾಡಬೇಕು.

(ಗೊಂದಲ)

ಶ್ರೀವಾಟಾಳ್ ನಾಗರಾಜ್ : ನಾಯಿಗಾದರೂ ನಿಷ್ಠೆ ಇದೆ. ಆದರೆ ವ್ಯಕ್ತಿಗಳಿಗೆ ನಿಷ್ಠೆ ಇಲ್ಲ ಎಂದರೆ ನಾವೆಲ್ಲಿ ಹೋಗಬೇಕು ಇವತ್ತಿನ ದಿನ ? ಅಲ್ಲಿ ಅವರಿಂದ ಅಧಿಕಾರ ಪಡೆದು ನಾನು ಯಾರನ್ನೂ ಬೇದ ಭಾವನೆ ಮಾಡುತ್ತಿಲ್ಲ. ನನಗೆ ಪ್ರಧಾನ ಮಂತ್ರಿಗಳ ಬಗ್ಗೆ ಗೌರವ ಇದೆ, ಹೆಗಡೆಯವರ ಬಗ್ಗೆ ಗೌರವ ಇದೆ. ನಾನು ಅವರ ಬಗ್ಗೆ ಒಂದು ಮಾತ ಚಕಾರ ಎತ್ತುತ್ತಿಲ್ಲ. ಆದರೆ ನೀವೆಲ್ಲಾ ಅವರ ಫೋಟೋವನ್ನು ಇಟ್ಟು ಪಾದ ಪೂಜೆ ಮಾಡಿ, ಅವರಿಗೆ ಕೈಯುಗಿದು ಆಶೀರ್ವಾದ ಪಡೆದ ಮೇಲೆ ಅವರನ್ನು ಹೊರಕ್ಕೆ ದೂಡಿದಿರಿ. ಇದು ನಿಷ್ಠೆಯೇ ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಯಾರು ಯಾರಿಂದಲೂ ಅಧಿಕಾರ ಪಡೆದಿಲ್ಲ. ಈ ರಾಜ್ಯದ ಜನರಿಗಾಗಿ ನಿಷ್ಠೆ ಇದೆ, ವ್ಯಕ್ತಿ ನಿಷ್ಠ ಇರಬೇಕಾದ್ದು ನಿಮಗೆ. ನಮ್ಮ ಪಕ್ಷದಲ್ಲಿ ವ್ಯಕ್ತಿ ನಿಷ್ಠೆ ಯಾರಿಗೂ ಇಲ್ಲ, ಸಿದ್ಧಾಂತಕ್ಕೆ ನಿಷ್ಠೆ ಇದೆ, ಕಾರ್ಯ ಕ್ರಮಕ್ಕೆ ನಿಷ್ಠೆ ಇದೆ, ಮತ್ತು ರಾಜ್ಯದ ಜನರಿಗೋಸ್ಕರ ನಿಷ್ಠೆ ಇದೆಯೇ ಹೊರತು ಬೇರೆ ಯಾವುದೇ ಒಬ್ಬ ವ್ಯಕ್ತಿಗೋಸ್ಕರ ಸದಸ್ಯರಿಗೋಸ್ಕರ, ಎಂ.ಎಲ್. ಎ. ಗೋಸ್ಕರ ನಿಷ್ಠೆ ಇಲ್ಲ. ಇದು ನಮ್ಮ ಸಿದ್ಧಾಂತವಾಗಿದೆ. ನಿಮಗೆ ಬೇರೆ ಸಿದ್ಧಾಂತವಿದೆ. ನೀವು ಯಾರಿಗೆ ನಿಷ್ಠೆ ತೋರಿಸಬೇಕೋ ಅವರಿಗೆ ತೋರಿಸಿ.

ಶ್ರೀ ವಾಟಾಳ್ ನಾಗರಾಜ್ ; ನಾನು ಸಿದ್ದರಾಮಯ್ಯನವರ ಬಗ್ಗೆ ನಗುನಗುತ್ತಾ, ವಿಶ್ವಾಸದಿಂದ ಮಾತನಾಡುತ್ತೇನೆ, ಆದರೆ, ಅವರು ಸಿಟ್ಟಿಗೇಳುತ್ತಿದ್ದಾರೆ. ತಾವು ಸಿಟ್ಟಿಗೇಳಬೇಡಿ. ನಿಮ್ಮ ಒಗ್ಗಟ್ಟನ್ನು ಮುರಿಯಬೇಕೆಂದು ನಾನು ಹೇಳುತ್ತಿದ್ದಾರೆ. ತಾವು ಸಿಟ್ಟಿಗೇಳ ಬೇಡಿ. ನಿಮ್ಮ ಒಗ್ಗಟ್ಟನ್ನು ಮುರಿಯಬೇಕೆಂದು ನಾನು ಹೇಳುತ್ತಿಲ್ಲ, ಒಗ್ಗಟ್ಟಿನಿಂದಿರಿ. ಆದರೆ, ನಿಮ್ಮ ಮನೆ ಮುರಿಯಯತ್ತಿದೆಯೆಂದು ನಾನು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು : ನಿಮಗೆ ಇನ್ನು ಯಾವ ರೀತಿ ಹೇಳಬೇಕೆಂದು ನನಗರ್ಥವಾಗುತ್ತಿಲ್ಲ ದಯಮಾಡಿ ತಮ್ಮ ಮಾತನ್ನು ಮುಗಿಸಬೇಕು.

ಶ್ರೀ ಎಸ್. ಕೃಷ್ಣಪ್ಪ: ಉಪಾಧ್ಯಕ್ಷರೆ, ಅನುಚಿತವಾದ, ಅಸಂಬದ್ಧವಾದ, ಅನಾವಶ್ಯಕವಾದ ಮಾತುಗಳನ್ನಾಡುವುದಕ್ಕೆ ಈ ಸದನ ಬೇಕೇ? ಮೊದಲು ಇದನ್ನು ತಪ್ಪಿಸಿ ಚರ್ಚೆಯ ಮೇಲೆ ಮುಖ್ಯಮಂತ್ರಿಗಳಿಂದ ಉತ್ತರ ಕೊಡಿಸಿ ಸದನದ ಕಲಾಪವನ್ನು ಮುಕ್ತಾಯಗೊಳಿಸಿ.

ಶ್ರೀ ವಾಟಾಳ್ ನಾಗರಾಜ್: ಇಲ್ಲಿ ಅವಿಶ್ವಾಸ ನಿರ್ಣಯ ಮಂಡಿಸಿ ಕರ್ಪೂರ ತಂದು ಮಂಗಳಾರತಿ ಮಾಡಿ ಇವರಿಗೆ ನಾವು ಹರಿಕಥೆ ಹೇಳಬೇಕೆ ? ಅವಿಶ್ವಾಸವೆಂದರೆ ಏನು ? ಸರ್ಕಾರದಲ್ಲಿರುವ ಭೇದ-ಭಾವ, ವಿಶ್ವಾಸವಿಲ್ಲದಿರುವುದು, ಗುಂಪುಗಾರಿಕೆ, ನಿಷ್ಠೆ ಎಲ್ಲದರ ಬಗ್ಗೆಯೂ ಹೇಳಬೇಕಾಗುತ್ತದೆ. ಅದೆಲ್ಲವನ್ನೂ ಹೇಳಲಿಲ್ಲವೆಂದರೆ ಹೇಗೆ? ಆದುದರಿಂದ, ನನಗನ್ನಿಸುತ್ತದೆ: ನಾನು ಈ ಮೊದಲೇ ಹೇಳಿದಂತೆ ನನಗೆ ಯಾರ ಬಗ್ಗೆಯೂ ದ್ವೇಷವಿಲ್ಲ. ಪ್ರಾಮಾಣಿಕವಾಗಿ ಯಾರೋ ಒಬ್ಬರು ನಮ್ಮ ನಾಯಕರೆಂದು ಹಗಲು -ರಾತ್ರಿ ಝುಂಡಾ ಹಿಡಿದು ಹಿಂದೆ- ಮುಂದೆ ಓಡಾಡುತ್ತೇವಲ್ಲಾ, ಹಾಗೇ ಅಂತಹ ನಾಯಕರನ್ನು ಮರೆತಿದ್ದಾರೆ, ನಾಳೆ ದೇವೇಗೌಡರನ್ನೂ ಇವರು ಮರೆಯುತ್ತಾರೆ. ಇದರ ಬಗ್ಗೆ ಚಿಂತನೆಯಾಗಬೇಡವೇ? ನಿಷ್ಠೆ ಇದ್ದರೆ ನಾಯಿ ನಿಷ್ಠೆ ನಿಮಗಿರಬೇಕೇ ಹೊರತು, ವ್ಯಕ್ತಿ ನಿಷ್ಠೆ ಅಲ್ಲವೆಂಬ ಮಾತನ್ನು ಹೇಳುತ್ತಿದ್ದೇನೆ.